ಪುಸ್ತಕ ಪ್ರಪಂಚ

ಜನವರಿ- ೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೧

ಹೊಸ ವರ್ಷದ ಶುಭಾಶಯಗಳು

"ಪುಸ್ತಕ ಪ್ರಪಂಚ" ಮಾಸಪತ್ರಿಕೆ ತನ್ನ ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರಿದೆ.

—ಸಂಪಾದಕ

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೬ ಸಂಚಿಕೆ ೪

ಜನವರಿ-೧೯೯೬

ಮುಖ ಚಿತ್ರ :
ನೊಬೆಲ್ ಪ್ರಶಸ್ತಿ ವಿಜೇತ ಕವಿ :
ಶೀಮಸ್ ಹೀನಿ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ : ರೂ. 6

ವಾರ್ಷಿಕ ಚಂದಾ : ರೂ. 60

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 400

ಸಂಸ್ಥೆಗೆ : ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 006

ಆಗೋ, ಮತ್ತೆ ಅದೇ ಗಣರಾಜ್ಯೋತ್ಸವ

ಜನವರಿ ಇಪ್ಪತ್ತಾರು! ಮತ್ತೆ ಗಣರಾಜ್ಯೋತ್ಸವವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅದ್ದೂರಿಯಿಂದ ಆಚರಿಸುತ್ತವೆ. ಮಂತ್ರಿಗಳಿಗೆ ಮತ್ತು ಭಾರಿ ಮನುಷ್ಯರಿಗೆ ಸಂಭ್ರಮದ ದಿನ. ಸರ್ಕಾರಿ ನೌಕರರಿಗೆಲ್ಲ ಖುಷಿಯ ದಿನ. ದೇಶದ ಪ್ರಜೆಗಳಲ್ಲಿ ಶೇಕಡ ಒಬ್ಬರಿಗೊ ಇಬ್ಬರಿಗೊ ಆ ದಿನ ಕೆಲಸವಿಲ್ಲದೆ ಸಂಬಳ ಸಿಗುತ್ತದೆ. ಈ ನೌಕರ ಆರಾಮವಾಗಿ ಮನೆಯಲ್ಲಿಯೋ, ಸಿನಿಮಾ ಮಂದಿರದಲ್ಲಿಯೋ ಅಥವಾ ಪ್ರವಾಸದಲ್ಲಿಯೋ ಕಾಲ ಕಳೆದರೆ ಉಳಿದ ತೊಂಬತ್ತೊಂಬತ್ತು ಜನ ಹಿಂದಿನ ಕಾಲದ ಗಾಣದೆತ್ತಿನಂತೆ ಹೊಲ ಮನೆಗಳಲ್ಲಿ ಬೆವರು ಹರಿಸುತ್ತಾರೆ. ಕಾರ್ಮಿಕರಿಗೂ ರಜೆಯ ಸೌಲಭ್ಯವುಂಟು; ರೈತರಿಗೆ ಅದೂ ಇಲ್ಲ.

ರಜ ಸೌಲಭ್ಯದ ದೃಷ್ಟಿಯಿಂದ ಭರತಖಂಡವೊಂದು ಪುಣ್ಯಭೂಮಿ. ಈ ಪುಣ್ಯ ಬೇರಾವ ದೇಶಗಳಿಗೂ ಇಲ್ಲ. ಇದಕ್ಕಾಗಿಯಾದರೂ ಇಲ್ಲಿಯೇ ಮುಂದಿನ ಜನ್ಮ ಎತ್ತ ಬೇಕೆಂದು ನಮ್ಮ ನೌಕರರು ಅನುದಿನ ಪ್ರಾರ್ಥನೆ ಮಾಡಿಯಾರು. ಇಲ್ಲಿ ಜಗತ್ತಿನ ಎಲ್ಲ ಮತಗಳೂ ತಳವೂರಿರುವುದರಿಂದ, ಆ ಎಲ್ಲ ಮತಗಳ ಹಬ್ಬಗಳಿಗೂ ಕೊಡುವ ರಜವನ್ನು ಸರ್ವರೂ ಅನುಭವಿಸುತ್ತಾರೆ. ಆ ವಿಷಯದಲ್ಲಿ ಮಾತ್ರ ಸಮಾನತೆ ಸೌಹಾರ್ದತೆ ಗಳುಂಟು. ಕೇರಳದ ಓಣಂ ಹಬ್ಬದಂತೆ ಯುಗಾದಿ ಹಬ್ಬವನ್ನು ಮುಸ್ಲಿಮ್-ಕ್ರಿಶ್ಚಿಯನ್ನರೂ, ರಂಜಾನ್ ಹಬ್ಬವನ್ನು ಹಿಂದೂ-ಕ್ರಿಶ್ಚಿಯನ್ನರೂ ಆಚರಿಸುವು ದಾದರೆ ರಜ ಕೊಡಬೇಕಾದ್ದೇ. ಹಾಗಿಲ್ಲವಾದರೆ ಸಾರ್ವತ್ರಿಕ ರಜ ಘೋಷಿಸುವುದೇಕೆ? ಪ್ರಧಾನಿ ಸತ್ತಾಗ ಒಂದು ದಿನ ರಜ ಸರಿ. ಅದೂ ಹೆಚ್ಚೇ. ಮೂರ್ನಾಲ್ಕು ದಿನ ರಜಾ ಕೊಡುವುದರಿಂದ ದೇಶಕ್ಕಾಗುವ ನಷ್ಟವನ್ನು ಯಾರಾದರೂ ಲೆಕ್ಕಹಾಕಿ ದ್ದಾರೆಯೆ? ಮೊರಾರ್ಜಿ ದೇಸಾಯಿ ಸತ್ತಾಗ ಒಂದುವಾರ ಇಡೀ ಜನಜೀವನಕ್ಕೆ ಪಾರ್ಶ್ವವಾಯು ಅಮರಿಕೊಂಡಿತು. ಸ್ವಾತಂತ್ರ್ಯದ ದಿನ ರಜ ಉಚಿತವೆಂದು ತೋರ ಬಹುದಾದರೂ, ಗಣರಾಜ್ಯೋತ್ಸವದ ದಿನ ರಜಾ ಏಕೆ? ಗಣರಾಜ್ಯೋತ್ಸವದ ಆಚರಣೆ ಯಿಂದ ಲಭಿಸುವ ಲಾಭವೇನು? ನಿರಾಚರಣೆಯಿಂದ ಸಂಭವಿಸುವ ನಷ್ಟವೇನು? ಈ ಮಾತು ರಾಜ್ಯೋತ್ಸವಕ್ಕೂ ಅನ್ವಯಿಸುತ್ತದೆ.

ಸ್ವಾತಂತ್ರ್ಯ ಪ್ರಾಪ್ತಿಯಿಂದ ಪ್ರಗತಿಗಿಂತ ವಿಗತಿಯೇ ಅಧಿಕವಾಗಿದೆ ಎಂಬುದ ರಲ್ಲಿ ಅನುಮಾನವಿಲ್ಲ. ನೀರಾವರಿ ಸಂಚಾರಿ ಸೌಕರ್ಯಗಳು ಹೆಚ್ಚಿವೆಯಾದರೂ, ಕೃಷ್ಯುತ್ಪನ್ನಗಳಲ್ಲಿ ಸ್ವಸಂಪೂರ್ಣತೆಯನ್ನು ಸಾಧಿಸಿಲ್ಲ; ಆಧುನಿಕ ಕೈಗಾರಿಕೆಗಳು ಬಹುಗುಣಗೊಂಡಿದ್ದರೂ, ನಿರುದ್ಯೋಗ ಸಮಸ್ಯೆ ಬಗೆಹರಿದಿಲ್ಲ; ಶಿಕ್ಷಣಕ್ಷೇತ್ರ ಬಹು ಶತಾಧಿಕವಾಗಿ ವಿಸ್ತಾರಗೊಂಡಿದ್ದರೂ, ಅಜ್ಞಾನ ಮೌಢ್ಯ ನಿರಕ್ಷರತೆಗಳು ಕಡಮೆ ಯಾಗಿಲ್ಲ; ವಿಜ್ಞಾನಿಗಳ ಸಂಖ್ಯೆ ಅನೇಕ ಮುಂದುವರಿದ ರಾಷ್ಟ್ರಗಳಲ್ಲಿರುವ ಸಂಖ್ಯೆಗಿಂತ ಹೆಚ್ಚಾಗಿದ್ದರೂ, ವಿಜ್ಞಾನ ದೇಶ ಖರ್ಚು ಮಾಡುವ ಹಣಕ್ಕೆ ಸಮಸಾಟಿಯಾಗಿ ಬೆಳೆ ದಿಲ್ಲ, ವೈಚಾರಿಕ ಪ್ರಜ್ಞೆಯಾಗಲಿ, ವೈಜ್ಞಾನಿಕ ಮನೋಧರ್ಮವಾಗಲಿ ಸಮಾಜದಲ್ಲಿ ಬೇರೂರಿಲ್ಲ; ಕಾನೂನುಗಳು ಮಿತಿಯಿಲ್ಲದೆ ಉರುಚಿದರೂ, ಬಡವರಿಗೆ ಹಾಗೂ ಮುಗ್ಧ

ರಿಗೆ ಶಾಂತಿರಕ್ಷಣೆಯಿಲ್ಲ; ಪೋಲೀಸು ಇಲಾಖೆ ಸತತವಾಗಿ ಹಿಗ್ಗುತ್ತಿದ್ದರೂ, ದರೋಡೆ ಭ್ರಷ್ಟಾಚಾರಗಳು ಇಳಿಮುಖವಾಗಿಲ್ಲ. ಈ ಪಟ್ಟಿಯನ್ನು ಹೀಗೆಯೇ ಲಂಬಿಸಬಹುದು.

ಈ ದೇಶದಲ್ಲಿ ಸ್ವಾತಂತ್ರ್ಯದ ಸಂಪೂರ್ಣ ಫಲ ಅನುಭವಿಸುವವರಲ್ಲಿ ಮುಖ್ಯರಾದವರು, ಪ್ರಧಾನಿ ಮತ್ತು ಅವರ ಕುಟುಂಬ; ಅವರಾದ ಮೇಲೆ ಕೇಂದ್ರ ಮಂತ್ರಿಗಳು; ರಾಜ್ಯಗಳ ಮಂತ್ರಿಗಳು ಅರ್ಧಂಬರ್ಧ ಫಲಾನುಭವಿಗಳು; ಅವರ ಜತೆಗೆ ಅವರ ಬಂಧು ಬಳಗವಿದ್ದಾರೆ; ಆಡಳಿತ ಪಕ್ಷಗಳ ಜನರು ತಂತಮ್ಮ ಸಾಮರ್ಥ್ಯಕ್ಕನುಗುಣವಾಗಿ ಸ್ವಾತಂತ್ರ್ಯದ ಫಲವನ್ನನುಭವಿಸುತ್ತಾರೆ. ಪ್ರಾಯಶಃ ಎಲ್ಲರಿಗಿಂತ ಹೆಚ್ಚು ಫಲವನ್ನನುಭವಿಸುವವರೆಂದರೆ ನ್ಯಾಯಮೂರ್ತಿಗಳು. ಅವರು ನಡೆದದ್ದೇ ದಾರಿ; ಹೇಳಿದ್ದೇ ಸತ್ಯ; ಕೊಟ್ಟದ್ದೇ ದೇವರ ತೀರ್ಪು. ಅಸಮಾನತೆಯನ್ನು ಪೋಷಿಸುವ ಹಿಂದುತ್ವ ಈ ದೇಶದ ಜೀವನವಿಧಾನವೆಂದರೂ ಒಪ್ಪಿಕೊಳ್ಳಬೇಕು.

ಇವರೆಲ್ಲರನ್ನು ಮೀರಿದ ರಾಷ್ಟ್ರಪತಿಯನ್ನೂ ಸಹ ನಿಯಂತ್ರಿಸುವ ವರ್ಗವೊಂದಿದೆ. ಆ ವರ್ಗ ಲೋಕಾತೀತವೂ ಹೌದು, ಶಾಸನಾತೀತವೂ ಹೌದು, ಸರ್ಕಾರಾತೀತವೂ ಹೌದು. ಕಾವಿ ಬಟ್ಟೆಯೊಂದಿದ್ದರೆ ಸಾಕು, ಅವರು ದೇವತೆಗಳೆ ಆಗಿಬಿಡುತ್ತಾರೆ. ಆ ಕಾವಿಯ ಮರೆಯಲ್ಲಿ ವ್ಯಭಿಚಾರ ಮಾಡಬಹುದು, ಬಡವರನ್ನು ಲೂಟಿ ಮಾಡಬಹುದು, ಅಮಾಯಕ ಜನರನ್ನು ಕೊಲ್ಲಿಸಬಹುದು, ರಾಜಕೀಯ ಕಿತಾಪತಿಯನ್ನು ನಡಸಬಹುದು. ಈ ಕಾವಿಧಾರಿಗಳಲ್ಲಿ ನೂರಕ್ಕೊಬ್ಬನೂ ಅಧ್ಯಾತ್ಮ ಸಾಧನೆ ಮಾಡಿದವರಿಲ್ಲ. ರಾಷ್ಟ್ರಶಕ್ತಿಯ ಸಂಕೇತವಾಗಿರುವ ಸರ್ವೋನ್ನತಾಧಿಕಾರಿಗಳು ಸರ್ಕಾರಿ ವೆಚ್ಚದಲ್ಲಿ ಅವರ ಮಠಗಳಿಗೆ ಹೋಗಿ, ಅವರ ಪಾದ ತೊಳೆದು, ತೀರ್ಥಪಾನ ಮಾಡುತ್ತಾರೆ. ರಾಜ್ಯಾಂಗದ ಪ್ರಕಾರ ಭರತಖಂಡ ಮತಾತೀತ, ಜಾತ್ಯತೀತ (ಸೆಕ್ಯುಲರ್) ರಾಷ್ಟ್ರವಾದರೂ, ರಾಷ್ಟ್ರಪತಿ,ಪ್ರಧಾನಿಗಳು,ಮುಖ್ಯಮಂತ್ರಿಗಳು ಮತ್ತು ನಾಯಕರು ತಂತಮ್ಮ ಕುರ್ಚಿಗಳ ಭದ್ರತೆಗಾಗಿ, ವೋಟು ಸಂಪಾದನೆಗಾಗಿ ಮತೀಯ ಜಾತೀಯ ಮೂಲಭೂತವಾದಿಗಳನ್ನೂ ಉಗ್ರಗಾಮಿಗಳನ್ನು ತೃಪ್ತಿಪಡಿಸುವಲ್ಲಿ ಪಕ್ಷಪಾತ ಧೋರಣೆಯನ್ನೂ, ಅಸಮತೆಯನ್ನೂ ಪೋಷಿಸುತ್ತಾರೆ. ಇದರಿಂದಾಗಿ ರಾಷ್ಟ್ರರಾಜಕೀಯವೊಂದು ಕುದಿಯುವ ಲಾವಾರಸದ ಅಂತರ್ಗತ ಪ್ರವಾಹವಾಗಿದೆ. ರಾಷ್ಟ್ರಪತಿಯಾಗಲಿ ಪ್ರಧಾನಿಯಾಗಲಿ ರಾಜ್ಯಾಂಗದ ಪ್ರಕಾರ ಕಾವಿಶಾಟಿಧಾರಿಗಳಿಗಿಂತ ಶ್ರೇಷ್ಠರಾದವರು. ಅವರು ಮಠಗಳಿಗೆ ಹೋಗಬಾರದು; ಮಠಗಳೇ ರಾಷ್ಟ್ರಪತಿ ಅಥವಾ ಪ್ರಧಾನಿ ನಿವಾಸಕ್ಕೆ ಹೋಗಬೇಕು. ಖಾಸಗಿಯಾಗಿ ಪಾದಪೂಜೆ, ಪ್ರದಕ್ಷಿಣೆ, ಪ್ರಸಾದ ಸ್ವೀಕಾರೋತ್ಸವ ನಡೆಯಬೇಕೇ ಹೊರತು ಸಾರ್ವಜನಿಕವಾಗಿಯಲ್ಲ. ಒಂದು ಪಕ್ಷ ಅವರು ಮಠ ಆಶ್ರಮ ದೇವಾಲಯಗಳಿಗೆ ಹೋದರೂ ಹೋಗಲಿ ಎಂದು ರಿಯಾಯಿತಿ ನೀಡಬಹುದೆಂದಿಟ್ಟುಕೊಳ್ಳೋಣ; ಅವರು ಇಡೀ ರಾಷ್ಟ್ರಕ್ಕೆ ಸೇರಿದವರಾದ್ದರಿಂದ, ಚರ್ಚು ಮಸೀದಿ ಗುರುದ್ವಾರಗಳಿಗೂ ಹೋಗಿ ಪಾದಪೂಜೆ ಮಾಡಿ ಬರಬೇಕು; ಉರುಳುಸೇವೆ ಪೂರೈಸಬೇಕು ಅಥವಾ ಕಾವಿಧಾರಿಗಳು ರಾಷ್ಟ್ರಪತಿಗಿಂತ ಶ್ರೇಷ್ಠರಾದವರೆಂದು ರಾಜ್ಯಾಂಗಕ್ಕೆ ತಿದ್ದುಪಡಿ ತಂದರೊಳಿತೆಂದು ತೋರುತ್ತದೆ. ಒಟ್ಟಿನಲ್ಲಿ ಈ ರಾಷ್ಟ್ರ ಸೆಕ್ಯುಲರ್ ಅಲ್ಲವೆಂದು ದೇವರ ಮೇಲೆ ಆಣೆಯಿಟ್ಟು ಹೇಳಬಹುದು.

ಸ್ವಾತಂತ್ರ್ಯ ನಂತರ ಹಳೆಯ ರಾಜಮಹಾರಾಜರು ಹೋಗಿ, ಅಧಿಕ ಸಂಖ್ಯೆಯ ಮಹಾರಾಜರು ಹುಟ್ಟಿಕೊಂಡದ್ದು, ಶ್ರೀಮಂತ ದರಿದ್ರರ ಅಂತರ ದಿನೇ ದಿನೇ ಹೆಚ್ಚುತ್ತಿರುವುದು, ಬಡಕುಟುಂಬದಲ್ಲಿ ಹುಟ್ಟಿದ ಜನ ನಾಯಕರಾದ ನಂತರ ಕೋಟ್ಯಧೀಶ್ವರರಾಗುತ್ತಿರುವುದು, ಆ ನಾಯಕರ ನೆಂಟರಿಷ್ಟರಿಗೂ ಲೂಟಿ ಹಂಚಿಕೆಯಾಗುತ್ತಿರುವುದು, ಹಳೆಯ ಬ್ರಾಹ್ಮಣರಿಗೆ ಬದಲಾಗಿ ನವ ಬ್ರಾಹ್ಮಣರ ವರ್ಗ ಸೃಷ್ಟಿಯಾಗುತ್ತಿರುವುದು ಪ್ರಗತಿಯ ಲಕ್ಷಣಗಳಲ್ಲವೆ? ಸಾಮಾನ್ಯರ ಕಣ್ಣಿಗೆ ಮಣ್ಣೆರಚುವ ದೃಷ್ಟಿಯಿಂದ ಲೋಕಾಯುಕ್ತ ಲೋಕಪಾಲರ ವ್ಯವಸ್ಥೆ ಜಾರಿಗೆ ಬರಬಹುದು. ಆದರೆ ಅವರನ್ನು ಕಾಯುವ ವ್ಯವಸ್ಥೆ ಎಲ್ಲಿದೆ? ಭ್ರಷ್ಟಾಚಾರವನ್ನು ತಡೆಗಟ್ಟಿದ್ದೇನೆಂದು ಮುಖ್ಯಮಂತ್ರಿಗಳು ಅವಾಸ್ತವವನ್ನು ಘೋಷಿಸುವ ಬದಲಾಗಿ ಪ್ರಧಾನಿಯವರಂತೆ ತೆಪ್ಪಗಿರುವುದು ಮೇಲಲ್ಲವೆ? ಏಕೆಂದರೆ ಭ್ರಷ್ಟಾಚಾರದ ಹಣ ದೇಶದಿಂದ ಹೊರಗೆ ಹೋಗುವುದಿಲ್ಲವಷ್ಟೆ. ಎಂದಾದರೊಂದು ದಿನ ಯಾವುದೋ ಮಾರ್ಗದಲ್ಲಿ ಅದು ಹೊರಗೆ ಬರದಿರುತ್ತದೆಯೆ? ಮೌನಂ ಕಲಹಂನಾಸ್ತಿ ಎಂಬ ಸೂಕ್ತಿಯ ಅರ್ಥ ನರಸಿಂಹರಾಯರಿಗೆ ಮನದಟ್ಟಾಗಿರುವಂತೆ ಈ ದೇಶದಲ್ಲಿ ಇತರ ನಾಯಕರಿಗೆ ಅರ್ಥವಾದಂತಿಲ್ಲ.

ನೆಹರೂ ನಾಡಿನ ಧೀಮಂತ ದೇಶಾಭಿಮಾನಿ ಪ್ರಾಮಾಣಿಕ ಜನಪ್ರಿಯ ನಾಯಕರಾದರೂ, ಗಾಂಧೀಜಿಯ ನೀತಿಯನ್ನು ಪಾಲಿಸದಿದ್ದುದು ಒಂದು ಕಡೆಯಾದರೆ, ತಮ್ಮ ವ್ಯಕ್ತಿತ್ವದ ಬಲದಿಂದ ಸುಲಭವಾಗಿ ಪರಿಹರಿಸಬಹುದಾದ ಸಮಸ್ಯೆಗಳನ್ನು ಮುಂದೂಡಿದ್ದು ಅವರ ಹ್ಯಾಮ್ಲೆಟ್ ಪ್ರವೃತ್ತಿಗೆ ಸಾಕ್ಷಿಯಾಗಿದೆ. ಸಚ್ಚಾರಿತ್ರದ ಮೂಲಕ ಲೋಕದ ಮಾನ್ಯತೆಗೆ ಪಾತ್ರರಾಗಿದ್ದ ಲಾಲ್‌ಬಹದ್ದೂರ್‌ಶಾಸ್ತ್ರಿಯವರು ರಾಷ್ಟ್ರಕ್ಷೇಮಕ್ಕಾಗಿ ಸಂದಿಗ್ಧ ವಾತಾವರಣದಲ್ಲಿ ಬಹುಬೇಗ ಹುತಾತ್ಮರಾದದ್ದು ದುರ್ದೈವ. ಸರ್ವಾಧಿಕಾರ ಮನೋಭಾವದ ಛಲದ ಚತುರಮತಿಯ ಯಾರನ್ನೂ ನಂಬದ ದಿಟ್ಟೆ ಇಂದಿರಾಗಾಂಧಿ ಭಿಂದ್ರನ್‌ವಾಲರಂಥವರ ಸಹವಾಸದಿಂದ ಹಲವು ಸಮಸ್ಯೆಗಳನ್ನು ಸೃಷ್ಟಿಸಿ, ಭ್ರಷ್ಟಾಚಾರದ ಅಪವಾದಕ್ಕೆ ಗುರಿಯಾದರು. ಉತ್ಸಾಹದ ಚಿಲುಮೆಯಾಗಿದ್ದ ರಾಜೀವಗಾಂಧಿ ಶ್ರೀಲಂಕಾ ತಮಿಳರ ಸಮಸ್ಯೆಯನ್ನು ಮೇಲೆ ಹಾಕಿಕೊಂಡದ್ದಲ್ಲದೆ, ಬೋಫರ್ಸ್ ಹಗರಣದಲ್ಲಿ ಸಿಕ್ಕಿಕೊಂಡರು. ಉಳಿದ ಪ್ರಧಾನಿಗಳು ಜನಮನದಲ್ಲಿ ನೆನಪನ್ನೂರುವಷ್ಟು ಪ್ರಭಾವಶಾಲಿಗಳಾಗಿರಲಿಲ್ಲ. ಔತ್ತರೇಯರ ಅಹಂಪ್ರಜ್ಞೆಯ ವಾತಾವರಣದಲ್ಲಿಯೂ, ಅಲ್ಪಸಂಖ್ಯಾತ ಪಕ್ಷವಾದರೂ, ಪ್ರಧಾನಿಯಾಗಿ, ಕಾಲಕ್ರಮೇಣ ಬಹುಸಂಖ್ಯಾತ ಪಕ್ಷದ ನಾಯಕರಾಗಿ, ನೆಹರೂ ವಂಶದ ಹೊರಗಡೆಯವರಾದರೂ ಒಂದು ಪೂರ್ಣಾವಧಿ ದೇಶವನ್ನಾಳಿದ ಪಿ. ವಿ. ನರಸಿಂಹರಾಯರು ದಾಕ್ಷಿಣಾತ್ಯರ ಮಾನವನ್ನುಳಿಸಿದ್ದಾರೆಂದೇ ಹೇಳಬಹುದು. ಪ್ರಾಯಶಃ ಅಂದಿನಿಂದ ಇಂದಿನವರೆಗೆ ಈ ದೇಶವನ್ನಾಳಿದವರ ಪೈಕಿ ನರಸಿಂಹರಾಯರಂಥ ಚಾಣಾಕ್ಷರು ಕಾಣಲಿಲ್ಲ. ಆದರವರು ಜಾತೀಯತೆ ಮತೀಯತೆ ಭ್ರಷ್ಟಾಚಾರ ಕ್ಷುದ್ರರಾಜಕಾರಣಗಳನ್ನು ನಿರ್ಮೂಲ ಮಾಡುವಲ್ಲಿ ನಿಜಕ್ಕೂ ಯಶಸ್ವಿಯಾಗಿಲ್ಲ. ವಿದೇಶೀಯರ ಆಳ್ವಿಕೆಗೆ ಸಾವಿರಾರು ವರ್ಷಗಳಿಂದ ಒಗ್ಗಿಕೊಂಡಿರುವ ಭಾರತೀಯರು ಮತ್ತೆ ಅದನ್ನೇ ಕೈಬೀಸಿ ಕರೆಯುತ್ತಿದ್ದಾರೆಯೇನೋ ಎನಿಸುತ್ತದೆ.

ನಮ್ಮ ರಾಷ್ಟ್ರ ರಿಪಬ್ಲಿಕ್ ಅಥವಾ ಗಣರಾಜ್ಯವಾಗಿರಬೇಕೆಂದು ರಾಜ್ಯಾಂಗ ಒಪ್ಪಿಕೊಂಡಿದೆ. ಆದರೆ ಗಣರಾಜ್ಯದ ಪರಿಕಲ್ಪನೆ ನಾಯಕರಿಗಿದ್ದಂತಿಲ್ಲ ; ಇದ್ದರೂ ಉದ್ದೇಶಪೂರ್ವಕವಾಗಿ ಅದನ್ನು ಮರೆತಂತಿದೆ. ಗಣರಾಜ್ಯದ ಪರಿಕಲ್ಪನೆಯ ಪ್ರಕಾರ ಪ್ರತಿಯೊಂದು ರಾಜ್ಯಕ್ಕೂ ಸ್ವಾಯತ್ತತಾಧಿಕಾರವಿರಬೇಕು. ಒಂದು ಪಕ್ಷ ರಾಜ್ಯಾಂಗ ದಲ್ಲಿ ಅದಕ್ಕವಕಾಶವಿಲ್ಲ ಎನ್ನುವುದಾದರೆ ಅದು ವಿಪರ್ಯಾಸವಾಗುತ್ತದೆ ; ಆ ವಿಪರ್ಯಾಸ ವನ್ನು ಸರಿಪಡಿಸಬೇಕಾದ್ದು ಬಲ್ಲವರ ಅಥವಾ ಅಧಿಕಾರವುಳ್ಳವರ ಕರ್ತವ್ಯ. ಈಗ ರಾಜ್ಯಗಳು ಕೇಂದ್ರ ಸರ್ಕಾರದ ಚಂಚಗಳಾಗಿವೆ ; ಮುನಿಸಿಪಾಲಿಟಿಗಳಾಗಿವೆ. ಸಣ್ಣ ಪುಟ್ಟ ವಿಚಾರಗಳಿಗೂ ಮುಖ್ಯಮಂತ್ರಿ, ಮಂತ್ರಿಗಳು ಮತ್ತು ಅಧಿಕಾರಿಗಳು ಮಾತ್ರ ವಲ್ಲ, ಜನರು ದೆಹಲಿಗೆ ಓಡಬೇಕಾಗಿದೆ. ತಾಲ್ಲೂಕು ಮಂಡಲಿಯ ಅಧ್ಯಕ್ಷನ ನೇಮಕಕ್ಕೂ ದೆಹಲಿಯ ಒಪ್ಪಿಗೆ ಬೇಕಾಗಿದೆ. ಮೆಲ್ಲ ಮೆಲ್ಲನೆ ರಾಜ್ಯದ ಅಧಿಕಾರವನ್ನು ಕೇಂದ್ರ ಏನೇನೋ ಕುಂಟುನೆಪವೊಡ್ಡಿ ಕಸಿದುಕೊಳ್ಳುತ್ತಿದೆ. ಪ್ರತಿಯೊಂದು ರಾಜ್ಯ ದಲ್ಲಿಯೂ ಎರಡು ಸಮಾನಾಂತರ ಸರಕಾರಗಳು ಅಧಿಕಾರ ಚಲಾಯಿಸುತ್ತಿವೆ. ರಾಜ್ಯದ ನಾಯಕರು ಅಥವಾ ಬುದ್ಧಿಜೀವಿಗಳು ಸ್ವತಂತ್ರವಾಗಿ ಆಲೋಚಿಸಲು, ತಮ್ಮ ಆಲೋಚನೆ ಅನುಭವಗಳನ್ನು ಕಾರ್ಯಗತಗೊಳಿಸಲು ಸಾಧ್ಯವೇ ಇಲ್ಲ. ಹೀಗಾಗಿ ರಾಜ್ಯಗಳ ಪ್ರಗತಿ ಕುಂಠಿತವಾಗುತ್ತಿದೆ. ಕಾಶ್ಮೀರಕ್ಕೆ ಸ್ವಾಯತ್ತತೆ ಬೇಕು, ಬೇರೆ ರಾಜ್ಯಗಳಿಗೆ ಬೇಡವೆ ? ಈ ಅಸಮಾನತೆ ರಾಜ್ಯಾಂಗಕ್ಕೆ ವಿರೋಧವಲ್ಲವೆ ? ಅದರಿಂದಾಗಿ ರಾಜ್ಯಗಳಲ್ಲಿ ಅತೃಪ್ತಿ ಮೂಡುವುದಿಲ್ಲವೆ ? ಅತಿಕೇಂದ್ರೀಕರಣದಿಂದ ಸೋವಿಯಟ್ ಯೂನಿಯನ್‌ಗೆ ಹಾಗೂ ಯುಗೋಸ್ಲಾವಿಯಾಕ್ಕೆ ಏನು ಗತಿ ಒದಗಿತೆಂಬುದನ್ನು ನಾಯಕರು ಯೋಚಿಸಬಾರದೆ ? ರಾಜ್ಯಗಳು ಕೇಂದ್ರದಿಂದ ಸಿಡಿದುಹೋಗದ ರೀತಿ ಯಲ್ಲಿ, ಸಂಯುಕ್ತ ರಾಜ್ಯ ವ್ಯವಸ್ಥೆಯನ್ನೇಕೆ ಒಪ್ಪಿಕೊಳ್ಳಬಾರದು ? ಸ್ವಾಯತ್ತತೆ ಯಿಂದ ಮಾತ್ರ ದೇಶದ ಐಕ್ಯ ಸಾಧ್ಯವೆಂಬುದನ್ನು ನಾಡಿನ ಗಣ್ಯರು ಮನನ ಮಾಡಿಕೊಂಡರೆ ಮೇಲು. ಆಗ ಮಾತ್ರ ರಾಷ್ಟ್ರವನ್ನು ಗಣರಾಜ್ಯವೆಂದು ಕರೆದು ಕೊಂಡದ್ದು ಸಾರ್ಥಕವಾಗುತ್ತದೆ.

ಗಣರಾಜ್ಯ ದಿನಾಚರಣೆಯನ್ನು ಉತ್ಸವದ ಮೂಲಕ ಮುಗಿಸುವ ಬದಲು ದೇಶದ ಜೀವವನ್ನು ಹಿಂಡುತ್ತಿರುವ ಜಾತೀಯತೆ, ಮತೀಯತೆ, ಭ್ರಷ್ಟಾಚಾರ, ವಿಕೃತ ಕೇಂದ್ರೀಕರಣ, ಮೂಲಭೂತ ಮತಾಂಧತೆ, ನಿರಕ್ಷರತೆ ಮೊದಲಾದ ಪಿಡುಗು ಪೆಡಂಭೂತ ವಿಷಜಂತು ಜಿಗಣೆಗಳನ್ನು ನಿರ್ಮೂಲ ಮಾಡುವ ಪ್ರತಿಜ್ಞೆ ಯನ್ನು, ವೈಚಾರಿಕ ಮತ್ತು ವೈಜ್ಞಾನಿಕ ಮನೋಧರ್ಮಗಳ ವಾತಾವರಣವನ್ನು ಸೃಷ್ಟಿಸುವ ಛಲವನ್ನು ತೊಟ್ಟದ್ದಾದರೆ ವ್ಯಷ್ಟಿ ಸಮಷ್ಟಿಗಳಿಗೆ ಮಾತ್ರವಲ್ಲ ಇಡೀ ಜಗತ್ತಿಗೆ ಲೇಸಾಗುತ್ತದೆ. ಭಾರತ ಮುಂದುವರಿದ ರಾಷ್ಟ್ರಗಳಿಗೆ ಸರಿಸಮನಾಗಿ ಬೆಳೆಯುವ ಶಕ್ತಿ ಯನ್ನು ಪಡೆಯುತ್ತದೆಂದು ಆಶಿಸಬಹುದಾಗಿದೆ. ಆಗ ಮಾತ್ರ ಗಣರಾಜ್ಯ ಎಂಬ ಹೆಸರು ಸಾರ್ಥಕವಾಗುತ್ತದೆ. ಗಣರಾಜ್ಯಕ್ಕೆ ಜಯವಾಗಲಿ !

ದೇಜಗೌ

ನೊಬೆಲ್ ಪ್ರಶಸ್ತಿ ವಿಜೇತ ಕವಿ: ಶೀಮಸ್ ಹೀನಿ

ಸಿ. ನಾಗಣ್ಣ

೧೯೯೫ ನೇ ಸಾಲಿನ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ಗಳಿಸಿರುವ ಐರಿಷ್ ಕವಿ ಶೀಮಸ್ ಹೀನಿಯವರ ಸಾಧನೆಯನ್ನು ನೆನೆಯುವಾಗ ಕೆಲವು ಸಂಗತಿಗಳು ಮನಸ್ಸಿಗೆ ಬರುತ್ತವೆ. ಇಂಗ್ಲೆಂಡ್, ಐರ್ಲೆಂಡ್ ಹಾಗೂ ಸ್ಕಾಟ್‌ಲೆಂಡ್ ಒಲೆಗುಪ್ಪೆಯ ಹಾಗೆ ಇರುವ ಪುಟ್ಟ ದ್ವೀಪಗಳು. ಐತಿಹಾಸಿಕವಾದ ಕಾರಣಗಳಿಂದ ಇಂಗ್ಲೆಂಡ್ ಜಗತ್ತಿನ ಗಮನ ಸೆಳೆಯಿತು. ಲಾಗಾಯ್ತಿನಿಂದ ಇಂಗ್ಲಿಷಿನವರ ನೆರಳಿನಲ್ಲಿ ಬದುಕಿ ಬೇಸರಗೊಂಡ ಐರ್ಲೆಂಡಿಗರು ಸಾಂಸ್ಕೃತಿಕವಾಗಿ ತಮ್ಮ ಅನನ್ಯತೆಯನ್ನು ಕಂಡುಕೊಳ್ಳುವ ತುಡಿತಕ್ಕೆ ಒಳಗಾದರು. ಹಾಗಾಗಿ ಹತ್ತೊಂಭತ್ತನೆಯ ಶತಮಾನದ ಕೊನೆಯ ವೇಳೆಗೆ ಈ ಪ್ರಯತ್ನ ಒಂದು ಶೃಂಗಬಿಂದುವನ್ನು ತಲುಪಿತೆಂದು ಹೇಳಬೇಕು. ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಐರ್ಲೆಂಡಿನ ಛಾಪನ್ನು ಮೂಡಿಸುವ ತುರ್ತಿನಿಂದ ಬರಹಗಾರರು ಕಾರ್ಯನಿರತರಾದರು. ಡಬ್ಲ್ಯೂ.ಬಿ. ಏಟ್ಸ್, ಲೇಡಿ ಗ್ರೆಗರಿ ಮುಂತಾದವರು ಆ ಚಳವಳಿಯ ಮುಂಚೂಣಿಯಲ್ಲಿದ್ದ ಚಿಂತಕರು. ಇಂಗ್ಲಿಷ್ ಸಾಹಿತ್ಯದ ವಿಸ್ತಾರವನ್ನು ಕಂಡು ಬೆರಗಾಗಿ ಅವರು ಕೈಕಟ್ಟಿ ಕೂರಲಿಲ್ಲ. ಇಂಗ್ಲಿಷ್ ಭಾಷೆಯನ್ನು ಉಪಯೋಗಿಸುತ್ತಲೇ ಐರಿಷ್ ಕಥನವನ್ನು ಅದರಲ್ಲಿ ಹೇಳಿ ಹೊಸ ದನಿಯ ಉದಯಕ್ಕೆ ಕಾರಣರಾದರು. ಅದರ ಫಲವಾಗಿಯೇ ಐರಿಷ್ ಸಾಹಿತ್ಯ ವೈಶಿಷ್ಟ್ಯತುಂಬಿಕೊಂಡು ತನ್ನ ಅಸ್ತಿತ್ವವನ್ನು ಸ್ಥಾಪಿಸಿತು, ಅಷ್ಟೇ ಅಲ್ಲ, ತಾನು ಕೇವಲ ಇಂಗ್ಲಿಷ್ ಸಾಹಿತ್ಯದ ಮೂಕ ಅನುಯಾಯಿಯಲ್ಲ ಎಂಬುದನ್ನೂ ಸಾಬೀತು ಮಾಡಿತು.

೧೯೮೩ ರಲ್ಲಿ 'ಸಮಕಾಲೀನ ಬ್ರಿಟಿಷ್ ಕಾವ್ಯ' ಎಂಬ ಸಂಕಲನವನ್ನು ಹೊರತರುವ ಸಂದರ್ಭದಲ್ಲಿ ಆ ಸಂಕಲನದ ಸಂಪಾದಕರು ಶೀಮಸ್ ಹೀನಿಯ ಹೆಸರನ್ನು ಬ್ರಿಟಿಷ್ ಕವಿಗಳ ಜೊತೆ ಸೇರಿಸಿದ್ದರು. ಈ ವರ್ಗೀಕರಣವನ್ನು ನಿರಾಕರಿಸಿ ಶೀಮಸ್ ಸಂಪಾದಕನಿಗೆ ೩೩ ಸ್ಟ್ಯಾಂಜಾಗಳ ಒಂದು ಬಹಿರಂಗ ಪದ್ಯ-ಪತ್ರವನ್ನು ಬರೆದರು. ಇಂಗ್ಲೀಷಿನವರು ಹಾಗೂ ಐರ್ಲೆಂಡಿಗರ ಸಂಬಂಧ ಅಷ್ಟು ಸೂಕ್ಷ್ಮವಾದದ್ದು. ತಾವು ಸಂಕಲನದ ಸಂಪಾದಕರಿಗೆ ಬರೆದ ವಿನೂತನವಾದ ಪ್ರತಿಭಟನೆಯ ಪತ್ರದಲ್ಲಿ ಹೀನಿ ಹೀಗೆ ಹೇಳಿದ್ದಾರೆ: "ಒಬ್ಬ ವ್ಯಕ್ತಿಯ ರಾಷ್ಟ್ರವನ್ನು ಅಷ್ಟು ಸಲೀಸಾಗಿ ನಿರ್ಧಾರ ಮಾಡಬಾರದು. ವ್ಯಕ್ತಿಯ ಹೆಸರು ಮತ್ತು ಅವನ ದೇಶ ಬಹಳ ಮುಖ್ಯವಾದ ಸಂಗತಿ

ಗಳು. 'ನನ್ನನ್ನು ಬ್ರಿಟಿಷ್ ಎಂದಿರಾ, ಖಂಡಿತಾ ನಾನು ಬ್ರಿಟಿಷ್ ಅಲ್ಲ; ಯಾಕೋ ಆ ಹೆಸರು ಸರಿ ಕಾಣುವುದಿಲ್ಲ, ಇತಿ ನಿಮ್ಮವ, ಶೀಮಸ್' ಎಂದು ಪತ್ರ ಮುಕ್ತಾಯವಾಗುತ್ತದೆ.

ಪುಟ್ಟ ದ್ವೀಪದ ಜನರ ಸ್ವಾಭಿಮಾನ ಹಾಗೂ ಕೆಚ್ಚಿನ ಪ್ರತೀಕವಾಗಿ, ಏಟ್ಸ್‌ನಂಥ, ಶೀಮಸ್ ಹೀನಿಯಂಥ ಕವಿಗಳು ಹುಟ್ಟಿ ಬರುತ್ತಾರೆ. ಪ್ರತೀಬಾರಿ ನೊಬೆಲ್ ಪ್ರಶಸ್ತಿ ಪ್ರಕಟವಾದಾಗಲೂ ಒಂದಿಲ್ಲೊಂದು ಪುಕಾರು ಕೇಳಿ ಬರುವುದು ಸರ್ವೇಸಾಮಾನ್ಯವಾಗಿದೆ. ಆದರೆ ಈ ಬಾರಿ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ಘೋಷಣೆಯಾದಾಗ ಪ್ರಾಜ್ಞರು ತುಂಬು ಹೃದಯದಿಂದ ಸ್ವೀಡಿಷ್ ಅಕಾಡೆಮಿಯ ಆಯ್ಕೆಯನ್ನು ಸ್ವಾಗತಿಸಿರುವುದನ್ನು ಕಾಣುತ್ತೇವೆ. ಏಕೆಂದರೆ, ದೂರದಲ್ಲಿರುವ ನಮಗೆ 'ಶೀಮಸ್ ಹೀನಿ' ಒಂದು ಅಪರಿಚಿತ ಹೆಸರಿರಬಹುದು, ಆದರೆ ಆಕ್ಸ್‌ಫರ್ಡ್, ಯೂರೋಪು ಹಾಗೂ ಅಮೆರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ಹೀನಿ ಬಹಳ ಪ್ರಸಿದ್ಧರು; ಅದಕ್ಕೆ 'ಫೇಮಸ್ ಶೀಮಸ್' ಎಂದು ಜನರು ಪ್ರಿಯವಾದ ಇನ್ನೊಂದು ಹೆಸರಿಟ್ಟಿದ್ದಾರೆ. ವಸ್ತುಸ್ಥಿತಿಯೆಂದರೆ, ಶೀಮಸ್ ಹೆಸರು, ಕೀರ್ತಿ ಹಾಗೂ ಪ್ರಚಾರಗಳನ್ನು ಬಯಸದ ವ್ಯಕ್ತಿ. ಜಗತ್ತಿನ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರತರಾದ ಹೀನಿ ಬಿಡುವು ಸಿಕ್ಕಾಗಲೆಲ್ಲ ನಿಸರ್ಗದ ಸಾನ್ನಿಧ್ಯದಲ್ಲಿ ಆಗಂತುಕನಂತೆ ವಿಹರಿಸುತ್ತಾರೆ. ನೊಬೆಲ್ ಪ್ರಶಸ್ತಿ ಗೆದ್ದ ಸಂಗತಿಯನ್ನು ಅವರಿಗೆ ತಿಳಿಸಬೇಕೆಂದಾಗ ಹೀನಿ ಗ್ರೀಸ್ ದೇಶದ ಗ್ರಾಮಾಂತರದಲ್ಲಿ ಅಲೆಯುತ್ತಿದ್ದರು. (ಗ್ರೀಸ್ ಮತ್ತು ಇಟಲಿಗಳಲ್ಲಿ ಅಂಡಲೆಯುವುದೆಂದರೆ ಕವಿಗಳಿಗೆ ಪಂಚಪ್ರಾಣವಷ್ಟೆ.)

ಹೀಗೆ ತನ್ನಷ್ಟಕ್ಕೆ ತಾನು ಬದುಕಲು ಹಂಬಲಿಸುವ ಶೀಮಸ್ ಹೀನಿ ಎಷ್ಟು ಪ್ರಸಿದ್ಧರೆಂದರೆ ಉತ್ತರ ಐರ್ಲೆಂಡಿನ ಬೆಲ್‌ಫಾಸ್ಟ್ ನಗರದ ಬೀದಿಯಲ್ಲೊಮ್ಮೆ ನಡೆದು ಹೋಗುವಾಗ ಜನಜಂಗುಳಿಯ ಮಧ್ಯೆ ಒಬ್ಬ ಟ್ಯಾಕ್ಸಿ ಚಾಲಕ ಇವರನ್ನು ಕಂಡು 'ಮಿಸ್ಟರ್ ಹೀನಿ, ಮಿಸ್ಟರ್ ಹೀನಿ' ಎಂದು ಕೂಗಿಕೊಂಡು ಹತ್ತಿರ ಓಡಿ ಬಂದು ಮಾತನಾಡಿಸಿ ಹಸ್ತಾಕ್ಷರ ಪಡೆದು ಹೋದನಂತೆ. ಈ ಕಾರಣದಿಂದ ಐರ್ಲೆಂಡಿನಲ್ಲಿ ಹೀನಿಯನ್ನು 'ಜನತೆಯ ಕವಿ'ಯೆಂದು ಕರೆಯುತ್ತಾರೆ. ವಿಶ್ವವಿದ್ಯಾನಿಲಯಗಳ ಕಾವ್ಯಪೀಠಗಳನ್ನು ಅಲಂಕರಿಸಿ ಮಾತನಾಡುವಾಗ ಬೀದಿಗಳಲ್ಲಿ ಜನಸಾಮಾನ್ಯರ ಪ್ರೀತಿಯನ್ನು ಅನುಭವಿಸಿ ಅವರೊಡನೆ ವ್ಯವಹರಿಸುವಾಗ ಹೀನಿ ಒಂದೇ ಬಗೆಯ ಸಮಚಿತ್ತತೆಯನ್ನು ಹೊಂದಿರುತ್ತಾರೆ.

ಒಮ್ಮೆ ದೂರದರ್ಶನದಲ್ಲಿ ಹೀನಿಯವರ ಸಂದರ್ಶನ ನಡೆದಿತ್ತು. ತಮ್ಮ ಸ್ವರಚಿತ ಕವನಗಳನ್ನು ಅವರು ಓದಬೇಕಾಗಿತ್ತು. ತಮ್ಮ ಒಂದೆರಡು ಕವನಗಳನ್ನು ಓದಿದ ನಂತರ ಅವರು ಕ್ಯಾಮರಾದತ್ತ ಮುಖ ಮಾಡಿ 'ನನ್ನ ಕವನಗಳು ಒತ್ತಟ್ಟಿಗಿರಲಿ, ಈಗ ದೊಡ್ಡ ದೊಡ್ಡ ಕವಿಗಳ ಕವನಗಳನ್ನು ಓದುತ್ತೇನೆ, ಕೇಳಿಸಿಕೊಳ್ಳಿ' ಎಂದು ಹೇಳಿ ಆಡನ್, ಏಟ್ಸ್ ಮುಂತಾದ ಕವಿಗಳ ಕವನಗಳನ್ನು ಒಂದಾದ ಮೇಲೊಂದರಂತೆ ಓದುತ್ತಾ ಹೋದರಂತೆ. ದೊಡ್ಡವರ ಮಾರ್ಗವೇ ಹಾಗೆ. ನಮ್ರತೆ, ವಿನಯ

ಮುಂತಾದ ಅನುಕರಣೀಯವಾದ ಗುಣಗಳನ್ನು ಪಡೆದಿರುವ ಶೀಮಸ್ ಹೀನಿ ಹುಟ್ಟಿದುದು ಉತ್ತರ ಐರ್ಲೆಂಡಿನ ಕೌಂಟಿ ಡೆರ್ರಿ ಎಂಬಲ್ಲಿ, ೧೯೩೯ ನೇ ಇಸವಿ ಏಪ್ರಿಲ್ ೧೩ ನೇ ತಾರೀಖಿನಂದು. ಬೆಲ್‌ಫಾಸ್ಟ್‌ನ ಕ್ವೀನ್ಸ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ. ಕವಿಯಾಗಿ ಶ್ರೇಷ್ಠಮಟ್ಟದ ಎಲ್ಲ ಪ್ರಶಸ್ತಿಗಳನ್ನೂ ತಮ್ಮದಾಗಿಸಿಕೊಂಡಿರುವ ಹೀನಿ ತುಂಬಾ ಬೇಡಿಕೆಯಿದ್ದಾಗಲೂ ಯೂರೋಪಿನ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ದೀರ್ಘಕಾಲ ಉಳಿಯಲು ಆಸೆಪಟ್ಟವರಲ್ಲ. ಮರಳಿ ತನ್ನೂರಿಗೇ ವಾಪಸ್ಸಾಗುವ, ತನ್ನ ಜನರ ದುಃಖ ದುಮ್ಮಾನಗಳ ಕುರಿತು ಹಾಡುವ ಧೀಮಂತ ಗಾಯಕ ಶೀಮಸ್. (ತಾಯ್ನೆಲದಲ್ಲೇ ಬೇರುಬಿಟ್ಟು ಹೊರಗೆ ಹರಿದಾಡುವ ಅವಶ್ಯಕತೆಯನ್ನು ಕಾಣದ ಕುವೆಂಪು ಹಾಗೂ ಬೇಂದ್ರೆ ಕಡಿಮೆಯೇನಾದರೂ ಕೊಟ್ಟರೆ? ವಿದೇಶಗಳಲ್ಲಿ ಸುತ್ತಿದ್ದರೆ ಇವರ ಅನುಭವ ಇನ್ನೂ ಶ್ರೀಮಂತವಾಗುತ್ತಿತ್ತೆ? ಹೇಳುವುದು ಕಷ್ಟ. ಕೆಲವರು ಅನುಭವಗಳ ಅನ್ವೇಷಣೆಯಲ್ಲಿ ಹಿಟ್ಟು ಬುತ್ತಿಕಟ್ಟಿಕೊಂಡು ಅಲೆದಾಡಿದರೆ ಇನ್ನು ಕೆಲವರು ನಿಂತಲ್ಲೇ ಅನಂತವನ್ನು ಅರಗಿಸಿಕೊಳ್ಳುತ್ತಾರೆ. ನಮ್ಮ ಕುವೆಂಪು ಮತ್ತು ಬೇಂದ್ರೆ ಈ ವರ್ಗಕ್ಕೆ ಸೇರಿದ ಅಪರೂಪದ ಕವಿಗಳೆಂಬುದು ನಮಗೆ ಹೆಮ್ಮೆಯ ವಿಷಯ).

ಶೀಮಸ್‌ಹೀನಿಯಂತೆಯೇ ಐರಿಷ್ ಸಂಸ್ಕೃತಿಯ ವಕ್ತಾರರಾಗಿ ಜಗತ್ತಿನ ಗಮನ ಸೆಳೆದ ಏಟ್ಸ್ ಮತ್ತು ಸ್ಯಾಮುಯೆಲ್ ಬೆಕೆಟ್ ಈ ಮೊದಲು ನೊಬೆಲ್ ಪ್ರಶಸ್ತಿ ಗಳಿಸಿರುವವರು. ತಮ್ಮ ಪುಟ್ಟ ದ್ವೀಪಕ್ಕೆ ಮೂರನೇ ನೊಬೆಲ್ ಪ್ರಶಸ್ತಿ (ಸಾಹಿತ್ಯಕ್ಕಾಗಿ) ಯನ್ನು ಗಳಿಸಿಕೊಟ್ಟ ಶೀಮಸ್‌ಗೆ ಇನ್ನೂ ೫೪ರ ಹರೆಯ. ಇವರ ಅತ್ಯಂತ ನಿಕಟ ವರ್ತಿಗಳಾದ ರಷ್ಯಾ ಮೂಲದ ಅಮೆರಿಕನ್ ಪ್ರಜೆ ಜೋಸೆಫ್ ಬ್ರಾಡ್ಸ್‌ಕಿ ಹಾಗೂ ವೆಸ್ಟ್ ಇಂಡೀಸ್‌ನ ಡೆರಿಕ್ ವಾಲ್ಕಾಟ್ ಕಳೆದ ಎಂಟು ವರ್ಷಗಳ ಅವಧಿಯಲ್ಲಿ ನೊಬೆಲ್ ಪ್ರಶಸ್ತಿ ಗಳಿಸಿರುವ ಕವಿದ್ವಯರು. ಮುಕ್ತ ಮಾರುಕಟ್ಟೆ, ಆರ್ಥಿಕ ಉದಾರೀಕರಣ ಹಾಗೂ ಜಾಗತೀಕರಣವೆಂಬ ಮುಪ್ಪುರಿ ಮುಷ್ಟಿಗುದ್ದಿನ ಮಧ್ಯೆ ಕಾವ್ಯ ಮತ್ತೆ ಮತ್ತೆ ತನ್ನ ಹಿರಿಮೆಯನ್ನು ಪ್ರದರ್ಶಿಸುತ್ತಿರುವುದು ಹರ್ಷದ ಸಂಗತಿಯಾಗಿದೆ.

ಶೀಮಸ್‌ಹೀನಿಯ ಹಿನ್ನೆಲೆಯನ್ನು ತಿಳಿಯುವಾಗ ಅವರ ಹಿರೀಕರು ಕೃಷಿಯನ್ನು ಅವಲಂಬಿಸಿ ಬದುಕಿದವರೆಂದು ನೆನಪಾಗುತ್ತದೆ. ಅವರ ತಂದೆಯೋ ವ್ಯವಸಾಯಗಾರರು. ಒಂದು ಪದ್ಯದಲ್ಲಿ ಹೀನಿ ಹೀಗೆ ಬರೆದಿದ್ದಾರೆ :

'ಜೋಡಿ ಕುದುರೆಗೆ ನೇಗಿಲು ಕಟ್ಟಿ
ಉಳುವ ನನ್ನಪ್ಪನ ಭುಜಗಳುಬ್ಬಿವೆ
ಗಾಳಿ ತುಂಬಿದ ಹಾಯಿಯ ಹಾಗೆ
ಲೊಚಗುಟ್ಟಿ ತಟ್ಟಿದರೆ ಮೃದುವಾಗಿ
ಮುಕ್ಕಂದು ಮೂಡಿಸುತ್ತಿವೆ ತೆರೆಯ'

ಕೇವಲ ಒಂದೇ ತಲೆಮಾರಿನಲ್ಲಿ ಈ ಬಗೆಯಾಗಿ ಸರಸ್ವತಿ ಒಲಿಯಲು ಸಾಧ್ಯವೇ ಎಂದು ಪ್ರಶ್ನೆ ಉದ್ಭವವಾಗುವುದು ಸಹಜ. ಇದಕ್ಕೆ ಉತ್ತರ ಸುಲಭ. ಚಿಕ್ಕ ವಯಸ್ಸಿನಿಂದಲೂ ಹೀನಿಗೆ ಅಗಾಧವಾದ ಪುಸ್ತಕ ಪ್ರೀತಿ. ಶಾಲೆಯ ಗ್ರಂಥಾಲಯದಿಂದ

ಬಾಲಕ ಹೀನಿ ಪುಸ್ತಕಗಳನ್ನು ತಂದು ಓದಲು ತೊಡಗಿರುವುದನ್ನು ಕಂಡ ನೆಂಟರೊಬ್ಬರು ಹೀಗೆ ಹೇಳಿದರಂತೆ ಒಮ್ಮೆ, 'ಈ ಶೀಮಸ್ ಇದಾನಲ್ಲ, ಇವ ದೊಡ್ಡ ಪಂಡಿತ ಕಣಯ್ಯ. ಈಗೇನು ಪುಸ್ತಕ ಓದ್ತಿದ್ದೀಯಾ ಮಗು?' ಅವರ ದನಿಯಲ್ಲಿನ ಹಾಸ್ಯ ಬೆರೆತ ವಿಸ್ಮಯವನ್ನು ಯಾರಾದರೂ ಗುರುತಿಸಬಹುದು. ಮಣ್ಣಿನ ನಿಕಟ ಬಾಂಧವ್ಯದಿಂದ ಲೇಖಣಿಯ ಸಖ್ಯದವರೆಗೆ, ಗ್ರಾಮಾಂತರ ಬೇರುಗಳಿಂದ ಸಾರ್ವತ್ರಿಕದ ವೈಶಾಲ್ಯಕ್ಕೆ ಹೀನಿ ಬೆಳೆದದ್ದು ಬೆರಗುಂಟು ಮಾಡುವ ಪ್ರಸಂಗವಾಗಿದೆ. ಈ ಬೆಳವಣಿಗೆಯನ್ನು ಕುರಿತ ಪದ್ಯವನ್ನು ಅವರು ಬರೆದಿದ್ದಾರೆ:

ಬಟಾಟೆಯ ತಣ್ಣಗಿನ ಅಚ್ಚು
ಜಾಗು ಭೂಮಿಯ ಕೆಸರು ತುಳಾವಳಿ
ತೆವರು ಕತ್ತರಿಸುವ ಶಬ್ದ
ಮೆದುಳಲ್ಲಿ ಸಜೀವ ಬೇರುಗಳ ಜಾಲ
ಆದರಿಲ್ಲ ನನ್ನ ಬಳಿ ಪಿಕಾಸಿ ಗುದ್ದಲಿ
ಅಂಥವರ ಹಿಂದೆ ಹೆಜ್ಜೆ ಇಡಲು

ಬೆರಳು ಹೆಬ್ಬೆರಳಿನ ಮಧ್ಯೆ
ಕುಳಿತಿದೆ ಮುಗ್ಗುಬೂತು ಲೇಖಣಿ
ಆದರಿಂದಲೇ ನನ್ನ ಅಗೆತ.

ಕೃಷಿಕ ಮನೆತನಕ್ಕೆ ಸೇರಿದ ಹೀನಿಯ ಹಿರೀಕರು ಐರ್ಲೆಂಡಿನ ಭೂಮಿಯೊಳಗಿನ ಆಲೂಗಡ್ಡೆ ಅಗೆದು ತೆಗೆದು ಜೀವಿಸುತ್ತಿದ್ದವರು. ಹಾಗಾಗಿ ಅಗೆಯುವ ಪ್ರತಿಮೆ ಹೀನಿಯ ಕಾವ್ಯದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ನೆತ್ತರು ಹಾಗೂ ನೆಲ ಪುನರಾವರ್ತನೆಯಾಗುವ ಇನ್ನೆರಡು ಪ್ರತೀಕಗಳಾಗಿವೆ. ಭಾಷೆ ಹಾಗೂ ಇತಿಹಾಸದಾಳಕ್ಕೆ ಸುರಂಗ ಮಾಡಿ ಇಳಿಯಬೇಕಾದ ಜರೂರನ್ನು ಮನಗಂಡವರು ಹೀನಿ. ಹೀನಿಯ ಕಾವ್ಯದಲ್ಲಿ ಗ್ರಾಮ್ಯತೆ ಹೆಚ್ಚಾಗಿ ಹೋಗಿ ಈ ಘಳಿಗೆಯ ಆಧುನಿಕ ಜೀವನದ ಸಂಕೀರ್ಣತೆ ಪ್ರಕಟವಾಗಿಲ್ಲ ಎಂದು ಕೆಲವರು ವಿಮರ್ಶಕರು ಸೊಲ್ಲೆತ್ತಿದರು. ಈ ಆಲೋಚನೆಯನ್ನು ಅಲ್ಲಗಳೆಯುವ ರೀತಿಯಲ್ಲಿ ಹೀನಿ ಅತ್ಯಂತ ಸೂಕ್ಷ್ಮವಾಗಿ ಹಾಗೂ ಸಂಕೀರ್ಣವಾಗಿ ಕಾವ್ಯವನ್ನು ಬರೆದಿದ್ದಾರೆ. ತಮ್ಮ ಮೊದಲನೇ ಸಂಕಲವಾದ 'ಇಲೆವೆನ್ ಪೊಯೆಮ್ಸ್' (೧೯೬೫) ನಿಂದ ಹಿಡಿದು 'ಡೆತ್ ಆಫ್ ಎ ನ್ಯಾಚ್ಯುರಲಿಸ್ಟ್' (೧೯೬೬); 'ಡೋರ್ ಇನ್‌ಟು ದ ಡಾರ್ಕ್' (೧೯೬೯), 'ವಿಂಟರಿಂಗ್ ಔಟ್' (೧೯೭೨), 'ನಾರ್ತ್' (೧೯೭೫), 'ಫೀಲ್ಡ್ ವರ್ಕ್' (೧೯೭೯), 'ಸ್ಟೇಷನ್ ಐಲ್ಯಾಂಡ್' (೧೯೮೪), ಮುಂತಾದ ಕವನ ಸಂಕಲನಗಳಲ್ಲಿ ಅಗೆದು ಆಳಕ್ಕಿಳಿಯುವ ಅನ್ವೇಷಣಾ ಮಾರ್ಗವನ್ನು ಅನುಸರಿಸಿದ್ದಾರೆ.

ಉತ್ತರ ಐರ್ಲೆಂಡಿನಲ್ಲಿ ತಾಂಡವವಾಡುವ ಹಿಂಸೆ ವಿಶೇಷವಾಗಿ ಹೀನಿಯ ಮನಕಲಕಿರುವಂತೆ ತೋರುತ್ತದೆ. ಐರಿಷ್ ಕ್ಯಾಥೊಲಿಕ್ ಪಂಗಡಕ್ಕೆ ಸೇರಿದ ಹೀನಿ ಪ್ರಾಟೆಸ್ಟೆಂಟರ ಉಪಟಳವನ್ನು ತಾಳಲಾರದೆ ಐರ್ಲೆಂಡಿನ ದಕ್ಷಿಣದ ಕಡೆ ಬಂದು ನೆಲೆಸುತ್ತಾರೆ. ಕ್ಯಾಥೊಲಿಕ್ - ಪ್ರಾಟೆಸ್ಟೆಂಟರ ನಡುವಿನ ನಿಲ್ಲದ ಕದನದಿಂದ ಕಂಗೆಟ್ಟ ಹೀನಿ ತಾವು ಅನುಭವಿಸುವ ನೋವನ್ನು ಕಾವ್ಯವಾಗಿಸಲು ಪ್ರಯತ್ನಿಸಿದ್ದಾರೆ. ನೆಲದ ಪಾಡನ್ನು ಪ್ರತಿಬಿಂಬಿಸುವಾಗ ಅನಿವಾರ್ಯವಾಗಿ ರಾಜಕೀಯದ ಪ್ರಸ್ತಾಪ ಬರುತ್ತದೆ. ರಾಜಕಾರಣವನ್ನು ಪ್ರಸ್ತಾಪಿಸುತ್ತಲೂ

ಅದನ್ನು ಮೀರಿ ಹೆಚ್ಚು ಅಧ್ಯಾತ್ಮಿಕವಾದ ಆಲೋಚನೆಗಳಿಗೆ ಹೀನಿ ತಮ್ಮನ್ನು ಒಡ್ಡಿಕೊಳ್ಳುತ್ತಿರುವುದು ಇತ್ತೀಚಿನ ಬೆಳವಣಿಗೆಯೆಂದು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. 'ನಿತ್ಯದ ಪವಾಡಗಳನ್ನು ಎತ್ತರಿಸಿದವರು' ಎಂದು ಸ್ವೀಡಿಷ್ ಅಕಾಡೆಮಿ ತನ್ನ ಉಲ್ಲೇಖದಲ್ಲಿ ತಿಳಿಸಿದರೆ, ಭೂತ ಕಾಲದ ಭಾರವನ್ನು ಹಿಂದೆ ಬಿಟ್ಟು—ಭೂತಕಾಲದಿಂದ ತಾನು ಕಲಿತದ್ದನ್ನು ಗೌರವಿಸುತ್ತಲೇ—ಹೀನಿ ಹೊಸ ಉತ್ಸಾಹದಿಂದ ಮೇಲೇರಿದವರು ಎಂದು ಸಹೃದಯರು ತಿಳಿಸುತ್ತಾರೆ.

ಬಟ್ಟೆ ಬದಲಿಸುವ ಹಾಗೆ ಬಾಳ ಸಂಗಾತಿಗಳನ್ನು ಬದಲಿಸುವುದು ಪಶ್ಚಿಮದ ಪರಿಪಾಠ. ಆ ಕಾರಣದಿಂದ ಪತಿಯನ್ನಾಗಲೀ, ಸತಿಯನ್ನಾಗಲೀ ಬಾಳ ಸಂಗಾತಿಯೆಂದು ಬಣ್ಣಿಸುವುದು ಅಷ್ಟು ಉಚಿತವಾಗಲಾರದೇನೊ. ತನ್ನ ನಾಡಿನ ನೆಚ್ಚಿನ ಕವಿಯೆಂದು ಮನೆಮಾತಾಗಿರುವ ಶೀಮಸ್, ಮೇರಿ ಡೆವ್ಲಿನ್ನರನ್ನು ಕೈ ಹಿಡಿದು ಮೂವತ್ತು ವಸಂತಗಳು ಕಳೆದಿವೆ. ಇಬ್ಬರು ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳನ್ನೊಳಗೊಂಡ ಮುದ್ದಾದ ಸಂಸಾರ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಒಂದು ವರ್ಷಕಾಲ ಸಂದರ್ಶಕ ಪ್ರಾಧ್ಯಾಪಕರಾಗಿರುವ ಕಾಲಕ್ಕೆ ಹೀನಿ ತಮ್ಮ ಪತ್ನಿಯಿಂದ ದೂರ ಉಳಿಯಬೇಕಾದ ಅನಿವಾರ್ಯತೆಯಿತ್ತು. ಪತ್ನಿಯಿಂದ ದೂರವಿದ್ದ ಸಮಯದಲ್ಲಿ ಸನಿಹ ಬರಲು ಸನ್ನಾಹ ನಡೆಸಿದ ಹೆಣ್ಣೊಬ್ಬಳನ್ನು ಗೌರವಾನ್ವಿತ ದೂರದಲ್ಲಿಟ್ಟು ಬಚಾವಾದ ಪ್ರಸಂಗವನ್ನು ಹೀನಿ ಪದ್ಯವೊಂದರಲ್ಲಿ ಕಾಣಿಸುತ್ತಾರೆ.

'ಪುಚ್ಛ ಮೇಲಕ್ಕೆತ್ತಿ
ಕತ್ತು ಬಗ್ಗಿಸಿ ಕೆಳ ಹಿಂಗಾನೆಯಲ್ಲಿ
ಕಪ್ಪು ಒಳಉಡುಪನ್ನು
ಕಳೆದ ರಾತ್ರಿ ನೀ ಹುಡುಕುವಾಗ
ಅದು ನೆನಪಾಯಿತು.'

ಸನಿಹ ಬರಲೆಳೆಸಿದ್ದ ಭಾವೀ ಸಖಿಯನ್ನು ಹೀನಿ 'ಸ್ಕಂಕ್' ಎಂಬ ದುರ್ನಾತ ಬೀರುವ ಪ್ರಾಣಿಗೆ ಹೋಲಿಸುತ್ತಾರೆ. ಈ ಪ್ರಾಣಿಯೂ ಅಷ್ಟೆ, ಸದಾ ಪುಚ್ಛ ಮೇಲಕ್ಕೆತ್ತಿ, ಕತ್ತು ಬಗ್ಗಿಸಿ ಓಡಾಡುತ್ತದೆ. ರಾತ್ರಿ ಉಡುಪನ್ನು ಹುಡುಕಲು ಬಗ್ಗಿರುವ ಹೆಂಡತಿಯನ್ನು ಕಂಡು ಕವಿಗೆ ಆ ದುರ್ನಾತದ ಬೇರೊಂದು ಹೆಣ್ಣಿನ ನೆನಪಾಗುತ್ತದೆ. ಕಾವ್ಯದಲ್ಲಿ ಹೇಗೋ ಹಾಗೆ ಜೀವನದಲ್ಲಿ ಕೂಡ ಒಂದು ಬಗೆಯ ಘನತೆಯನ್ನು ಕಾಪಾಡಿಕೊಂಡ ಹೀನಿ ಆಮಿಷಗಳಿಗೆ ಸುಲಭವಾಗಿ ಬಲಿ ಬೀಳಲಿಲ್ಲ.

ವ್ಯವಸಾಯ ಪ್ರತಿಮೆಗಳಲ್ಲಿ 'ಅಗೆತ' ಹೀನಿಗೆ ಪ್ರಿಯವಾದದ್ದೆಂದು ಈಗಾಗಲೇ ತಿಳಿಸಿದೆ. ಹೀಗೆ ಅಗೆತ ಆರಂಭಿಸಿದ ಮೂರು ದಶಕಗಳ ಅವಧಿಯಲ್ಲೇ ಅತ್ಯಂತ ಶ್ರೀಮಂತವಾದ ಫಲ ದಕ್ಕಿತು ಎಂದು ಹೇಳಬೇಕು. ನೊಬೆಲ್ ಪಾರಿತೋಷಕದ ಹಣದ ಪ್ರಮಾಣ ಏಳು ಲಕ್ಷ ಪೌಂಡುಗಳು ಅಥವಾ ಮೂರುವರೆ ಕೋಟಿ ರೂಪಾಯಿ. ಇನ್ನು ಮುಂದೆ ಶೀಮಸ್ ಹೀನಿ ಪದ್ಯ ಓದುವುದಕ್ಕೆ ಹಾಗೂ ಉಪನ್ಯಾಸಕ್ಕೆ ಸಿಕ್ಕುವುದಿಲ್ಲವೆ ಎಂಬ ಪ್ರಶ್ನೆಯೇ ಅನಾವಶ್ಯಕ. ಕಾರಣ, ಹೀನಿ ಅರಳಿರುವುದೇ ಶ್ರೋತೃವೃಂದದ ಸಮ್ಮುಖದಲ್ಲಿ. ಜಗತ್ತಿನ ಶ್ರೇಷ್ಠ ಬಹುಮಾನವನ್ನು ನೀಡಿರುವುದೇ ಆ ಶ್ರೋತೃವೃಂದ.

೧೯೧೩ರಲ್ಲಿ ರವೀಂದ್ರನಾಥ ಠಾಕೂರರಿಗೆ ನೊಬೆಲ್ ಪ್ರಶಸ್ತಿ ದಕ್ಕಿಸುವುದರಲ್ಲಿ ಮತ್ತೊಬ್ಬ ಐರಿಷ್ ಕವಿ ಡಬ್ಲ್ಯೂ. ಬಿ. ಏಟ್ಸ್ ಪ್ರಧಾನ ಪಾತ್ರವಹಿಸಿದ್ದರು. ಆ ಕಾರಣದಿಂದ ಐರ್ಲೆಂಡ್ ಮತ್ತು ಭಾರತದ ನಡುವಿನ ಸಾಂಸ್ಕೃತಿಕ ನಂಟು ಎಂದೂ ಶಿಥಿಲವಾಗದ್ದೆಂದು ನಮ್ಮ ನಂಬಿಕೆ. ಆಲಿವರ್ ಗೋಲ್ಡ್‌ಸ್ಮಿತ್, ಜಾರ್ಜ್ ಬರ್ನಾರ್ಡ್ ಶಾ, ಜೇಮ್ಸ್ ಜಾಯ್ಸ್, ಆಸ್ಕರ್ ವೈಲ್ಡ್, ಏಟ್ಸ್, ಸ್ಯಾಮ್ಯುಯೆಲ್ ಬೆಕೆಟ್ ಮುಂತಾದ ಅಗ್ರಮಾನ್ಯ ಲೇಖಕರನ್ನು ಕೊಟ್ಟ ದ್ವೀಪ ವರ್ತಮಾನದಲ್ಲಿ ಶೀಮಸ್ ಹೀನಿಯನ್ನು ನೀಡಿ ತನ್ನ ಬೌದ್ಧಿಕ ಶ್ರೀಮಂತಿಕೆಯನ್ನು ಮೆರೆದಿದೆ. ನಮ್ಮ ರಾಷ್ಟ್ರದ ಒಳಗೆ ಆರು ಜ್ಞಾನಪೀಠ ಪ್ರಶಸ್ತಿಗಳನ್ನು ಗಳಿಸಿ ಕನ್ನಡ ಉತ್ತುಂಗದಲ್ಲಿ ವಿರಾಜಮಾನವಾಗಿದೆ. ಇನ್ನು ನಾವು ಸ್ವೀಡಿಷ್ ಅಕಾಡೆಮಿಯ ಗಮನವನ್ನು ಸೆಳೆಯಲು ಎಷ್ಟು ದಿನ ಕಾಯಬೇಕು? ಆ ದಿಶೆಯಲ್ಲಿ ನಾವು ಕಾರ್ಯೋನ್ಮುಖರಾಗಿದ್ದೇವೆಯೇ?



ಸಂಕಟ ಪರಿಹಾರಕ್ಕೆ ಚಿಂತಿಸದೆ ಧೈರ್ಯದಿಂದ ಅದನ್ನು ಎದುರಿಸುವುದರಲ್ಲಿಯೇ ಆ ಸಂಕಟ ಪರಿಹಾರಕ್ಕೆ ಏಕಮೇವ ದಾರಿಯಾಗಿದೆ.

—ಗ್ರೆಗರಿ

ಆಡುವದೊಂದು, ಮಾಡುವದೊಂದಾದರೆ ಮಹತ್ವವಾದುದಲ್ಲ. ಅಂತರ್‌ವಾಣಿಯನ್ನು ಅನುಸರಿಸಿ ಅದರಂತೆ ನಡೆದುಕೊಳ್ಳುವವನೇ ನಿಜವಾದ ಮಹಾತ್ಮ.

—ಶೇಕ್ಸ್‌ಪಿಯರ್

ಮಂಡೇಲ : ವ್ಯಕ್ತಿ ಮತ್ತು ತೆರೆಮರೆಯ ಮುಖ

ಶ್ರೀಪಾದ ಭಟ್

ಮಂಡೇಲರ ಹೊಳಪಿನ, ಪ್ರಶಾಂತವಾದ ನಗು ಅಪ್ಪಟ ಉತ್ಸಾಹವನ್ನು ಸೂಸುತ್ತದೆ. ಆದರೆ ಹೊಸ ದಕ್ಷಿಣ ಆಫ್ರಿಕದ ಪಿತಾಮಹನ ಕಲ್ಪನಾ ಶಕ್ತಿಯನ್ನು ಹಾಗೆಯೇ ಬಚ್ಚಿಡುತ್ತದೆ.

ಮಂಡೇಲ ವೃತ್ತ ಪತ್ರಿಕೆಗಳನ್ನು ಇಷ್ಟಪಡುತ್ತಾರೆ. ಅವುಗಳನ್ನು ನಿಧಾನವಾಗಿ ಯಾವುದೇ ಗಡಿಬಿಡಿಯೂ ಇಲ್ಲದೆ ಸಮಾಧಾನದಿಂದ ತಿರುವಿಹಾಕುತ್ತಾರೆ. ರಾಬೆನ್ ದ್ವೀಪದಲ್ಲಿ ೧೯ ವರ್ಷಗಳ ಕಾಲ ಹಳೇ ದಕ್ಷಿಣ ಆಫ್ರಿಕದ ಆಡಳಿತ ವ್ಯವಸ್ಥೆ ಕಂಬಿಗಳ ಹಿಂದೆ ಇದ್ದಾಗ ಇದೇ ಪತ್ರಿಕೆಗಳು ಉದಾಸೀನ ಮಾಡಿದ್ದರೂ ಈಗ ಅವರು ಆ ಪತ್ರಿಕೆಗಳ ಸುದ್ದಿಗಳನ್ನು ಸವಿಯುತ್ತಾರೆ. ನತಾಲ್‌ನ ಬಳಿ ನಮ್ಮ ವಿಮಾನ ಬರುತ್ತಿದ್ದಂತೆಯೆ ಮಂಡೇಲ ಜೋಹಾನ್ಸ್‌ಬರ್ಗ್‌ನ 'ವೀಕೆಂಡ್ ಸ್ಟಾರ್' ಪತ್ರಿಕೆಯನ್ನು ಗಮನಿಸುತ್ತ ಕುಳಿತಿದ್ದರು. ೧೨ ಜನ ಕುಳಿತುಕೊಳ್ಳಬಹುದಾದ ಚಿಕ್ಕ ವಿಮಾನವೊಂದರಲ್ಲಿ ಅವರ ಬಳಿ ಅಡ್ಡಲಾಗಿ ನಾನು ಕೂತಿದ್ದೆ. ಅಂದು ಏಪ್ರಿಲ್ ೧೯೯೩ ಅವರ ಆತ್ಮಚರಿತ್ರೆಯನ್ನು ಬರೆಯುವ ಕೆಲಸದ ನಿಮಿತ್ತ ಐದು ತಿಂಗಳು ನಾನು ದಕ್ಷಿಣ ಆಫ್ರಿಕದಲ್ಲಿದ್ದೆ.

ನಾವು ವಿಮಾನ ನಿಲ್ದಾಣವನ್ನು ಬಿಟ್ಟು ೩೦ ನಿಮಿಷಗಳಾಗಿರಬೇಕು. ಮಂಡೇಲ ನನ್ನ ಮುಂಡಿಯನ್ನು ಮೃದುವಾಗಿ ತಟ್ಟಿದರು. ಅವರತ್ತ ನೋಡಿದೆ. ನನ್ನ ಬಳಿ ಸರಿಯುತ್ತಾ ಕಿಂಡಿಯಿಂದ ಹೊರಗೆ ಸೂಕ್ಷ್ಮವಾಗಿ ಗಮನಿಸುವಂತೆ ಸೂಚಿಸಿದರು. ನೋಡುತ್ತಿದ್ದಂತೆಯೇ ನನಗೆ ಗಾಬರಿಯಾಯಿತು; ವಿಮಾನದ ರೆಕ್ಕೆಗಳು ತಿರುಗುತ್ತಲೇ ಇರಲಿಲ್ಲ. ಆತಂಕದ ಸ್ವರದಲ್ಲಿ "ಓಹ್ ರಿಚರ್ಡ್" ಎನ್ನುತ್ತಾ, "ರೆಕ್ಕೆಗಳು ಕಾರ್ಯನಿರ್ವಹಿಸುತ್ತಿರುವಂತೆ ಕಾಣುತ್ತಿಲ್ಲವೆಂದು ದಯವಿಟ್ಟು ಚಾಲಕನಿಗೆ ಹೇಳುವೆಯಾ?" ಎಂದು ಕೇಳಿದರು.

ನಾನು ಮುಂದಡಿಯಿಡುತ್ತಿದ್ದಂತೆಯೆ, ನಿಲ್ದಾಣದ ಅಧಿಕಾರಿಗಳು ಚುರುಕಾಗಿದ್ದಾ

೧೯೯೪ರ ಅಕ್ಟೋಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ರಿಚರ್ಡ್ ಸ್ಟೆಂಜೆಲ್ ಅವರ "ಮಂಡೇಲ: ಮ್ಯಾನ್ ಅಂಡ್ ದಿ ಮಾಸ್ಕ್" ಎಂಬ ಲೇಖನದ ಅನುವಾದ.

ರಿಂದೂ, ನೀವು ಅಲ್ಲಿಗೆ ಹೋಗುತ್ತಿದ್ದಂತೆ ತುರ್ತುವಾಹನಗಳು ತಯಾರಿರುತ್ತವೆಂದೂ ನಮಗೆ ತಿಳಿಸಲು ಬರುತ್ತಿದ್ದ ಸಹಾಯಕ ಚಾಲಕ ಎದುರಾದ, ಒಂಟಿ ಯಂತ್ರದ ಸಹಾಯದಿಂದಲೇ ವಿಮಾನ ಸುರಕ್ಷಿತವಾಗಿ ಕೆಳಗಿಳಿಯುವುದರಿಂದ ಆತ ಸಮಸ್ಯೆಯ ಬಗ್ಗೆ ತಲೆ ಕೆಡಿಸಿಕೊಳ್ಳಲೇ ಇಲ್ಲ.

ಅನುವಂಶಿಕ ವ್ಯಕ್ತಿಗುಣ :

ಕೆಟ್ಟು ನಿಂತಿದ್ದ ವಿಮಾನದ ರೆಕ್ಕೆಗಳ ನೋಟವೇ ನನ್ನಲ್ಲಿ ಆತಂಕವನ್ನು ಹೆಚ್ಚಿಸಿದ್ದರಿಂದ ಓದುವ ಅಥವಾ ಕಿಟಕಿಯಿಂದ ಹೊರಗಿನ ದೃಶ್ಯ ನೋಡುವ ಬದಲು ಮಂಡೇಲ ಅವರ ಗೆಲುವಿನ ಮುಖವನ್ನು ವೀಕ್ಷಿಸಿದೆ. ಬೆಳಗಿನ ಕಛೇರಿ ಕೆಲಸಕ್ಕೆ ದಿನ ನಿತ್ಯ ಓಡಾಡುವ ಪ್ರಯಾಣಿಕ ತನ್ನ ರೈಲು ಕೆಲನಿಮಿಷ ತಡವಾಗಿ ಬಂದರೂ ಚಿಂತೆ ಇಲ್ಲ ಎಂಬ ಭಾವನೆಯನ್ನು ಸೂಸುವಂತೆ ಮಂಡೇಲರ ಮುಖದ ಭಾವನೆಯಿತ್ತು. ಅವರ ವರ್ತನೆ ನನ್ನನ್ನು ಸಮಾಧಾನಗೊಳಿಸಿತು. ಅವರು ಮತ್ತೆ ಪತ್ರಿಕೆಯನ್ನು ಓದುವುದರಲ್ಲಿ ಮಗ್ನರಾದರು.

ಹದಿನೈದು ನಿಮಿಷಗಳ ತರುವಾಯ ಯಾವ ಸೂಚನೆಯೂ ಇಲ್ಲದೆ ಚಾಲಕ ಅಗ್ನಿಶಾಮಕ ಯಂತ್ರಗಳ, ಸೈರನ್ ಕೂಗುಗಳ ಸಾಗರದ ಮಧ್ಯೆ ವಿಮಾನವನ್ನು ಕೆಳಗಿಳಿಸಿದ. ಇಳಿಯುವಾಗಲೂ ಮಂಡೇಲರ ಮುಖದಲ್ಲಿ ಚಿಂತೆಯ ಗೆರೆಯೂ ಕಾಣಲಿಲ್ಲ. ಅರ್ಧ ಗಂಟೆಯಾದಮೇಲೆ ವಿಮಾನ ನಿಲ್ದಾಣದಲ್ಲಿ ಸ್ಥಳೀಯ ಗಣ್ಯರೊಂದಿಗೆ ಕೈ ಕುಲುಕುತ್ತಾ ನನ್ನ ಕಿವಿಯೊಳಗೆ ಹೀಗೆಂದು ಉಸುರಿದರು: "ನಿನಗೆ ಗೊತ್ತಾ? ವಿಮಾನದಲ್ಲಿರುವಾಗ ನಾನು ತುಂಬ ಹೆದರಿಕೊಂಡಿದ್ದೆ."

ನಾನು ಆ ವರ್ಷದ ಬಹುಪಾಲು ವೇಳೆಯನ್ನು ಇಡೀದಿನ ಮಂಡೇಲರೊಂದಿಗೆ, ಒಂದೋ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಎಎನ್‌ಸಿ) ಕಛೇರಿಯ ಕೇಂದ್ರಸ್ಥಾನಗಳಲ್ಲಿ, ಅಥವಾ ಹೂಟನ್‌ನ ಉಪನಗರ ಜೋಹಾನ್ಸ್‌ಬರ್ಗ್‌ನ ಅವರ ಮನೆಯಲ್ಲಿ ಕಳೆದೆ. ಎಲ್ಲರಂತೆಯೆ ಮಂದಹಾಸದ ಅಜ್ಜ, ಉದಾರಿ, ನಿಷ್ಠುರ ನಾಯಕರಾದ ಸಾಮಾನ್ಯರ ಮಂಡೇಲ ನನಗೆ ಗೊತ್ತಿತ್ತು. ಜನಸಾಮಾನ್ಯರು ತಿಳಿದದ್ದಕ್ಕಿಂತ ಏನೋ ಭಿನ್ನವಾದುದನ್ನು ನನಗೆ ಹೊಳೆಯಿಸಿದ ವಿಮಾನದಲ್ಲಿ ನಡೆದ ಘಟನೆ ಅಂಥ ಕೆಲವು ಘಟನೆಗಳಲ್ಲೊಂದು. ಸ್ವಾಭಿಮಾನದ, ಆಕರ್ಷಕ ವ್ಯಕ್ತಿಗುಣದ ಮಂಡೇಲ ಕೊಂಕಿಲ್ಲದ ಸದ್ಗುಣಿ; ಖುದ್ದು ಕಾಣುವ ಮತ್ತು ತೆರೆಮರೆಯ ಅವರ ಮುಖ ಒಂದೇ ಎಂಬುದನ್ನು ನಾನು ಕಂಡುಕೊಂಡೆ.

ಅವರು ಕ್ಲಿಷ್ಟ ಪರಿಸ್ಥಿತಿಗಳನ್ನು ನಿಭಾಯಿಸುವಲ್ಲೇ ತಮ್ಮನ್ನು ತಾವು ಸೃಷ್ಟಿಸಿಕೊಂಡಿದ್ದಾರೆ. ಅವರು ಜೈಲಿನಲ್ಲಿದ್ದಾಗ ಬೆದರಿಕೆಗೊಳಗಾದ, ಆದರೆ ದಿಟ್ಟತನದಿಂದ ಇರುವಂತೆ ತೋರಿಸಿಕೊಂಡ ಅಥವಾ ಜೈಲು ಸಿಬ್ಬಂದಿಯನ್ನು ಗೋಳುಹುಯ್ದುಕೊಳ್ಳುವ ಸಹವರ್ತಿಗಳ ಪರವಾಗಿ ಯಾವ ವ್ಯತ್ಯಾಸವನ್ನು ತೋರಿಸಿಕೊಳ್ಳದಿದ್ದ ಬಗ್ಗೆ ನನಗೆ ಬಹಳಷ್ಟು ಸಂದರ್ಭಗಳಲ್ಲಿ ಹೇಳಿದ್ದಾರೆ. ಜೈಲಿನ ಆವರಣದ ಉದ್ದಗಲಕ್ಕೆ ಮಂಡೇಲ ಸ್ವಾಭಿಮಾನ ಮತ್ತು ಸರಳತೆಯಿಂದ ನಡೆದಾಡುತ್ತಿದ್ದುದನ್ನು ನೋಡುವಷ್ಟರಲ್ಲಿ ತಾನು ಸಂತಸಗೊಳ್ಳುತ್ತಿದ್ದೆನೆಂದು ರಾಬಿನ್

ದ್ವೀಪದಲ್ಲಿ ಮಂಡೇಲ ಇದ್ದಾಗ ಅವರಿಗೆ ಅಡ್ಡಲಾಗಿ ಜೇಲು ಕೋಣೆಯಲ್ಲಿದ್ದ ಎಡ್ಡಿ ಡೇನಿಯಲ್ಸ್ ಎಂಬ ಖೈದಿ ಹೇಳುತ್ತಾನೆ. ಧೈರ್ಯವೆಂದರೆ ಹೆದರಿಕೆಯಿಲ್ಲದಿರುವುದು ಎಂದಲ್ಲ; ಅದರಿಂದ ಹೊರಬರುವುದು ಎಂಬುದನ್ನು ಅವರು ತಿಳಿದುಕೊಂಡರು.

ಆದರೆ ಮಂಡೇಲರ ವ್ಯಕ್ತಿಗುಣ ಕೂಡ ಆನುವಂಶಿಕವಾದದ್ದಾಗಿತ್ತು. ಅವರೊಂದಿಗೆ ನಾನು ಕೆಲಸವನ್ನು ಪ್ರಾರಂಭಿಸಿದಾಗಿನಿಂದಲೇ ಅವರ ಸಹೋದ್ಯೋಗಿಗಳು ಆತ ಕೋಶಾ (Xhosa) ರಾಜವಂಶದ ಮುಖ್ಯಸ್ಥನೊಬ್ಬನ ಮಗ, ಅವನು ದರ್ಪದವನಿರಬಹುದು ಎಂಬುದನ್ನು ಮರೆಯಬೇಡ ಎಂದು ಮುಂತಾಗಿ ಎಚ್ಚರಿಸಿದ್ದರು. ನಾನು ಈ ಉಪದೇಶವನ್ನು ಪರಿಗಣಿಸಲಿಲ್ಲ, ಆದರೆ ಅವರೊಂದಿಗೆ ಕಳೆದ ಬಹಳಷ್ಟು ಸಮಯದಲ್ಲಿ ಅವರ ಆತ್ಮವಿಶ್ವಾಸ, ಸ್ವಪ್ರಶಂಸೆ ಮತ್ತು ಬರುಡುಗಳ ಬಗೆಗಿನ ಆಸಕ್ತಿ, ಅತೀ ಸಲುಗೆ ಬಗ್ಗೆ ಅವರ ಬೇಸರ ಹಾಗೂ ಪ್ರತಿಷ್ಠೆಯ ಬಗೆಗಿನ ಚಿಂತೆ ಮೊದಲಾದವು ಬಾಲ್ಯ ಶಿಕ್ಷಣದ ಸಾಕ್ಷಿಗಳಾಗಿವೆ ಎಂಬುದನ್ನು ನಾನು ಗಮನಿಸಿದ್ದೇನೆ.

ಹೊಳೆಯುವ ನಗು :

ಹುಡುಗನಾಗಿದ್ದಾಗಲೂ ಟ್ರಾನ್ಸ್ಕಿಯಲ್ಲಿ ಮಂಡೇಲ ವಿಶೇಷ ವ್ಯಕ್ತಿಯಾಗಿ ಪರಿಗಣಿಸಲ್ಪಟ್ಟಿದ್ದರು. ಯುವಕನಾಗಿ ಜೋಹಾನ್ಸ್‌ಬರ್ಗ್‌ನಲ್ಲಿರುವಾಗ ಜನಾಂಗಿಕ ಭಾವನೆಯಿಂದ ತುಂಬಿದ ಸಮಾಜವನ್ನು ಎದುರಿಸಬೇಕಾಯಿತು. ಪ್ರತ್ಯೇಕವಾದ ಈ ಪರಿಗಣನೆ ಅವರನ್ನು ಈಗಾಗಲೇ ಸಾಕಷ್ಟು ಕಪ್ಪು ಜನರನ್ನು ತಿದ್ದಿದಂತೆ ಸಮ್ರನಾಗುವ ಮತ್ತು ದಬ್ಬಾಳಿಕೆಯಿಂದ ಯಾವುದೇ ಕೀಳರಿಮೆ ಉಂಟಾಗದಂತೆ ನೋಡಿಕೊಳ್ಳುವ ಪ್ರಯತ್ನವನ್ನು ಮಾಡಿತು. ಹೀಗಾಗದೆ ಅವರನ್ನು ಅದು ಸಿಟ್ಟಿಗೇಳುವಂತೆ ಮಾಡಿತು.

ತಮ್ಮ ಪ್ರತಿಷ್ಠೆಗಾಗುವ ಅವಮಾನ ಇಂದಿಗೂ ಕೂಡ ಅವರನ್ನು ಎಲ್ಲದಕ್ಕಿಂತಲೂ ಹೆಚ್ಚು ಕಾಡುತ್ತದೆ. ಒಮ್ಮೆ ನಾನು ಅವರಿಗೆ ಹೊಸ ಟೈಯೊಂದನ್ನು ಅವರ ಸಹೋದ್ಯೋಗಿಗಳ ಎದುರು ಕಾಣಿಕೆಯಾಗಿ ಕೊಟ್ಟಾಗ ನನ್ನ ಮೇಲೆ ತುಂಬ ಸಿಟ್ಟಿಗೆದ್ದಿದ್ದರು. ಕಾಣಿಕೆಯನ್ನು ಅವರಿಗೆ ಸರಿಯಾದ ಕ್ರಮದಲ್ಲಿ ತಲುಪಿಸಬೇಕಾಗಿತ್ತು.

ಮಂಡೇಲರ ಹೊಳಪಿನ ಪ್ರಶಾಂತವಾದ ನಗು ಅಪ್ಪಟ ಉತ್ಸಾಹವನ್ನು ಸೂಸುತ್ತದೆ. ಆದರೆ ನವ ದಕ್ಷಿಣ ಆಫ್ರಿಕದ ಪಿತಾಮಹನ ಕಲ್ಪನಾಶಕ್ತಿಯನ್ನು ಹಾಗೆಯೇ ಬಚ್ಚಿಡುತ್ತದೆ. ಅಲ್ಪಾಹಾರದ ಅಥವಾ ಔಪಚಾರಿಕ ಔತಣ ಕೂಟಗಳ ವೇಳೆಯಲ್ಲಿ ಅಡುಗೆಯವರ ಮತ್ತು ಊಟ ಬಡಿಸುವವರ ಕೈ ಕುಲುಕುತ್ತಾ ಪ್ರತಿಷ್ಠಿತರಂತೆ ಅವರಿಗೆ ಕೃತಜ್ಞತೆಗಳನ್ನು ಹೇಳುವ ಕ್ರಮವನ್ನು ಸದಾ ನೆನಪಿನಲ್ಲಿಟ್ಟುಕೊಂಡಿರುತ್ತಾರೆ. ಅಪರಿಚಿತರೊಂದಿಗೆ ಅವರು ಸುಲಭವಾಗಿ ಬೆರೆಯುವ ಹಾಗೆಯೇ ಪರಿಚಯ ಮಾಡಿಕೊಳ್ಳುವ ಮತ್ತು ಆಗಾಗ್ಗೆ ತಮಗೆ ತುಂಬ ಆತ್ಮೀಯರಾದವರೊಂದಿಗೆ ತಂಟೆ ಮಾಡುವ ಸ್ವಭಾವದವರು. ಇನ್ನೊಬ್ಬ ಮನುಷ್ಯನನ್ನು ಅತಿಯಾಗಿ ಶ್ಲಾಘಿಸುವಾಗ 'ವಿನೀತನಾಗಿ' ವರ್ತಿಸುವ ಮತ್ತು ತನ್ನ ಶಕ್ತಿಮೀರಿ ನಮ್ರನಾಗಿರುವ ಪ್ರಯತ್ನವನ್ನು ಮಾಡು

ತ್ತಾರೆ. ಆದರೆ ಅದು ಇನ್ನಿಲ್ಲದಂತೆ ಅರ್ಥೈಸುವ ಅವರ ರೀತಿ ಅಷ್ಟೆ.

ಎ. ಎನ್. ಸಿ. ಯು ಒಂದು ಸಾಮುದಾಯಿಕ ಸಂಸ್ಥೆ ಎಂದು ಸ್ಪಷ್ಟವಾಗಿ ಹೇಳುವಲ್ಲಿ ಮಂಡೇಲ ಎಂದೂ ಹಿಂದೇಟು ಹಾಕುವವರಲ್ಲ; ತುಂಬ ಸಹಜವಾಗಿ ಆಗಾಗ್ಗೆ 'ನಾವು' ಎಂಬ ಪದ ಬಂದ ಮೇಲೆಯಷ್ಟೆ 'ನಾನು' ಎಂಬ ಪದ ಅವರ ಬಾಯಲ್ಲಿ ಬರುತ್ತದೆ. ಕೆಲವು ಸಂಗತಿಗಳಲ್ಲಿ ಅವರ ವೈಯಕ್ತಿಕ ಪಾತ್ರದ ಬಗ್ಗೆ ನಾನವರನ್ನು ಪ್ರಶ್ನಿಸಿದಾಗ, ಘಟನೆಗಳನ್ನು ವ್ಯಕ್ತಿಕೇಂದ್ರಿತವನ್ನಾಗಿ ಮಾಡುವ ನನ್ನ ಪ್ರಯತ್ನವನ್ನು ಜರಿಯುತ್ತಾರೆ. ಆದರೆ ನಾನು ಕೆಲವು ಆರಂಭಿಕ ಹೆಜ್ಜೆಗಳಲ್ಲಿ ಸಂಘಟನೆಯ ಅಥವಾ ಅವರ ಸಹವರ್ತಿಗಳ ಪಾತ್ರದ ಬಗ್ಗೆ ಕೇಳಿದಾಗ, 'ಇಲ್ಲ, ಅದೇನಿದೆಯೋ ಅದನ್ನು ನಾನೇ ಮಾಡಿದ್ದು' ಎಂದು ಪ್ರಥಮ ಪುರುಷ ಏಕವಚನಕ್ಕೆ ತಿರುಗಿಸಿ ಹೇಳಿಬಿಡುತ್ತಾರೆ.

ಪ್ರಬಲ ಚಿಂತಕ:

ಒಮ್ಮೆ ಯಾರೋ ಒಬ್ಬರು ಮಂಡೇಲರನ್ನು ಆಫ್ರಿಕದ ಕುಲೀನತೆ ಮತ್ತು ಬ್ರಿಟಿಷ್ ಘನತೆಗಳ ಸಮಪಾಕವೆಂದು ಕರೆದಿದ್ದರು. ಅವರು ಇಂಗ್ಲಿಷ್ ಬಗ್ಗೆ ಆತ್ಮೀಯ ಒಲವಿರುವವರೆಂಬುದು ಅಷ್ಟೇ ಸತ್ಯ. ಮನುಷ್ಯನೆಂದರೆ ಇಂಗ್ಲಿಷಿನವ ಎಂಬ ನಂಬಿಕೆಯಿಂದ ಪ್ರೇರಣೆ ಪಡೆದರು.

ಬ್ರಿಟಿಷ್ ವಸಾಹತುಶಾಹಿ ಧೋರಣೆಯನ್ನು ಅವರು ವಿರೋಧಿಸುತ್ತಾರೆ. ಬ್ರಿಟಿಷ್ ಶೈಲಿಯನ್ನು ಅವರು ತಮ್ಮ ದಿರಿಸಿನಿಂದ ನಡವಳಿಕೆಯವರೆಗೆ ಅನುಕರಿಸುತ್ತಾರೆ. ಅಮೆರಿಕ ಅಥವಾ ಯೂರೋಪ್‌ನವರಿಗಿಂತ ಬ್ರಿಟಿಷ್ ಶ್ರೋತೃವರ್ಗ ಅವರಿಗೆ ಬಹಳ ಮುಖ್ಯ, ಇಬ್ಬರೂ ಕ್ರಿಕೆಟ್ ಬಗ್ಗೆ ಚರ್ಚಿಸುತ್ತ ಬಹಳ ಕಾಲ ಕಳೆಯುವುದರಿಂದ ನಿರ್ದಿಷ್ಟವಾಗಿ ಜಾನ್ ಮೇಜರ್ ಒಂದಿಗಿನ ಭೇಟಿ ತುಂಬ ಖುಷಿಕೊಡುತ್ತದೆಂದು ಒಮ್ಮೆ ಅವರೇ ಹೇಳಿದ್ದರು.

ಮಂಡೇಲ ಕೆಲವು ವಿಷಯಗಳ ಬಗ್ಗೆ ಅಂದರೆ ಮಾಧ್ಯಮಗಳು–ಪ್ರದೇಶಗಳು ತಾವು ಕಂಬಿಹಿಂದೆ ಇದ್ದಾಗ ಮೂಲಭೂತವಾಗಿ ಬದಲಾದ ಬಗ್ಗೆ ವಿಶೇಷ ಗಮನ ಕೊಡುವರಂತೆ ಕಾಣುವುದಿಲ್ಲ. ಕಾರಾಗೃಹದಿಂದ ಹೊರಬಂದಾಗ ದೂರದರ್ಶನ ತಂಡಗಳ ಆವೇಶದ ಧ್ವನಿ ದಕ್ಷಿಣ ಆಫ್ರಿಕದ ಪೋಲೀಸ್ ಶಸ್ತ್ರಬಲವನ್ನು ಇರುವುದಕ್ಕಿಂತ ಭಿನ್ನವಾಗಿ ಮೊಳಗಿಸುತ್ತಿವೆ ಎನಿಸಿತು. ಆದರೆ ರಾಜಕೀಯ ಚಾಣಾಕ್ಷತೆಯ ವಿಷಯಕ್ಕೆ ಬಂದಾಗ, ಗೂಢವೆನಿಸುವ ಮತ್ತು ಕಣ್ಣುಕೋರೈಸುವ ಸಾಮರ್ಥ್ಯವನ್ನು ಪ್ರಕಟಗೊಳಿಸುವಂತೆ ಅವರ ಬುದ್ಧಿ ಕೆಲಸ ಮಾಡುತ್ತದೆ. ತಂತ್ರದ ವರಸೆಯಾಗಿ ಅಹಿಂಸಾತ್ಮಕ ಹೋರಾಟದ ಬಗ್ಗೆ ಚರ್ಚಿಸುವುದು ಅವರ ದೃಷ್ಟಿಯಲ್ಲಿ ಹೇಗೆಂದರೆ, ಮಹಾ ಹಿಂಸಾವಾದಿಯೊಬ್ಬ ಒಂದು ನೈತಿಕ ತತ್ತ್ವಕ್ಕೆ ಕಿವಿಗೊಡುವುದು, ಸಂಗೀತ ಗೋಷ್ಠಿಯ ಬಳಿನಿಂತು ಒಂಟಿ ಹಾಡುಗಾರ ಸಾಂಗೋಪಾಂಗವಾಗಿ ತನ್ನನ್ನು ತಾನು ತಿದ್ದಿಕೊಳ್ಳುವಷ್ಟೆ ಸಮಂಜಸವಾದುದು.

ಬೇಗನೆ ಏಳುವಂಥವರು:

ಮಂಡೇಲಾರಿಗೆ ಬಹಳಷ್ಟು ಮಿತ್ರರಿದ್ದಾರೆ, ಸಾವಿರಾರು ಪರಿಚಯಸ್ಥರಿದ್ದಾರೆ,

ಲಕ್ಷಾಂತರ ಅಭಿಮಾನಿಗಳಿದ್ದಾರೆ. ಆದರೆ ಅವರ ಆತ್ಮೀಯರಾದವರು ಏನಾದರೂ ಇದ್ದರೆ ಕೆಲವೇ ಕೆಲವು ಜನರು ಮಾತ್ರ. ಜೈಲಿನಲ್ಲಿ ಅವರೊಂದಿಗೆ ದಶಕಗಳ ಕಾಲ ಉಳಿದಿದ್ದ ಬಹಳಷ್ಟು ಜನರನ್ನು ನಾನು ಸಂದರ್ಶಿಸಿದ್ದೇನೆ. ಅವರು ಮಂಡೇಲರನ್ನು ಗೌರವಿಸುತ್ತಾರೆ, ಪ್ರೀತಿಸುತ್ತಾರಾದರೂ ತಮಗೆ ಮಂಡೇಲ ಚೆನ್ನಾಗಿ ಗೊತ್ತು ಎಂದು ಹೇಳಿಕೊಳ್ಳುವುದಿಲ್ಲ. ಮುಂಚಿನ ವರ್ಷಗಳಲ್ಲಿ ಆಗಾಗ್ಗೆ ಕಾರಾಗೃಹದಲ್ಲಿ ದೂರವಾಗಿ ಉಳಿಯಬೇಕಾದ ಸಂದರ್ಭಗಳು ಅವರ ವರ್ತನೆಯನ್ನು ಗಟ್ಟಿಗೊಳಿಸಿದೆ; ಹೀಗಾಗಿಯೆ ತನ್ನ ಬಲಹೀನತೆಯ ದೌರ್ಬಲ್ಯವನ್ನು ಜೇಲಧಿಕಾರಿಗಳಿಗೆ ಸ್ವಲ್ಪವೂ ಗೊತ್ತಾಗಲು ಬಿಡಲಿಲ್ಲ.

ಇಂದು ನಾವು ನೋಡುತ್ತಿರುವ ಮಂಡೇಲರನ್ನು ರೂಪಿಸಿದ್ದು ಕಾರಾಗೃಹ, ಅವರನ್ನು ವಸ್ತುನಿಷ್ಠ ಮನುಷ್ಯನನ್ನಾಗಿಸಿದೆ; ಅವರು ರಾಜಿಯಾಗುವುದು ಉಳಿವಿನ ಕಾರಣಕ್ಕಾಗಿ ಮಾತ್ರ. ಅಧಿಕಾರೀ ವರ್ಗವನ್ನು ದೂರವಿಡುವುದಕ್ಕಾಗಿ ತಮ್ಮ ಸುತ್ತಲೇ ಒಂದು ಆವರಣವನ್ನು ಅವರು ಸೃಷ್ಟಿಸಿಕೊಂಡಿದ್ದಾರೆ. ಜೊತೆಗೆ ಅದು ಎಲ್ಲರನ್ನು ಬಹುಪಾಲು ದೂರವಿಟ್ಟು ಬಿಡುತ್ತದೆ.

ಮಂಡೇಲ ಬೇಗನೆ ಎದ್ದು ದೈನಂದಿನ ಕೆಲಸಗಳನ್ನು ವಾಯುವಿಹಾರ ಮಾಡುವುದರೊಂದಿಗೆ ಆರಂಭಿಸುವ ವಿಶಿಷ್ಟ ಸ್ವಭಾವವನ್ನು ರೂಢಿಸಿಕೊಂಡಿದ್ದಾರೆ. ಟ್ರಾನ್ಸ್ಕಿಯಲ್ಲಿ ನಾನು ಅವರೊಂದಿಗೆ ಇದ್ದಾಗ ನಾಡಿನ ಸುತ್ತಮುತ್ತ ತಿರುಗಾಡಿಬರುವ ಮೂರು ಗಂಟೆಗಳ ನಿಗದಿತ ಕೆಲಸಕ್ಕಾಗಿ ಪ್ರತೀದಿನ ಬೆಳಿಗ್ಗೆ ೫-೩೦ಕ್ಕೆ ಅವರನ್ನು ಭೇಟಿಯಾಗಬೇಕಾಗಿತ್ತು. ಹಳ್ಳಿಯಿಂದ ಹಳ್ಳಿಗೆ ಅವರು ನಡೆದೇ ಹೋಗುತ್ತಿದ್ದರು. ಕೆಲವೊಮ್ಮೆ ಜನರೂ ಅವರೊಂದಿಗೆ ಸೇರಿಕೊಳ್ಳುತ್ತಿದ್ದರು, ಕೆಲವರಿಗೆ ಅವರು ಯಾರೆಂಬುದೇ ಗೊತ್ತಿರುತ್ತಿರಲಿಲ್ಲ.

ಇಂಥ ಒಂದು ಸುತ್ತಾಟ ಮುಗಿದ ನಂತರ ಏಪ್ರಿಲ್ ೧೦ರ ೧೯೯೩ರಂದು ಬೆಳಿಗ್ಗೆ ನಾನು ಮತ್ತು ಮಂಡೇಲ ಅವರ ವಾಸದ ಕೋಣೆಯಲ್ಲಿ ಧ್ವನಿ ಮುದ್ರಣದ ಸಂದರ್ಶನಕ್ಕಾಗಿ ಕುಳಿತೆವು. ಕೆಲನಿಮಿಷಗಳಷ್ಟು ಮಾತ್ರ ಅವರು ಮಾತಾಡಿದ್ದರು. ಅಷ್ಟರಲ್ಲಿ ಟ್ರಾನ್ಸ್ಕಿ ಪೋಲೀಸರ ರಗ್ಬಿ ತಂಡದ ೩೦ ಜನ ಸದಸ್ಯರು ಬಂದು ಸಂದರ್ಶಕರ ಕ್ಯೂನಲ್ಲಿದ್ದಾರೆಂದೂ, ತಮ್ಮನ್ನು ಮಾತಾಡಿಸಲು ಕಾದಿದ್ದಾರೆಂದೂ ಅವರ ಮನೆಯಾಳು ಬಂದು ಹೇಳಿದ. ನೀಲಿ ಗೆರೆಗಳ ದಿರಿಸು ಮತ್ತು ಬಿಳೀ ಕಾಲುಚೀಲ ಧರಿಸಿದ್ದ ಅವರು ಗಂಭೀರವಾಗಿ ಕೂಡಲೆ ಹೊರನಡೆದರು.

ಮಂಡೇಲ ಪ್ರತಿಯೊಬ್ಬರ ಹೆಸರು ಕೇಳುತ್ತಾ, ನಗುತ್ತಾ, ೧೫ ಜನರ ಕೈ ಕುಲುಕಿದ್ದರು, ಅಷ್ಟರಲ್ಲಿ ಅವರ ಮನೆಯಾಳು ಬಂದು ಅವರಿಗಾಗಿ ತುರ್ತು ದೂರವಾಣಿ ಕರೆ ಇರುವುದಾಗಿ ಸೂಚಿಸಿದ. ಮಂಡೇಲ ವಾಸದ ಕೋಣೆಗೆ ಹಿಂದಿರುಗಿದರು. ಅವರು ಮಂಡೇಲಾರನ್ನು ಬಿಟ್ಟರೆ, ಅತ್ಯಂತ ಜನಪ್ರಿಯನಾಗಿದ್ದ ಕ್ರಿಸ್ ಹ್ಯಾನಿ ಎಂಬ ಎ. ಎನ್. ಸಿ. ಯ ಸೈನಿಕದಳದ ಮಾಜೀ ನಾಯಕ ಬಿಳೀ ಉಗ್ರಗಾಮಿಯಿಂದ ಹತ್ಯೆಯಾದನೆಂದು ಸಹಾಯಕನೊಬ್ಬನಿಂದ ದೂರವಾಣಿಯ ಸುದ್ದಿ ತಿಳಿ

ದರು. ಫೋನನ್ನು ಕೆಳಗಿಟ್ಟ ಮಂಡೇಲ ದೂರದಲ್ಲೆಲ್ಲೋ ನೋಡಿದರು. ಅವರ ಮುಖ ನೋವಿನಿಂದ ಮತ್ತು ಚಿಂತೆಯಿಂದ ಕೂಡಿತ್ತು. ಆ ಕ್ಷಣಕ್ಕೆ ಹ್ಯಾನಿಯ ಸಾವು, ಸರಕಾರದೊಂದಿಗಿನ ಮಾತುಕತೆಗೆ ಅಂತ್ಯವನ್ನು ಮತ್ತು ಬಿಳಿ ಕಪ್ಪು ವರ್ಣದವರ ನಡುವಿನ ಅಂತರ್ ಯುದ್ಧದ ಮರಳಿಕೆಯನ್ನು ಗುರುತಿಸಿತು.

ಅನಂತರ ಮಂಡೇಲ ಎದ್ದು ನಿಂತು ನಡುವೆ ತೊಂದರೆಯಾದದ್ದಕ್ಕೆ ಮತ್ತು ಸಂದರ್ಶಕರನ್ನು ಭೇಟಿಯಾಗಲು ಮರಳಿದ್ದಕ್ಕೆ ನನ್ನಲ್ಲಿ ಕ್ಷಮೆಯಾಚಿಸಿದರು. ಅವರು ಮತ್ತೆ ನಗುವನ್ನು ಧರಿಸಿ ಧನ್ಯತೆಯನ್ನು ಸೂಸುತ್ತಿದ್ದ ಟ್ರಾನ್ಸ್ಕಿ ಪೋಲೀಸ್ ರಗ್ಬಿ ತಂಡದ ಉಳಿದ ೧೫ ಜನರ ಕೈ ಕುಲುಕಿದರು.



ನೀನು ಇತರರಿಂದ ಆದರಾತಿಥ್ಯ ಪಡೆಯಬೇಕೆನ್ನುವುದಾದರೆ ನೀನೂ ಇತರರಿಗೆ ಅವನ್ನು ನೀಡಿ ಸತ್ಕರಿಸು. ನಿನ್ನನ್ನು ಇತರರು ಪ್ರೀತಿಸುವದಿಲ್ಲ ಎಂದು ಶೋಕಿಸದಿರು. ನೀನು ಇತರರನ್ನು ಮಮತೆಯಿಂದ ಕಾಣಲು ನಿನ್ನನ್ನು ಇತರರು ತೆಗಳಿದರೆಂದು ಸಿಟ್ಟಾಗದಿರು. ನೀನು ಇತರರನ್ನು ತೆಗಳಲು ಮುಂದಾಗದಿರು.

—ಸೋಮದೇವ

ಜನನಕ್ಕಿಂತಲೂ ನನಗೆ ಮರಣವು ಮೆಚ್ಚುಗೆಯಾಗಿರುವುದು. ಮರಣಕ್ಕಾಗಿ ನಾನು ಅಂಜುವುದಿಲ್ಲ. ನಗೆಗಿಂತಲೂ ದುಃಖವು ನನ್ನ ಮೆಚ್ಚುಗೆ ಪಡೆಯುವುದು. ನೋವಿಗಾಗಿ ನಾನು ಹಿಂಜರಿಯುವುದಿಲ್ಲ.

—ಕ್ರಿಸ್ತ

ಕಾವೇರಿ ನಾಡಿನಲ್ಲಿ ಬತ್ತದ ಬರ

ಜಿ. ಟಿ. ರಾಘವೇಂದ್ರ

ನೆಲ ಹೊಲವಾಗಿ ಬೆಳೆನೀಡಿ ವ್ಯಕ್ತಿಗೆ ಅಹಾರ ಒದಗಿಸಬೇಕಾದರೆ ವ್ಯಕ್ತಿ-ಪರಿಸರ ಅನ್ಯೋನ್ಯತೆಯನ್ನು ಅಖಂಡವಾಗಿ ಗಮನಿಸಿ ತದನುಸಾರ ಮುಂದುವರಿಯ ಬೇಕು. ಇಲ್ಲಿ ಸರ್ಕಾರ-ಕೃಷಿಕ-ಕೃಷಿ ಏಕಘಟಕವಾಗಿ ವರ್ತಿಸುವುದು ಅವಶ್ಯ. ಆದರೆ ಸರ್ಕಾರದ ಸಮೀಪದೃಷ್ಟಿಯ (myopia) ಕಾರಣವಾಗಿ ಕೃಷಿ ನೀತಿ ಯಲ್ಲಿ ಹದ ತಪ್ಪಿತು. ಕೃಷಿಕ-ಭೂಮಿ ಸಂಬಂಧದಲ್ಲಿ ಮಾನವೀಯತೆಗಳಿಸಿ ಆರ್ಥಿಕತೆ ಪ್ರಾಧಾನ್ಯಗಳಿಸಿತು. ಮಾನವೀಯತಾಶೂನ್ಯ ಆರ್ಥಿಕತೆ ಏನು ಮಾಡೀತು? ಓದಿ ಈ ಲೇಖನ. 'ಕಾವೇರಿ ನಾಡಿನಲ್ಲಿ' ಕೇವಲ ಸಾಂಕೇತಿಕ ಎಂಬುದನ್ನು ಗಮನಿಸಬೇಕು.

ಕಳೆದ ೨೫ ವರ್ಷಗಳಲ್ಲಿ ಕೊಡಗಿನ ಗ್ರಾಮೀಣ ಪ್ರದೇಶಗಳಲ್ಲಿ ಆಗಿರುವ ಗಮನಾರ್ಹ ಬದಲಾವಣೆ ಎಂದರೆ ಭತ್ತ ಬೆಳೆಯುತ್ತಿದ್ದ ಭೂ ಪ್ರದೇಶಗಳ ಸಂಕೋಚನ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಆರಂಭದ ದಶಕಗಳಲ್ಲಿ ದೇಶ ಅಕ್ಕಿಯನ್ನು ಆಮದು ಮಾಡಿಕೊಳ್ಳುತ್ತಿತ್ತು. ಆದರೆ, ಸರಕಾರದ ನೂತನ ಆಹಾರ ನೀತಿಯಿಂದಾಗಿ ಮತ್ತು ವಿಜ್ಞಾನಿಗಳ ಕೊಡುಗೆಗಳನ್ನು ಸ್ವೀಕರಿಸಿದ ರೈತರ ಪ್ರಯತ್ನದಿಂದಾಗಿ ಇಂದು ದೇಶದಲ್ಲಿ ಭತ್ತ ಬೆಳೆಯುವ ಪ್ರದೇಶದ ವಿಸ್ತೀರ್ಣ ಹೆಚ್ಚಾಗಿದೆ, ಅಕ್ಕಿ ಉತ್ಪಾದನೆ ಬಹಳ ಹೆಚ್ಚಾಗಿದೆ ಮಾತ್ರವಲ್ಲ ಸಾಕಷ್ಟು ಅಧಿಕ ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದೇವೆ. ಇದು ಸಂತೋಷದ, ಹೆಮ್ಮೆಯ ವಿಚಾರ. ಸಮಗ್ರ ದೇಶದ ಸ್ಥಿತಿಗೆ ಹೋಲಿಸಿದರೆ ಕೊಡಗಿನಲ್ಲಿ ಭತ್ತ ಬೆಳೆಯುವ ಪ್ರದೇಶ ಸಂಕುಚಿತಗೊಂಡದ್ದು ಯಾವ ಪರಿಣಾಮವನ್ನೂ ಬೀರುವುದಿಲ್ಲ. ಆದರೆ, ಹತ್ತಿರದಿಂದ ನೋಡಿದರೆ ಈ ಬದಲಾವಣೆಯಿಂದ, ಪ್ರಖ್ಯಾತವಾದ ಕೊಡಗಿನ ಭತ್ತದ ವ್ಯವಸಾಯಕ್ಕೆ ಪರೋಕ್ಷವಾಗಿ ನಿಧಾನವಾಗಿ ಮಾರಕ ಹೊಡೆತ ಬೀಳುತ್ತಿರುವುದು ಈಗಾಗಲೇ ಅನುಭವಕ್ಕೆ ಬರಲಾರಂಭವಾಗಿ ಹೋಗಿದೆ.

೧೯೭೪ರ ಮೊದಲು, ಎಂದರೆ ಭೂ ಸುಧಾರಣಾ ಕಾನೂನು ಕಟ್ಟುನಿಟ್ಟಾಗಿ ಜಾರಿಗೆ ಬರುವ ಮೊದಲು, ಕೊಡಗಿನಲ್ಲಿ ಭತ್ತದವ್ಯವಸಾಯ ಕಾಫಿ,ಏಲಕ್ಕಿ ತೋಟದ ಕೃಷಿಯೊಡನೆ ಹೊಂದಿಕೊಂಡು ಹೋಗುತ್ತಿತ್ತು—ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ಆ ದಿನಗಳಲ್ಲಿ ಭತ್ತ ವ್ಯವಸಾಯದ ಕ್ರಮ

ವನ್ನು ಮೂರು ವಿಧದಲ್ಲಿ ವಿಂಗಡಿಸಬಹು ದಿತ್ತು. ಅ) ವಾರಗಾರರ ಮೂಲಕ ಆ) ಗುತ್ತಿಗೆದಾರರ ಮೂಲಕ ಇ) ಸ್ವಂತ ಸಾಗುವಳಿ ಮೂಲಕ.

ಅ) ವಾರಗಾರರ ಮೂಲಕ

ಭೂಮಿ ಯಜಮಾನನದ್ದು. ಯಜಮಾನ ವಾರಗಾರನಿಗೆ ಸಂಬಳ ಕೊಡಬೇಕಾಗಿಲ್ಲ. ಭೂಮಿ ಕಂದಾಯ ಕಟ್ಟುವುದು ಯಜಮಾನನ ಹೊಣೆಗಾರಿಕೆ. ಭೂಮಿಯನ್ನು ಉತ್ತು, ಗೊಬ್ಬರಹರಡಿ ಬೀಜ ಬಿತ್ತಿ, ನೀರಿನ ವ್ಯವಸ್ಥೆ, ಗದ್ದೆ ವ್ಯವಸ್ಥೆ ನೋಡಿಕೊಂಡು ನಾಟಿ ನೆಟ್ಟು ಬೆಳೆಸಿ ಕೊಯ್ದು ಸಾಗಿಸಿ ಒಕ್ಕಲು ಹೊಡೆದು ಭತ್ತ ಹುಲ್ಲು ಬೇರ್ಪಡಿಸಿ ಅನಂತರ ಬೆಳೆಸಿದ ಭತ್ತ ಹುಲ್ಲಿನಲ್ಲಿ ಅರ್ಧಭಾಗವನ್ನು ಯಜಮಾನನಿಗೊಪ್ಪಿಸಿ ಉಳಿದರ್ಧವನ್ನು ತಾನು ಉಳಿಸಿಕೊಳ್ಳುತ್ತಿದ್ದ—ವಾರಗಾರ. ಹೂಡಲು ಬೇಕಾದ ಜೊತೆ ಎತ್ತುಗಳಲ್ಲಿ ಒಂದು ವಾರಗಾರನದು ಇನ್ನೊಂದು ಯಜಮಾನನದು. ಎರಡೂ ಯಜಮಾನನದ್ದಾದರೆ ಒಂದರ 'ಹೆಗಲು ಬಾಡಿಗೆ' ವಾರಗಾರ ಯಜಮಾನನಿಗೆ ಕೊಡಬೇಕಾಗುತ್ತಿತ್ತು. ವಾರಗಾರನಿಗೆ ಅಗತ್ಯ ಬಿದ್ದಾಗ ಯಜಮಾನ ಭತ್ತ ಅಥವಾ ಹಣವನ್ನು ಸಾಲರೂಪದಲ್ಲಿ ಕೊಡುತ್ತಿದ್ದ. ಆನಂತರ ವಸೂಲಿ ಮಾಡಿಕೊಳ್ಳುತ್ತಿದ್ದ. ಆದರೆ, ಯಜಮಾನ ಎಂದೂ ಬಡ್ಡಿ ವಸೂಲ್ಮಾಡುತ್ತಿರಲಿಲ್ಲ. ವ್ಯವಹಾರಗಳೆಲ್ಲವೂ ಬಾಯಿಮಾತಿನಲ್ಲೇ ಇರುತ್ತಿದ್ದುವು—ಅಷ್ಟರ ಮಟ್ಟಿಗೆ ಪರಸ್ಪರ ನಂಬಿಕೆ ವಿಶ್ವಾಸವಿರುತ್ತಿದ್ದುವು. ಒಬ್ಬ ವಾರಗಾರ (ಮತ್ತು ಅವನ ಹೆಂಡತಿ ಮಕ್ಕಳು ಸೇರಿ) ೧೦೦ ಭಟ್ಟೆ ಭೂಮಿ (ನೂರು ಭಟ್ಟೆ= ಮೂರುವರೆ ಎಕ್ರೆ)ಯನ್ನು 'ವಾರ'ಮಾಡುತ್ತಿದ್ದ. ಜನರ ಮತ್ತು ಜಾನುವಾರುಗಳ ಸಂಖ್ಯೆ ಹೆಚ್ಚಿದ್ದರೆ ೨೦೦ ಭಟ್ಟೆ ಭೂಮಿಯನ್ನು ಮಾಡಲು ಒಪ್ಪುತ್ತಿದ್ದ.

ಆ) ಗುತ್ತಿಗೆದಾರನ ಮೂಲಕ

ಗುತ್ತಿಗೆದಾರ ಭೂಮಾಲಿಕನಿಗೆ ೧೦೦ ಭಟ್ಟೆ ಭೂಮಿಯಲ್ಲಿ ಇಂತಿಷ್ಟು ಭಟ್ಟೆ ಭತ್ತ ಕೊಡಲು ಸಾಧ್ಯ ಎಂದು ಒಪ್ಪಿಕೊಳ್ಳುತ್ತಿದ್ದ. ಹೂಡುವ ಎತ್ತಿನಿಂದ ಹಿಡಿದು ಪ್ರತಿಯೊಂದಕ್ಕೂ ಅವನೇ ಹೊಣೆಗಾರ. ಇವನಿಗೂ ಅಗತ್ಯಬಿದ್ದಾಗ ಯಜಮಾನ ಭತ್ತ ಅಥವಾ ಹಣವನ್ನು ಸಾಲವಾಗಿ ಕೊಡುತ್ತಿದ್ದ. ಇಲ್ಲಿಯೂ ವ್ಯವಹಾರಗಳೆಲ್ಲವೂ ಬಾಯಿಮಾತಿನಲ್ಲಿಯೇ ಸಾಗುತ್ತಿದ್ದುವು.

ಇ) ಸ್ವಂತ ಸಾಗುವಳಿ

ಯಜಮಾನನಾದವ ಆಳುಗಳನ್ನು ಇಟ್ಟುಕೊಂಡು ತನಗೆ ಬೇಕಾದಂತೆ ಕೆಲಸ ಮಾಡಿಸಿಕೊಳ್ಳುತ್ತಿದ್ದ. ಇಲ್ಲಿ ಖರ್ಚು ಆದಾಯಗಳ ಹೊಣೆಗಾರಿಕೆ ಸಂಪೂರ್ಣ ಯಜಮಾನನದು. ಭೂ ಹಿಡುವಳಿ ಕಾನೂನು ಜಾರಿಗೆ ಬಂದ ಮೇಲೆ ಈ ಕ್ರಮದ ವ್ಯವಸಾಯವೇ ಹೆಚ್ಚಾಯಿತು.

ಈ ಮೇಲಿನ ಮೂರು ಕ್ರಮಗಳಲ್ಲೂ ವಾಸಸ್ಥಳ, ನೀರಿನ ವ್ಯವಸ್ಥೆ ಉರವಲು ಹೊಂದಿಸಿಕೊಡುವ ಜವಾಬ್ದಾರಿಕೆ ಯಜಮಾನನದಾಗಿತ್ತು.

೧೯೭೪ರಲ್ಲಿ ಭೂಸುಧಾರಣಾ ಕಾನೂನು ಕಟ್ಟುನಿಟ್ಟಾಗಿ ಜಾರಿಗೆ ಬಂದಾಗ ಕೆಲವು ಭೂಮಾಲಿಕರು ಭೂಮಿಯನ್ನು ಕಳ

ಕೊಂಡರೆ ಕೆಲವು ವಾರಗಾರರು, ಗುತ್ತಿಗೆದಾರರು 'ಡಿಕ್ಲರೇಶನ್' ಕೊಟ್ಟು ಪಡೆಕೊಂಡರು. ಒಟ್ಟಿನಲ್ಲಿ ಈ ಕಾನೂನು ಜಾರಿಗೆ ಬಂದ ತತ್‌ಕ್ಷಣ ಭೂಮಾಲಿಕ ಮತ್ತು ವಾರಗಾರ, ಗುತ್ತಿಗೆದಾರರ ಪರಸ್ಪರ ನಂಬಿಕೆ ವಿಶ್ವಾಸ ಹಾಳಾಗಿ ಹೋದುವು. ಡಿಕ್ಲರೇಶನ್ ಕೊಡದೆ ಉಳಿದ ವಾರಗಾರ, ಗುತ್ತಿಗೆದಾರರಿಗೆ ಯಜಮಾನನೇ ಪರಿಹಾರ ಧನವಿತ್ತು ಗದ್ದೆ ಬಿಡಿಸಿ, ತಾನೇ ವ್ಯವಸಾಯಕ್ಕೆ ತೊಡಗಿದ. ಒಟ್ಟಿನಲ್ಲಿ ಈ ಕಾನೂನು ಅನುಷ್ಠಾನಕ್ಕೆ ಬಂದೊಡನೆ ಕೊಡಗಿನ ಹಳ್ಳಿಗಳ ಶಾಂತ ಪರಿಸ್ಥಿತಿ ಕದಡಿ ಹೋಯಿತು—ಕ್ರಮೇಣ ಬದಲಾದ ಪರಿಸ್ಥಿತಿಗೆ ಹೊಂದಿಕೊಂಡಿತು.

ಭೂಸುಧಾರಣಾ ಕಾನೂನು ಅನುಷ್ಠಾನಕ್ಕೆ ಬಂದನಂತರದ ಪರಿಣಾಮಗಳು

೧) ವಾರಗಾರರ, ಗುತ್ತಿಗೆದಾರರ ಮತ್ತು ಯಜಮಾನನ ಪರಸ್ಪರ ನಂಬಿಕೆ, ವಿಶ್ವಾಸ ಹೊರಟು ಹೋದುವು. ಬದಲಾಗಿ ಸಂಶಯ ಆರಂಭವಾಯಿತು.

೨) ಬಹಳ ವರ್ಷಗಳಿಂದ ಕುಟುಂಬ ಪಾರಂಪರಿಕವಾಗಿ ಬಂದುಕೊಂಡಿದ್ದ ವಾರಗಾರ, ಗುತ್ತಿಗೆದಾರ ವ್ಯವಸಾಯಕ್ರಮ ನಶಿಸಲಾರಂಭಿಸಿತು. ಭೂಮಾಲಿಕರು ಹೊಸಬರಿಗೆ ಗದ್ದೆ 'ವಾರ'ಕ್ಕೆ ಕೊಡಲು ಹಿಂದೇಟು ಹಾಕಲಾರಂಭಿಸಿದರು. ಹೊಸಬರಿಗೂ ಗದ್ದೆ 'ವಾರ' ಮಾಡುವುದೇ ಬೇಡ ಎನಿಸಲಾರಂಭಿಸಿತು.

೩) ಗದ್ದೆ ಕಳೆಕೊಂಡ ವಾರಗಾರ, ಗುತ್ತಿಗೆದಾರರು ಅನ್ಯಮಾರ್ಗವಿಲ್ಲದೆ ಯಜಮಾನನ ಗದ್ದೆಗಳಲ್ಲಿ ಸಂಬಳದ ಆಳಾಗಿ ದುಡಿಯತೊಡಗಿದರು. ಆದರೆ, ಅವರಿಗೆ ಅದುವರೆಗೆ ಗದ್ದೆಯಮೇಲಿದ್ದ ಪ್ರೀತಿ, ಕೆಲಸದ ಮೇಲಿದ್ದ ಶ್ರದ್ಧೆ ನಶಿಸಿ ಸಂಬಳಕ್ಕೆ ತಕ್ಕ ಕೆಲಸ ಮಾಡುವಂತಾಯಿತು.

೪) ವಾರಗಾರ, ಗುತ್ತಿಗೆದಾರರು ಸಂಬಳದ ಆಳುಗಳಾದರೂ ಅವರ ಪ್ರಾಯ ಪ್ರಬುದ್ಧ ಮಕ್ಕಳು ಸಂಬಳದ ಆಳುಗಳಾಗಿ ಕೆಲಸ ಮಾಡಲು ನಿರಾಕರಿಸಿದರು ಮಾತ್ರವಲ್ಲ ಜಾಗವನ್ನೇ ಬಿಟ್ಟುಹೋದರು.

೫) ಭೂಮಾಲಿಕರು ತಾವೇ ಉತ್ಸಾಹದಿಂದ ಗದ್ದೆ ವ್ಯವಸಾಯ ಆರಂಭಿಸಿದರೂ ನುರಿತ ಗಂಡು ಮತ್ತು ಹೆಣ್ಣಾಳುಗಳ ತೀವ್ರ ಕೊರತೆಯಿಂದಾಗಿ ಬಳಲಿ ಹೋದರು.

೬) ತಾವೇ ಸ್ವತಃ ವ್ಯವಸಾಯ ಆರಂಭಿಸಿದ ಭೂಮಾಲಿಕರು ಪ್ರತಿ ಖರ್ಚು ಮತ್ತು ಉತ್ಪತ್ತಿಯನ್ನು ಲೆಕ್ಕ ಹಾಕಿ ಭತ್ತವ್ಯವಸಾಯವು ಲಾಭದಾಯಕವಲ್ಲ ಮತ್ತು ಸ್ವಲ್ಪ ಎಚ್ಚರ ತಪ್ಪಿದರೆ ಅಥವಾ ಮಳೆ ಕೈಕೊಟ್ಟರೆ ಪೂರ್ಣ ನಷ್ಟದಾಯಕವಾದದ್ದು ಎಂಬ ಕಟು ಸತ್ಯವನ್ನು ಕಂಡುಕೊಂಡರು.

೭) ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಅಧಿಕ ಇಳುವರಿ ನೀಡುವ ಹೊಸ ತಳಿಗಳಿಂದ ಪರಿಸ್ಥಿತಿ ಸುಧಾರಿಸಬಹುದೆಂದು ಭ್ರಮಿಸಿ ಖರ್ಚನ್ನು ಏರಿಸಿಕೊಂಡರೇ ವಿನಾ ಲಾಭಾಂಶ ಏರಲಿಲ್ಲ.

೮) ಎಂಬತ್ತರ ದಶಕದಲ್ಲಿ ಆಳುಗಳ ಕೊರತೆ, ಜಾನುವಾರುಗಳನ್ನು ಸಾಕಲಿರುವ ತೊಂದರೆಗಳನ್ನು ಗಮನಿಸಿ ವ್ಯವಸಾಯವನ್ನು

ಯಾಂತ್ರೀಕರಿಸುವ ಉದ್ದೇಶದಿಂದ ಟ್ರೇಕ್ಟರ್, ಪವರ್‌ಟಿಲ್ಲರ್ ಕೊಂಡರು. ಇದರ ಪರಿಣಾಮವಾಗಿ ಸಾವಯವ ಗೊಬ್ಬರ ಕೊರತೆ ಉಂಟಾಯಿತು.

ಇದನ್ನು ಹೋಗಲಾಡಿಸಲು ನವೀನ ತಳಿಯ ಉಪಯೋಗ ಹಾಗೂ ರಾಸಾಯನಿಕ ಗೊಬ್ಬರ ಬಳಕೆ ಮಾಡಲಾರಂಭಿಸಲಾಯಿತು. ಹೊಸ ತಳಿಗಳು ಹವಾಮಾನಕ್ಕೆ ಒಗ್ಗಿಕೊಳ್ಳದೆ ನಾನಾ ಕಾಯಿಲೆಗಳಿಗೆ ತುತ್ತಾದುವು. ಇದಕ್ಕೆ ಪರಿಹಾರ ಶೋಧಿಸಲು ಕ್ರಿಮಿ, ಕೀಟನಾಶಕಗಳ ಬಳಕೆಗೆ ಪ್ರಯತ್ನಿಸಲಾಯಿತು. ಇದೆಲ್ಲದರ ಒಟ್ಟು ಪರಿಣಾಮ— ಮಾನಸಿಕ ಗೊಂದಲ, ಆರ್ಥಿಕ ನಷ್ಟ, ನೆಲಹಾಳು.

೯) ಟ್ರೇಕ್ಟರ್ ಬಳಕೆಯಿಂದಾಗಿ ಭೂಮಿಯ ಮಟ್ಟದಲ್ಲಿ ಏರುಪೇರು ಉಂಟಾಯಿತು, ಏರಿಗಳು ಹಾಳಾದುವು. ಹಾಳಾದ ಏರಿಗಳನ್ನು ಸರಿಪಡಿಸಲು ಈಗಾಗಲೇ ಉಂಟಾದ ಆರ್ಥಿಕ ನಷ್ಟದಿಂದ ಉದಾಸೀನತೆ ತಲೆದೋರಿತು.

೧೦) ಜಾನುವಾರುಗಳನ್ನು ಕಳಕೊಂಡದ್ದರಿಂದ ಬೇಸಿಗೆಯಲ್ಲಿ ಗದ್ದೆ ಏರಿಗಳಲ್ಲಿ ದನಗಳು ಮೇಯದೆ ಏರಿತುಂಬಾ ಕಾಡು, ನೊಜೆ ಬೆಳೆಯಿತು. ಏರಿ ಇಲಿ ಹೆಗ್ಗಣಗಳ ವಾಸಸ್ಥಳಗಳಾದುವು.

೧೧) ಮೇಲಿನ ಕಾರಣಗಳಿಂದ ಬೇಸತ್ತು ಹೋದ ಭೂಮಾಲಿಕರು ಸಾವಿರಾರು ಎಕ್ರೆ ಭೂಪ್ರದೇಶಗಳನ್ನು 'ಹುಡ್ಲು' ಬಿಟ್ಟರು ಮಾತ್ರವಲ್ಲ ಏನಾದರೂ ಸರಿ 'ಭತ್ತ ವ್ಯವಸಾಯ ಮಾಡಲಾರೆ' ಎಂದು ನಿರ್ಧರಿಸಿದರು.

೧೨) ಆಳುಗಳನ್ನು ಗದ್ದೆ ಕೆಲಸಕ್ಕೆ ಬಿಟ್ಟರೆ ತೋಟದ ಕೆಲಸ ಹಾಳಾಗುತ್ತದೆ ಎಂಬ ವ್ಯಾವಹಾರಿಕ ದೃಷ್ಟಿಯಿಂದ ಮತ್ತು ಆಳುಗಳ ಕೊರತೆ ಬಹಳವಾಗಿರುವುದರಿಂದ ಇರುವ ಕೆಲವೇ ಆಳುಗಳನ್ನು ತೋಟದ ಕೆಲಸಗಳಿಗೆ ಬಳಸಿಕೊಳ್ಳಲಾರಂಭಿಸಿದರು. ಆದ್ದರಿಂದ ಗದ್ದೆಗಳನ್ನು ಕಡೆಗಣಿಸಲಾಯಿತು.

೧೩) ಅನೇಕ ಭೂಮಾಲಿಕರು ಭತ್ತಕ್ಕಿಂತ ಏಲಕ್ಕಿ ಕೃಷಿಯಲ್ಲಿ ಆದಾಯ ಹೆಚ್ಚೆಂಬ ದೃಷ್ಟಿಯಿಂದ ನೀರಾವರಿ ಸೌಕರ್ಯವಿರುವ ಗದ್ದೆಗಳಲ್ಲಿ ನೆರಳು ಗಿಡಗಳನ್ನು ನೆಟ್ಟು ಕೃತಕ ಕಾಡು ಬೆಳೆಯಿಸಿ ಏಲಕ್ಕಿ ಕೃಷಿ ಆರಂಭಿಸಿದರು. ಕೆಲವು ಕಡೆಗಳಲ್ಲಿ ಸರಕಾರದಿಂದ ಪ್ರೋತ್ಸಾಹ ಧನ ಸಿಗುತ್ತದೆ ಮತ್ತು ಅತ್ಯಧಿಕಲಾಭದಾಯಕ ಎಂಬ ಉದ್ದೇಶದಿಂದ ರೇಷ್ಮೆ ಕೃಷಿಯನ್ನು ಆರಂಭಿಸಿದರು.

೧೪) ಇತ್ತೀಚಿನ ವರ್ಷಗಳಲ್ಲಿ ಕೇರಳದ ಅನೇಕ ಶುಂಠಿ ಬೆಳೆಗಾರರು ಕೊಡಗಿಗೆ ಬಂದು ಭೂಮಾಲಿಕರಿಗೆ ವಿಶೇಷವಾದ ಹಣದ ಆಮಿಷ ಒಡ್ಡಿ ಎಕರೆಗೆ ಇಂತಿಷ್ಟೆಂದು ಹಣ ನೀಡಿ (ಈ ಮೊತ್ತ ಭತ್ತ ಬೆಳೆಸಿ ಸಿಗುತ್ತಿದ್ದ ಆದಾಯಕ್ಕಿಂತ ಅದೆಷ್ಟೋಪಟ್ಟು ಜಾಸ್ತಿ) ಶುಂಠಿ ಬೆಳೆಸಿ ವಿಪುಲವಾಗಿ ಹಣಗಳಿಸಿದರು. ಇದನ್ನು ಕಂಡ ಭೂಮಾಲಿಕರು ಅನಂತರ ತಾವೇ ಬೆಳೆಸಲಾರಂಭಿಸಿದರು.

೧೫) ಶುಂಠಿ ಆದಾಯ ವಿಪರೀತವಾಗಿದ್ದದರಿಂದ ಶುಂಠಿ ಬೆಳೆಗಾರರು ಕೆಲಸಗಾರರ ಸಂಬಳ ಬಹಳಷ್ಟು ಏರಿಸಿದರು. ಆದ್ದರಿಂದ ಕೆಲಸಗಾರರು ಶುಂಠಿ ವ್ಯವಸಾಯದ ಕಡೆ

ಧಾವಿಸತೊಡಗಿದರು. ಇದರಿಂದಾಗಿ ತೋಟದಲ್ಲಿ ಆಳುಗಳ ಕೊರತೆ ಉಂಟಾಯಿತು—ಭತ್ತ ವ್ಯವಸಾಯಕ್ಕೆ ಆಳುಗಳೇ ಸಿಗದಂತಾಯಿತು. ಹಾಗೆ ಸಿಕ್ಕಿದರೂ ಸಂಬಳ ವಿಪರೀತವಾಗಿ ಏರಿಹೋಯಿತು. ಇದರಿಂದಾಗಿ ಭತ್ತ ವ್ಯವಸಾಯ ಸಂಪೂರ್ಣವಾಗಿ ನಷ್ಟದ ಹಾದಿ ಹಿಡಿಯಿತು.

೧೬) ಹಳ್ಳಿಹಳ್ಳಿಗಳಲ್ಲಿ ವಿದ್ಯಾಭ್ಯಾಸಕ್ಕೆ ಮಹತ್ವ ಬಂತು. ಇದರಿಂದಾಗಿ ಮನೆ ಮನೆಗಳಲ್ಲಿ ತರುಣರು ಆರಂಭಿತ ವಿದ್ಯಾಭ್ಯಾಸವನ್ನು ಪಡೆದರೇ ವಿನಹ ವಿದ್ಯಾಭ್ಯಾಸವನ್ನು ಪೂರ್ಣ ಮಾಡಲಾರದೆ ಹೋದರು. ಇಂತವರು ಅತ್ತ ಪೂರ್ಣ ವಿದ್ಯಾವಂತರಾಗದೆ ಇತ್ತ ಗದ್ದೆ ವ್ಯವಸಾಯ, ಕೃಷಿ ಕೆಲಸಗಾರರಾಗುವುದು ತಮ್ಮ ಗೌರವಕ್ಕೆ ಕಡಿಮೆ ಎಂದು ಭಾವಿಸ ತೊಡಗಿದರು—ಆದರೆ ಪಟ್ಟಣ ನಗರಗಳಲ್ಲಿ ಎಂಥಹ ಕೆಲಸ ಸಿಕ್ಕಿದರೂ ಮಾಡಬಹುದು ಎಂದು ಅತ್ತಕಡೆ ಧಾವಿಸ ತೊಡಗಿದರು.

೧೭) ಭೂಮಿಯ ಮೇಲಿನ ಪ್ರೀತಿಯಿಂದ ಭತ್ತ ವ್ಯವಸಾಯದ ಮೇಲಿನ ವ್ಯಾಮೋಹದಿಂದ ಕೆಲವು ಭೂಮಾಲಿಕರು ನಷ್ಟವನ್ನು ಪರಿಗಣಿಸದೆ ಭತ್ತ ವ್ಯವಸಾಯ ಮಾಡುವವರಿದ್ದಾರೆ. ಆದರೆ ಇವರು ಕೆಲವೇ ಮಂದಿ ಮಾತ್ರ.

೧೮) ಕೊಡಗಿನಲ್ಲಿ ಕೆಲವು ಭೂ ಭಾಗಗಳಿವೆ. ಇಲ್ಲಿ ಭತ್ತ ಬೆಳಸದೆ ಅನ್ಯ ಮಾರ್ಗವೇ ಇಲ್ಲ. ಇಂಥ ಕಡೆಗಳಲ್ಲಿ ಮಾತ್ರ ಭತ್ತದ ವ್ಯವಸಾಯ ಮುಂದುವರಿದಿದೆ.

೧೯) ಒಟ್ಟಿನಲ್ಲಿ ಮೇಲಿನ ಎಲ್ಲಾ ಕಾರಣಗಳಿಂದ ಮತ್ತು ಮಳೆಯ, ಹವಾಗುಣದ ಏರಿಳಿತಗಳಿಂದಾಗಿ ಭೂ ಮಾಲಿಕರು ತಮ್ಮ ಸ್ವಂತ ಉಪಯೋಗಕ್ಕೆ ಎಷ್ಟುಬೇಕೋ ಅಷ್ಟು ಭತ್ತವನ್ನು ಮಾತ್ರ ಬೆಳಸಿ ಉಳಿದ ಭೂ ಭಾಗವನ್ನು ಕಾಫಿ, ಏಲಕ್ಕಿ, ಕಿತ್ತಳೆ, ಒಳ್ಳೆಮೆಣಸು ಕೃಷಿಗೂ ಹಾಗೂ ಇತ್ತೀಚೆಗೆ ವಿಶೇಷವಾಗಿ ಪ್ರಚಾರಕ್ಕೆ ಬರುತ್ತಿರುವ ವಿದೇಶೀ ವಿನಿಮಯ ಗಳಿಸುವ ಹೂವು ವ್ಯವಸಾಯ, ವೆನಿಲಾ ಕೃಷಿಗೂ ಬಳಸಿಕೊಳ್ಳುತ್ತಾರೆಯೇ ಹೊರತು ಭತ್ತ ವ್ಯವಸಾಯಕ್ಕೆ ಖಂಡಿತವಾಗಿ ತೊಡಗಿಸಿಕೊಳ್ಳಲಾರರು. ಇದು ಖಂಡಿತವಾಗಿಯೂ ಒಳ್ಳೆಯ ಬದಲಾವಣೆಯಲ್ಲ. ಆದರೆ ಪರಿಸ್ಥಿತಿ ಭೂ ಮಾಲಿಕನನ್ನು ಹಾಗೆ ಮಾಡಿಸುತ್ತಿರುವುದಾಗಿದೆ.

ಸಂಪತ್ತನ್ನು ಸಂಪಾದಿಸುವದೂ ಕಷ್ಟ, ಕೂಡಿಡುವದೂ ಕಷ್ಟ, ವೆಚ್ಚ ಮಾಡಿದರೂ ಕಷ್ಟ, ಕಳೆದುಹೋದರಂತೂ ತೀರಾ ಕಷ್ಟ, ಈ ಹಲವು ಕಷ್ಟಗಳ ನಡುವೆ ಕೊಳೆಯುವದಕ್ಕಿಂತ ಸಂಪತ್ತಿಗಿಂತ ವಿರಕ್ತಿಯೇ ಸಂಚಯ ಯೋಗ್ಯವಾದುದು.

—ಪರಮಹಂಸ

ಮೇ-೧ ಮತ್ತೊಂದು

ಜವರನಹಳ್ಳಿ ಸಿದ್ದಪ್ಪ

ಈ ನಾಡಿಗಲ್ಲ ಈ ದಿನ
ಈ ನೆಲಕಲ್ಲ ಈ ದಿನ

—ಕತೆಗಾರ

ದನ ಬಿಟ್ಟುಕೊಂಡು ಹೋಗಿದ್ದ ರಾಜಪ್ಪನನ್ನು ಹುಡುಕಿ ಹೊರಟ ಮಹೇಶನಿಗೆ ಮೈತುಂಬಾ ಆಲಸ್ಯ. ದನ ಬಿಡುವ ಹೊತ್ತಾಗಿದ್ದರೂ ಏನೊಂದನ್ನು ಎದ್ದು ಮುಗಿಸದೆ ಮುಖಕ್ಕೆ ನೀರೆರಚಿದ್ದ ಅಷ್ಟೆ. ಬೇಸಿಗೆಯ ಧೂಳು ಆಗಲೇ ಏಳಲು ಸುರುವಾಗಿತ್ತು. ಕಣದಲ್ಲಿ ರಾಟಾಣ ಹೊಡೆಯುತ್ತಿದ್ದ ದನಗಳ ಸುತ್ತು ಎಣಿಸುವವನಂತೆ ನಿಂತಿದ್ದವನು ತೋಟದ ಕಡೆ ಹೊರಟ. ರಾಜಪ್ಪನನ್ನು ಆಮೇಲೆ ನೋಡಿದರಾಯಿತೆಂದು ತೋಟದ ಪಂಪುಸೆಟ್ಟಿನ ಮನೆಯ ಮುಂದೆ ನೆರಳು ಹುಡುಕಿ ಗರಿಕೆ ಕಿತ್ತು ಬಾಯಿಗೆ ಹಾಕಿಕೊಂಡು ಅಗಿಯುತ್ತಾ ಉಗಿಯುತ್ತಾ—ಮತ್ತೆ ಕೀಳುತ್ತಾ ಅಗಿಯುತ್ತಾ ಮತ್ತೆ ಉಗಿಯುತ್ತಾ....ಹೀಗೆಯೇ....

* * *

ಆಗ....

ವೀರವೈಷ್ಣವನದಿ ತುಂಬಿದ ತೊರೆಯಾಗಿತ್ತು. ಸತ್ತೆಸೆದೆ, ಉರುಳಿಬಿದ್ದ ಮರಗಳು, ಕ್ಯಾರೆಹಾವುಗಳು ನುಗ್ಗುವ ನದಿನೀರಲ್ಲಿ ತೇಲುತ್ತಾ ಹೋಗುತ್ತಿದ್ದವು. ಆಗ ಮಹೇಶ ಬಿಳಿಕೆರೆಯ ಶಾಲೆಯ ಹುಡುಗ. ಅಪ್ಪ ಹೊಸದಾಗಿ ಬೇಸಾಯ ಆರಂಭಿಸಿದ್ದ. ತೊರೆಯ ದಂಡೆಯಲ್ಲಿ ಕಾಣಿಸಿಕೊಂಡ ಹೊಂಗೆಯ ಸಸಿಗಳನ್ನು ಕೈಚೀಲದಲ್ಲಿ ತುಂಬಿಕೊಂಡು ನರಿಕಲ್ಲು ಹೊಲದ ಬದುವಿನ ಮೇಲೆಲ್ಲ ನಡೆದಿದ್ದ. ಮಳೆಗೆ ಸಿಕ್ಕ ಹೊಲದ ಬದುಗಳು ನುಚ್ಚು ನೂರಾಗಿದ್ದವು. ಮತ್ತೆ 'ಮಟ್ಟ'ದ ಲೆಕ್ಕದಲ್ಲಿ ಬದು ಹಾಕಿಸಲು ಹೇಳಿ ಆಗಿತ್ತು. ಶಾಲೆಗೆ ಹೊಸದಾಗಿ ಬಂದ ಗಾಂಧೀ ಸಾಹಿತ್ಯ ಮಾಲೆಯ ಎಲ್ಲಾ ಪುಸ್ತಕಗಳನ್ನು ಒಂದೊಂದಾಗಿ ತಂದು ಓದುತ್ತಿದ್ದ.

* * *

ಭದ್ರಾವತಿಯಲ್ಲಿ ಬಿಳಿ ಮಲ್ಲಿನ ಜುಬ್ಬ ಪಾಯಿಜಾಮ ತೊಟ್ಟ ಲಾಯರ್ ಕೃಷ್ಣ ಭಟ್ಟರು ಪ್ರಜಾ ಸೋಷಲಿಸ್ಟ್ ಪಾರ್ಟಿಯ ಬಗ್ಗೆ ಕಬ್ಬಿಣ ಕಾರಖಾನೆ ಕಾರ್ಮಿಕ ಚಳುವಳಿಯ ಮುಂದಾಳತ್ವವಹಿಸಿ ಮಾತಾಡಿದ್ದು ಮಹೇಶನ ಮೇಲೆ ಪರಿಣಾಮ ಬೀರಿತ್ತು.

ಅವರು ಆಫೀಸಲ್ಲಿ ಕೂರಿಸಿಕೊಂಡು ಲೋಹಿಯಾ ನೆಹರೂ, ನೆಹರು ಮನೆತನದ ಬಗ್ಗೆ ಬರೆದ ಪುಸ್ತಕ ಕೊಟ್ಟ ಲೋಹಿಯಾ ಅವರು ಪಾರ್ಲಿಮೆಂಟಿನಲ್ಲಿ ಆಡುತ್ತಿದ್ದ ಮಾತುಗಳನ್ನು ಪ್ರಶಂಸಿಸುತ್ತಿದ್ದುದು ಮನಸ್ಸಿನಾಳಕ್ಕೆ ಹೋದವು.

ರಾಜಪ್ಪನೊಂದಿಗೆ ದನ ಬಿಟ್ಕೊಂಡು ಹೋದದಿನ ಬೇಸಿಗೆ ಭತ್ತದ ಬೆಳೆ ಕುಯ್ಲಾಗಿ ಇಡೀ ಗದ್ದೆ ಬಯಲೇ ಬೋಳಾಗಿತ್ತು. ವಾರದ ಹಿಂದೆ ಕುಯ್ದಿದ್ದ ಗದ್ದೆಗಳಲ್ಲಿ ಬಡ್ಡೆ ಚಿಗುರಿ ದನ ಬಾಯಾಡಿಸುತ್ತಿದ್ದವು. ಎತ್ತಲಿಂದಲೋ 'ಬರ್ರ್ರೋ' ಎಂದು ಸದ್ದು ಮಾಡಿ ಬಂದು ಹೋದ ಕ್ಯಾರೆಹಾವಿನ ಉದ್ದ, ವೇಗ, ಸದ್ದಿಗೆ ಬೆದರಿದ್ದ ಭಯಪಟ್ಟಿದ್ದ ದಿನ.

ಅಪ್ಪ : ರಂಗೇಗೌಡನತ್ತರಕ್ಕೆ ಬೆಂಗ್ಳೂರಿಗೆ ಹೋಗುವಾ ಅಂತಾ. ಎಲ್ರೂ ಹೇಳ್ತಾರೆ ಜತೆಗೆ ಭೈರವನ ಮ್ಯಾಲೆ ನಂಗೆ ನಂಬಿಕೆ.

ಅವ್ವ : ನಿಂದೊಂದು ಈ ಶಿವರಾತ್ರಿಗೆ ಸರಿ ಹೋಯ್ತದೆ, ಯುಗಾದಿಗೆ ಸರಿ ಹೋಯ್ತದೆ, ದೀವಳಿಗೆ ಸರಿ ಹೋಯ್ತದೆ.........ಇದೇ ಆಯ್ತು. ಏಟು 'ಪಕ್ಷ' ಹೋದ್ವೋ ನಂಗೂ ನೆಪ್ಪಿಲ್ಲ.

ಅಪ್ಪ : ಅವ್ನು ಬೆಳಗ್ಗೆ ಬರಹೇಳವನೇ.

ಅವ್ವ : ಇದ್ದ ಒಂದು ಚಿನ್ನದ ಉಂಗುರಾನು ಅಡವಿಟ್ಟು ಹೋಗಬೇಕಾ....?

ಕುರಿ ಕೊಡುವ ಹೊತ್ತಲ್ಲಿ ತಾವರಕೆರೆ ಯಲ್ಲಿದ್ದುದ ಕಂಡವರು ಹೇಳಿದರು, ಲೇವಾ ದೇವಿಯ ಮುಗಿಸಿಯೇ ಬಂದಿರೋದೆಂದು ಮಹೇಶನಿಗೆ ಹೊಳೆಯಿತು.

ರಂಗೇಗೌಡನ ಆಫೀಸು, ಮನೆ ಎಲ್ಲಾ ತಡಕಾಡಿದ ನಂತರ....

ರಂಗೇಗೌಡ : ಬೆಂಗಳೂರಲ್ಲಿ ಎಲ್ಲಿ ಕೆಲ್ಸ ಸಿಕ್ಕತು. 'ನೋಡು ಹೈದ್ರಾಬಾದ್‌ಗೆ ಹೋಗೋದಾದ್ರೆ ಅಲ್ಲೂ H.M.T. ಕಾರಖಾನೆಗೆ ಚೀಟಿ ಬರಕೊಡ್ತೀನಿ' ಅಂದ.

ಅಪ್ಪ ಹೊರಬಂದು "ಇವ್ನು Labour Commissioner, ನನ್ನ ಗೆಣೆಕಾರ" ಎಂದು ಹೊರ ಕೂತಿದ್ದವರಿಗೆ ಹೇಳಿದ್ದ, ಅಷ್ಟೆ.

* * *

ಸಂತೆಯ ದಿನ. ಕಾಫಿಪುಡಿ ಅಂಗಡಿಯೊಳಗೆ ಕುಳಿತಿದ್ದ ಮಹೇಶನಿಗೆ ಖಾದಿ ಜುಬ್ಬಾ ಖಾದಿ ಪಂಚೆ ಉಟ್ಟಿದ್ದವರು ಬಳಿ ಬಂದು ಕೂತವರು ಪರಿಚಯ ಕೇಳಿಕೊಂಡರು. 'ಹೋ ಮೆಳ್ಳಳ್ಳಿ ಹುಡುಗನ ನೀನು....? ಇದೇನು ಇಂಜಿನಿಯರಿಂಗ್ ಓದಿ ಕೆಲ್ಸ ಸಿಗಲ್ಲ ಅಂದ್ರೆ ಹೆಂಗೆ....ನೀನು ಬಾ ಮಂಡ್ಯಕ್ಕೆ....ನಾಳೆ ಬತ್ತೀಯಾ" ಅಂದರು.

ಅವರು ಆ ಕಡೆ ಹೋದ ಮೇಲೆ ಲಕ್ಕೇಗೌಡರ ಬಗ್ಗೆ ಬಹಳಷ್ಟು ಹೊಗಳಿಕೆಯ ಮಾತುಗಳು ಕೇಳಿ ತಿಳಿದವು.

ಅದರಂತೆ ಹೊತ್ನಂತೆ ಒಂದು ದಿನ ಬಸ್ಸು ಹಿಡಿದ.

ಕೇಳಿಕೊಂಡು ಹೊರಟಂತೆ ಸಕ್ಕರೆ ಕಂಪನಿಯೂ ಸಿಕ್ಕಿತು. ಸಂಘದ ಆಫೀಸೂ ಸಿಕ್ಕಿತು. ಸಂಘದ ಆಫೀಸ ಬಳಿ ಜವಾನ ನನ್ನು ಲಕ್ಕೇಗೌಡರ ಬಗ್ಗೆ ವಿಚಾರಿಸಿದಾಗ ಒಳಗಿದ್ದಾರೆಂದು ಸನ್ನೆಯಲ್ಲೇ ಹೇಳಿ ಹೋದ.

ಬಾಗಿಲು ದಾಟುತ್ತಿದ್ದಂತೆ ಕಛೇರಿಯಂತ ದೊಡ್ಡ ಹಾಲಿನಲ್ಲಿ ಕಬ್ಬಿಣದ ಬೀರುಗಳ ಸಂದಿಯಲ್ಲಿ ಕುಳಿತಿದ್ದವರ ಬೆನ್ನು ಕಂಡ ಮಹೇಶ ಕೈಮುಗಿಯಲು ತಯಾರಿ ನಡೆಸುತ್ತಿದ್ದ. ಅದೇ ಸಮಯಕ್ಕೆ ಲಕ್ಕೇಗೌಡರು ಕುರ್ಚಿಯಿಂದ ಮೇಲೆದ್ದರು. ಕಾಕಿನಿಕ್ಕರ್, ಕಾಕಿ ಅಂಗಿ ತೊಟ್ಟದ್ದು ಇವನಿಗೆ ಕಕ್ಕಾಬಿಕ್ಕಿ ತಂದಿತು. ಬೆಳ್ಳೂರಲ್ಲಿ ನೋಡಿದ್ದೇ ಒಂದು ತರಹ.

"ಯಾಕೆ ಹಂಗೇ ನೋಡ್ತೀಯಾ....ಇಲ್ಲಿ ಎಲ್ರೂ ಇದೇ ಯೂನಿಫಾರಂ ಹಾಕೋದು. ಬಾ ಮಗಾ ಕೂತ್ಕೊ........ ನೋಡು ನಾರಾಯಣ ಅಂತಾ ನಮ್ ಜಾತಿಯೋರೊಬ್ಬರಿದ್ದಾರೆ. ಅವರ್ಗೆ ಚೀಟಿ ಬರ್ಕೊಡ್ತೀನಿ ಹೋಗು....ಕೆಲ್ಸ ಗ್ಯಾರಂಟಿ. ಈಗ ದಿನಗೂಲಿಯ ಮೇಲೆ ತಗೋತಾರೆ....ಮುಂದಕ್ಕೆ ಖಾಯಂ ಆಗುತ್ತೆ........" ಎಂದು ಚೀಟಿ ಬರೆದು ಮುಗಿಸಿ ಹೋಗುವ ದಾರಿ ತಿಳಿಸಿ ಕೊಟ್ಟರು.

ಮಂಡ್ಯದಿಂದಾಚೆ ಮೂರು ಕಿಲೋಮೀಟರಿನಷ್ಟು ನಡದೇ ಹೋದ ಮಹೇಶನಿಗೆ ಸಲೀಸಾಗಿ ಕೆಲಸ ಸಿಕ್ಕಿತು.

ನಾರಾಯಣ ಕೇಳಿದ್ದ : "ನೀನು ಒಕ್ಕಲಿಗರವನು ತಾನೆ? ಮಹೇಶಾ ಅಂತಾ ಲಿಂಗಾಯತರಲ್ಲೂ ಹೆಸರು ಇಟ್ಕೊತಾರೆ...."

ಸ್ವಲ್ಪ ದಿನದ ನಂತರ ಡೈರಿ ಬರೆಯಲು ಸುರು ಮಾಡಿದ್ದ ಮಹೇಶ.

ಡೈರಿಯ ಹಾಳೆಗಳಲ್ಲಿ ಹೀಗೆ ಬರೆದ "ಜಾತಿಯ ಆಧಾರದ ಮೇಲೆಯೇ ನನಗೆ ಕೆಲಸ ಸಿಕ್ಕಿರುವುದು" ಎಂದು.

* * *

ವೃತ್ತಿಯಲ್ಲಿ ಇಂಜಿನಿಯರ್ ಆದರೂ ಕಲೆ, ಸಾಹಿತ್ಯ, ನಾಟಕ ಇವು ಮಹೇಶನ ಸುಪ್ತಪ್ರಜ್ಞೆ ಯಲ್ಲಿ ಅಡಗಿತ್ತು. ಓದುವುದು, ಏನಾರು ಬರೆಯಬೇಕೆಂಬುದು ಅವನಿಗೆ ಬಯಕೆಯಾಯ್ತು.

ಒಂದು ಸಂಜೆ ಲಕ್ಕೇಗೌಡರನ್ನು ಕಾಣಲೆಂದು ಸಂಘದ ಆಫೀಸಿಗೆ ಹೋದ. ನಡೆದು ಹೋಗುತ್ತಿದ್ದವನಿಗೆ ಸಂಘದ ಆಫೀಸಿನ ಮುಂದೆ ಜನ ಅದ್ದುಬಿಟ್ಟಿತ್ತು. ಹತ್ತಿರ ಹೋದಾಗ ಲಕ್ಕೇಗೌಡರು ಕಾರ್ಮಿಕರೆದುರಲ್ಲಿ ನಿಂತು ಕಾರಖಾನೆಯ ಆಡಳಿತ ವರ್ಗದ ಸಣ್ಣತನಗಳನ್ನು ಎತ್ತಿ ಆಡಿ ಎದೆಗುಂದದೆ ಕಾರ್ಮಿಕರು ಸಂಘಟಿತರಾಗಬೇಕೆಂದು ಧೈರ್ಯ ತುಂಬುತ್ತಿದ್ದುದು ಮಹೇಶನಿಗೆ ಪ್ರಿಯವೆನಿಸಿದವು.

ಮನೆಯಲ್ಲಿ ಊಟ ಮಾಡುತ್ತಿದ್ದಾಗ "ಮಗಾ....ನಾನು ಏನು ಓದಿದೀನಿ ಗೊತ್ತಾ....ಕನ್ನಡ ಬಿಟ್ಟರೆ ನಂಗೇನು ಬರಲ್ಲ.... ಮ್ಯಾನೆಜಿಮೆಂಟನವರನ್ನು ಹೆಂಗೆ ಹೆದರಿಕೇಲಿ ಇಟ್ಟದ್ದೀನಿ ಗೊತ್ತಾ...." ಎಂದರು.

ಡೈರಿಯ ಹಾಳೆಯಲ್ಲಿ ಬರೆದಿದ್ದ : "ಓದು ಜೀವಿತ ಓದಾಗಿರಬಾರದು ; ಬದುಕಿನ ಓದಾಗಿರಬೇಕು...." ಎಂದು.

ಗಾರ್ಕಿಯ 'ತಾಯಿ' ಕಾದಂಬರಿಯನ್ನು ಓದಿದ ಮಹೇಶನಿಗೆ ಲಾಯರ ಕೃಷ್ಣಭಟ್ಟರ ಮಾತುಗಳು, ಲಕ್ಕೇಗೌಡರ ಮಾತುಗಳು ಮೆಲುಕಾದವು.

ರಂಗೇಗೌಡರ ಬಗ್ಗೆ ಅಷ್ಟೆ ಯೋಚನೆ ಮಾಡಿದವನು. ಮಾರನೆಯ ದಿನ ಸಂಘದ ಆಫೀಸಿಗೆ ಹೋಗಿ ಕುಳಿತು ಲಕ್ಕೇಗೌಡರೆದುರಲ್ಲಿ ರಂಗೇಗೌಡರ ಬಗ್ಗೆ ಪ್ರಸ್ತಾಪಿಸಿದ.

ಏನೋ ಓದುತ್ತಾ ಹಿಡಿದಿದ್ದ ಫೈಲನ್ನು ರಪ್ಪನೆ ಟೇಬಲ್ಲಿನ ಮೇಲೆ ಕುಕ್ಕಿ "ಅವನು ನನ್ ಓರಗೆಯವನು....ಅಪ್ಪಿ ತಪ್ಪಿ ನಮ್ ಜಾತೀಲಿ ಹುಟ್ಟವನೇ .... ಓದವನೇ ಅನ್ನೋದು ಬಿಟ್ಟರೆ ಏನದೆ ಅವನತ್ರ.... ಮನುಷ್ಯತ್ವವಿಲ್ಲದವನು........ಕಾರ್ಮಿಕರು ಸಂಘಟನೆಯ ಮಾಡಬಾರದು ಅನ್ನೋ ಕಾರ್ಮಿಕ ಅಧಿಕಾರಿ....ಎಂಜಲು ತಿನ್ನೋರು ಮುಂದೆ ಏನಾಯ್ತಾರೆ ನೋಡು........ ಸಹಸ್ರಾರು ಕಾರ್ಮಿಕರ ಆಯ್ಯೋ ಅನ್ನಿಸೋ ಯಾವ ಅಧಿಕಾರಿಯೂ ಊರ್ಜಿತ ಆಗಲಾರ...." ಎಂದು ಕಹಿ ಕಕ್ಕಿದರು.

*   *   *

ಮುಂದೊಂದು ದಿನ, ರಂಗೇಗೌಡರ ಆಫೀಸಿಗೆ ಕಾರ್ಮಿಕ ಪ್ರತಿನಿಧಿಗಳೊಂದಿಗೆ ಹೋಗಿ ಮಹೇಶ ಕೂರುವ ಮುನ್ನಾ.... ಚೀಟಿ ಬರೆದು ಕಳುಹಿಸಿದ್ದ "ಮೆಳ್ಳಳ್ಳಿ ಮಹೇಶ ಮಂಡ್ಯ"....ಎಂದು.

ಒಳ ಹೋದಾಗ 'ನೀನು ಮೆಳ್ಳಳ್ಳಿ ಯವನೋ....' ಎಂದರು ರಂಗೇಗೌಡರು.

"ಹುಂ" ಎಂದ ಮಹೇಶ.

'ಅವೊತ್ತು ಹೈದ್ರಾಬಾದ್‌ಗೆ ಹೋಗೋ ಅಂದಾಗ ಆಗಲ್ಲಾ ಅಂದೆ ಅಲ್ವಾ....' ನಿಮ್ಮಪ್ಪ ನೋಡಿದ್ರೆ ಯಾಚ್ನೆ ಮಾಡಿ ತಾಬೆದಾರಿ ಬಾಳು ಬೇಕು...ಅಂತಾ ಕಣ್ಣೀರಿಟ್ಟ. ನೀನು ಈಗಾಗ್ಲೆ ಕೊಬ್ಬು ನಿಂತು 'ಸಂಘಟನೆ' 'ಕ್ರಾಂತಿ' ಅಂತಾ ಮಾತಾಡಂಗೆ ಆಗಿದೀಯಾ....ಅವೆಲ್ಲಾ ಬಿಡು ಆಕಾಶ ನೋಡ್ಕೊಂಡು ಬದ್ಕೊ ರೈತರ ಮಕ್ಕಳಿಗಲ್ಲ ಅದು,...ಮಳೆ ಊದ್ರೆ ಆರಂಬ....ಊರವರ ಒಡಬಾಳು ಆರತ್ಕೊಂಡು ಇರೋದು ಕಲಿ...' ಎಂದ ಎಲ್ಲರ ಎದುರಲ್ಲೇ.

ಎಲ್ಲರೆದುರಿಗೂ ಮುಖಮೂತಿ ನೋಡದೆ ಜಾಡಿಸಿದ ಕಾರ್ಮಿಕ ಅಧಿಕಾರಿ ರಂಗೇಗೌಡ. —ಬೆಂಗ್ಳೂರಲ್ಲಿ.

ಡೈರಿಯ ಹಾಳೆಯಲ್ಲಿ ಬೆಂಗ್ಳೂರಿನಿಂದ ಬಂದು ಬರೆದದ್ದು: "ಮಾನವಂತಿಕೆಯ ಬಗ್ಗೆ ಯೋಚನೆ ಮಾಡುವವನು ತನ್ನ ಬದುಕಿಗೆ ಭಯ ಪಡಬೇಕೆ? ಎಂದು.

*   *   *

ಕಂಪನಿಯಲ್ಲಿ ಮುಷ್ಕರ ನಡೆದು ತಾತ್ಕಾಲಿಕ "ನೆಪ" ನೀಡಿ ಬಾಗಿಲು ಮುಚ್ಚಿತು. ಕತ್ತಲು ಅಡರುವ ಸಮಯಕ್ಕೆ ಹಟ್ಟಿಗೆ ಬಂದು ಮೋರಿಯ ಮೇಲೆ ರಾಜಪ್ಪನ ಜತೆ ಕೂತು ಮಾತುಕತೆ ಆಡುತ್ತಾ ಕೂತವನಿಗೆ ಊರವನು ಒಬ್ಬ, "ನಿಮ್ಮಪ್ಪ ಏನು ಆ ಕಾರಖಾನೆ ನೋಡಿ ಹುಟ್ಟಿಸಿರಲಿಲ್ಲ ಬಿಡು .... ಎಲ್ಲೆಲ್ಲಿ ಅನ್ನದ ಋಣ ಇರ್ತದೋ ಅಷ್ಟೆ...." ಅನ್ನ ನೀರಿನ ಋಣ ಮುಗೀತಾ....ಮುಗೀತು...."

ಇನ್ನೊಬ್ಬ: "ಮಗಾ........ನಂಬ್ಕೊಂಡು ಅಂಬ್ಟಾರ, ಭೂತಾಯೀನೆ ಮರ್ಯಾದೆ ಕೊಡುವಾಗ ಬೇರೆದೆಲ್ಲಾ ಯಾವ ಲೆಕ್ಕ...."

ಮತ್ತೊಬ್ಬ: ನಮ್ಮಂಗ ತೆಗಿ ಆಡದಂಗೆ ಮುವತ್ತು ದಿನ ಕಳೆದರೆ ಸಾಕು.... ಎಣಿಸ್ಕೇತಾರೆ ಕೈತುಂಬಾ .... ನಮ್ಮಂಗೆ ಮಳೆ ಉಯ್ಯಲಿಲ್ಲ ಬೆಳೆ ಬೆಳೀಲಿಲ್ಲ....ಅನ್ನಂಗ....

*   *   *

ಉಂಡವನು ರೂಮು ಸೇರಿ ನಿದ್ದೆ ಬರಿಸಿ ಕೊಳ್ಳುತ್ತಿದ್ದ ಮಹೇಶನ ಪಕ್ಕದಲ್ಲಿ ಅಪ್ಪ ಬಂದು ಕೂತ. ಹಟ್ಟಿಯ ಕಂಬದ ಬೆಳಕೇ ತೆಳುವಾಗಿ ಕಿಟಕಿಯಿಂದ ಆವರಿಸಿತ್ತು.

'ಮಲಗಿದೀಯೇನೋ .... ಮಹೇಶ....' ಅಪ್ಪ ಕೇಳಿದ.

'ಇಲ್ಲಾ ಇನ್ನೂ ನಿದ್ದೆ ಬಂದಿಲ್ಲ....'

"ಊರಿಗೆ ಬಂದಿದ್ದ ರಂಗೇಗೌಡ ಚುಂಚನ ಗಿರಿಗೆ ಹೋಯ್ತಾ ಬೆಳ್ಳೂರಲ್ಲಿ ಸಿಕ್ಕಿದ್ದ.... ಅದೇನೋ ಮುಂದಾಳಾಗವ್ನೇ .... ಬುದ್ಧಿ ಮಾತು ಹೇಳು ಮಗಂಗೆ .... ಅಂದ. ನಮ್ಮಂತಹವರಿಗ್ಯಾಕಪ್ಪ ಅದೆಲ್ಲಾ ....ನಾಳೆ ಹೆಚ್ಚು ಕಡಿಮೆ ಆದ್ರೆ ಏನು ಮಾಡ್ತೀಯಾ....?" ಹೆಂಗೋ ಜೀವನ ಸಾಗಿಸು.... ಈ ಊರಲ್ಲಿ ಏನಿದೆ ...? ವಸಿ ರಾಜಕೀಯಾನಾ....ಕುತಂತ್ರನಾ... ಮಳೆ ಹುಯ್ಯಲಿಲ್ಲ ಅನ್ನೋರು ಇದ್ದಾರೆ....ಕಂಡವರ ಮನೆ ತೆಂಗಿನಕಾಯಿ ಕದ್ದು ಕುಡಿದು ಕಿತಾಪತಿ ಮಾಡ್ತಾರೆ .... 'ಊರು ಸರಿಯಿಲ್ಲಾ ....' ಅಂದ.

"ನಾನು ಯಾವುದ್ಕೂ ಹೋಗಲ್ಲಾ ಬಿಡು...." ಎಂದು ಅಪ್ಪನಲ್ಲಿ ಹೇಳಿಕೊಂಡ ಮಹೇಶ.

"ಬೆಂಗ್ಳೂರಲ್ಲಿ ಅವನ ಆಫೀಸ್ಗೆ ಹೋಗಿದ್ದೆಯಂತೆ...." ಅಪ್ಪ ಕೇಳಿದ.

ಮಹೇಶ ಸುಮ್ಮನಾದ. ಏನೂ ಆಡಲಿಲ್ಲ.

ಮತ್ತೆ ಅಪ್ಪ : "ಇಷ್ಟೊತ್ತು ಹೇಳ್ತೀನಿ ಮಗಾ....ಆಗ್ಲೇ ವರ್ಷ ಕಳೀತು ಉಂಗುರ ಅಡವಿಟ್ಟು ಇನ್ನು ಅದು ಬಿಡಿಸಕ್ಕಾಗಿಲ್ಲ .... ಮನೇಲೂ ವಿಪರೀತ ಖರ್ಚು. ನಾಲ್ಕು ಹೆಣ್ಮಕ್ಕಳು ....ಮದ್ವೆ ಮಾಡಬೇಕು .... ನೀನು ಏನಾರು ಹಿಂಗೇ ಮನೇಗೆ ಬಂದು ಕೂತರೆ ಮುಗೀತು ಕತೆ...."

ನರೀಕಲ್ಲಲ್ಲಿ ಹೊಂಗೆ ಸಸಿ ನೆಟ್ಟಿದ್ವಲ್ಲಾ ಒಂದೆಂಟೋ ಹತ್ತೋ ಹತ್ಕೊಂಡವೆ. ನಾಕು ರೂಪಾಯಿನಂಗೆ ಇಪ್ಪತ್ತು ತೆಂಗಿನ ಸಸಿ ತಗೊಂಡು ನೆಡೆಸಿವ್ನಿ....ಗುಂಡಿ, ಗೊಬ್ಬರ ಮರಳು, ಗೋಡು....ನೆಡೆಸಿದ್ದು ಕೂಲಿ ಎಲ್ಲಾ ಮುನ್ನೂರಾಯ್ತು .... ಏನೋ ಮುಂದಕ್ಕೆ ಒಳ್ಳೆ ಆಸ್ತಿ ಅಂತಾ ಕೈಹಾಕ್ದೆ ... ನೀರು ಉಯ್ಯೋಕೆ ಒಪ್ಪತ್ತಿಗೆ ಎರಡು ರೂಪಾಯಿ ಕೂಲಿ ಮಾಡವ್ರೆ .... ಏನು ಮಾಡೋದು....?'

ಯಾಕೆ ಹೇಳ್ದೆ ಅಂದ್ರೆ ನಿಂಗೆ ಇದೆಲ್ಲಾ ಅರ್ಥ ಆಗ್ಲಿ" ಅಂತಾ....ಹೇಳಿ ಅಪ್ಪ ಎದ್ದು ಹೋದ ಮೇಲೆ ಮಹೇಶನ ತಲೆ ಒಂದು ಕಾರಖಾನೆಯಾಯ್ತು. ರಾತ್ರಿ ಪೂರ್ತಿ.

ರಾಜಪ್ಪ ಕದಬಳ್ಳಿ ಸಂತೆಗೆ ಹೋಗಿ ಬರಲು ಸಂಜೆಯೇ ಜತೆಗೂಡಲು ಮಹೇಶನಿಗೆ ಹೇಳಿದ್ದರಿಂದ ಇಬ್ಬರೂ ವ್ಯಾನು ಹಿಡಿದು ಸಂತೆಗೆ ಹೋದರು.

ರಾತ್ರಿ ಅಪ್ಪ ಹೇಳಿದ್ದನ್ನೆಲ್ಲಾ ಸಂತೆಯಲ್ಲಿ ತಿಂಡಿ ತಿನ್ನುತ್ತಾ ಹೇಳಿದ ಮಹೇಶ.

ರಾಜಪ್ಪ : ನಿಂಗೆ ನಾನು ಹೇಳೋ ಮಟ್ಟದಲ್ಲಿಲ್ಲ. ನಿಮ್ಮಪ್ಪಂಗೆ ಬದುಕಿನ ಅನುಭವ, ನಾಳಿನ ಯೋಚನೆ.

"ಮಹೇಶ....ಸಂತೆಗೆ ಯಾಕೆ ಬಂದೆ ಗೊತ್ತಲ್ಲಾ....ಒಂದು ಜತೆ ಎತ್ತಲ್ಲಿ ಒಂದು ಸತ್ತು ಹೋಯ್ತು. ಒಂಟಿ ಸಿಗಲ್ಲ....ಅವನ್ನ ಮಾರಕ್ಕಾಗಲ್ಲ....ಜತೆಗೆ ಹಾಕಕ್ಕೆ ಹಣ ಇಲ್ಲ. ಹೊಸ ಜತೆ ಹೆಂಗೆ ಕೊಳ್ಳೋದು.... ಮಳೆ ಉಯ್ದು ಮುಂಗಾರು ಆರಂಭದಲ್ಲಿ ಹುಡುಕಾಡಿದ್ರೆ ಆಗಲ್ಲಾ....ಎತ್ತು ಇಲ್ದಿದ್ರೆ

ಬೇರೆಯವರ ನಂಬ್ಕೆಂಡು ಏನು ಆರಂಭ ಮಾಡೋದು. ಸಾಲವೋ ಸೋಲವೋ ಮಾಡಿ ಎತ್ತ್ಕೊಂಡರೆ ಕಾಲಕ್ಕೆ ಸರಿಯಾಗಿ ಮಳೆಯಾಗುತ್ತೆ. ಬೆಳೆ ಬೆಳೆಯುತ್ತೆ....ಸಾಲ ತೀರುತ್ತೆ ಅನ್ನೋ ಖಾತ್ರಿ ಏನು....? ನಿನ್ ಆಲೋಚನೆಯೇ ಬೇರೆ.... ನಮ್ ಯಾಚನೆಯೇ ಬೇರೆ....' ಎಂದ ರಾಜಪ್ಪ.

"ನಿನ್ನ ಬಗಲಲ್ಲಿನ ಮಾರ್ಕ್ಸ್‌ನ ಕೆಂಪು ಪುಸ್ತಕಗಳನ್ನು ನೋಡಿದೆ. ನಿನ್ನ ಡೈರಿಯನ್ನು ಓದಿದೆ. ಓದಿದ್ದು ತಪ್ಪು, ಕ್ಷಮಿಸು" ಎಂದ.

ಡೈರಿಯಲ್ಲಿ ಊರಲ್ಲಿ ಉಳಿದಾಗ ಬರೆದ ಮಾತುಗಳು: ಅಪ್ಪನ ಅವ್ಯವಸ್ಥಿತ ಬದುಕು, ರಾಜಪ್ಪನ ವಾಸ್ತವಿಕ ಬದುಕು....ಎಲ್ಲವೂ ಬದುಕಿನ ಹೋರಾಟವಲ್ಲವೆ? ಎಂದು ಅನ್ನಿಸಿದೆ.

* * *

ಕಾರ್ಮಿಕರ ಹೋರಾಟಕ್ಕೆ ಯಶ ಸಿಕ್ಕಿತು. ದಿನಗೂಲಿಯವರೆಲ್ಲರಿಗೂ ಖಾಯಂ ಮಾಡಿತ್ತು. ಇತಿಹಾಸದ ದಾಖಲೆಯಾಗುವಂತೆ ತುಟ್ಟಿಭತ್ಯೆಯನ್ನು ಕಂತಿನ ಮೂಲಕ ಕೊಟ್ಟ ಕರ್ನಾಟಕ ರಾಜ್ಯದ ವಿನೂತನ ದಾಖಲೆಯಾಯ್ತು.

* * *

ರಾಜಪ್ಪ ಮಂಡ್ಯಕ್ಕೆ ಇದ್ದಕ್ಕಿದ್ದಂತೆ ಬಂದುಬಿಟ್ಟದ್ದ. ಮಹೇಶನಿಗೆ ಖುಷಿ, ಆಶ್ಚರ್ಯ. ಒಂದೆಳೆ ಪಂಚೆ ಉಟ್ಟವನೆ. ತಲೆಗೆ ಕಯ್ಯೆಣ್ಣೆ ಆಗೋಷ್ಟುಮೆತ್ತಿ ತಲೆಗೋರಿದ್ದ. ಹಣೆಗೆ ಕಪ್ಪು ಹಚ್ಚಿದ್ದ.

"ಮಂಡ್ಯಕ್ಕೆ ಬಂದೇಬಿಟ್ಟೆ....." ಅಂದ.

ರಾಜಪ್ಪನ ಹಿಂಸೆಗೆ ಸಿನಿಮಾಕ್ಕೆ ಹೊರಟ ಮಹೇಶ. ಅದೊಂದು ಇಂಗ್ಲೀಷ್ ಸಿನಿಮಾ ಕಾಡು ಪ್ರಾಣಿಗಳ ಶಿಕಾರಿ ಮಾಡಿ ಪಳಗಿಸುವುದು. ತವೇಕ ಚಿತ್ತನಾಗಿ ಸಿನಿಮಾ ನೋಡುತ್ತಾ ಜೋರಾಗಿ "ಬಿಡಬೇಡ, ಬಿಡಬೇಡ, ಕೆಡವಿಕೋ ಕೆಡವಿಕೋ......" ಎಂದು ಅಕ್ಕಪಕ್ಕ ಜನ ಅನ್ರೆ ಎಂಬುದ ಮರೆತು ತೊದಲುತ್ತಿದ್ದ ರಾಜಪ್ಪನನ್ನು ಕತ್ತಲಲ್ಲೇ ನೋಡುತ್ತಿದ್ದ ಮಹೇಶ. ಸಂಜೆ ಮಂಡ್ಯದಲ್ಲಿ ರಾಜಕೀಯ ಭಾಷಣವನ್ನು ಕೇಳುತ್ತಾ ನಿಂತಿದ್ದರು.

ರಾಜಪ್ಪ: "ಏನು ಮಾತಾಡ್ರವ್ರೋ ... ಆಡೋದೇ ಒಂದು......ಮಾಡೋದೆ ಒಂದು.

ಐದು ವರ್ಷಕ್ಕೊಂದ್ಸಾರಿ ಬತ್ತಾರೆ ನೋಡಪ್ಪಾ ಅಷ್ಟೇ....ನಾವು ದಡ್ಡ ಮುಂಡೇವ್ರು...." ಅಂದ.

ಮಹೇಶನಿಗೆ ರಾಜಪ್ಪನ ಮಾತುಗಳು ಮುತ್ತಾದವು.

ಡೈರಿಯಲ್ಲಿ ಹೀಗೆ: ಮುತ್ತಿನಂತೆ ಮಾತುಗಳನ್ನು ಮುಗ್ಧತೆಯಲ್ಲಾಡುವ ಅವನ ವಿವೇಚನೆ ಎಂಥಹದು? ಎಂಡು.

ರಾತ್ರಿ ಮಲಗಿದ್ದಾಗ ರಾಜಪ್ಪ: ನಿನ್ ಕತೆಗಳೆಲ್ಲಾ ಓದ್ತಿರ್ತೀನಪ್ಪಾ.......' ಎಂದ.

'ಏನು ಅನ್ನಿಸುತ್ತೆ' ಮಹೇಶ ಕೇಳಿದ.

"ನಾನು ಏನು ಹೇಳಲಿ? ನಂಗ್ಯಾವ ತಲೆ ಅದೆ ಹೇಳು....? ಕತೆ ಕಾದಂಬರಿಯಿಂದ ಏನಾಯ್ತದೆ ಹೇಳು...? ಏನೂ ಆಗಿಲ್ಲ...."

'ಮತ್ತೆ....?' ಮಹೇಶ ಕೇಳಿದ.

"ಅಗಸರ್ಹೊಳೆಗೆ ಸೇತುವೆ ಕಟ್ಟಿಸ್ತಾ ಪ್ರಪ್ಪಾ....ಏನಾಯ್ತು ಹೇಳು....?"

"ವೀರವೈಷ್ಣವ ನದಿ ತುಂಬಿ ಹರಿವಾಗ ಅಡ್ಡಬಳಸ್ಕೊಂಡು ಬತ್ತಿದ್ದ ಬಸ್ಸು, ಜನ ಎಲ್ಲಾ ಅಡ್ಡ ಬಳಸಂಗಿಲ್ಲ....ಅಷ್ಟೆ."

"ಅಷ್ಟೆ ತಾನೇ....ಆದದ್ದು...."

ಬೆಳ್ಳೂರಿಗೆ ಬರುತ್ತಿದ್ದ ಬಸ್ಸು, ಲಾರಿ, ಎಲ್ಲಾ ತೊರೆ ತುಂಬಿ ಬರುವಾಗ ನಾಲ್ಕು ಕಿಲೋ ಮೀಟರ್ ಹೆಚ್ಚು ಕ್ರಮಿಸಿ ಬರ ಬೇಕಾಗಿತ್ತು. ಈಗ ಅದು ಉಳಿಯಿತು.

ರಾಜಪ್ಪನ ದೃಷ್ಟಿಯಲ್ಲಿ ಅದು ಅನಾವಶ್ಯಕವೇ? ಬದಲಾವಣೆಯಲ್ಲವೆ? ಮಹೇಶನಿಗೆ ಕಾಡಿತ್ತು ಪ್ರಶ್ನೆಯಾಗಿ.

ಕತ್ತಲಲ್ಲೇ ರಾಜಪ್ಪ ಅಂದ : "ತಿನ್ನೋರ ಗೊಂದು ದಾರಿಯಾಯ್ತು ಅಷ್ಟೆ." ಎಂದು.

ಡೈರಿಯಲ್ಲಿ ರಾಜಪ್ಪ ಹೋದಮೇಲೆ ಹೀಗೆ ಬರೆದ: ಸರಕಾರದ ಎಲ್ಲವನ್ನೂ ಪ್ರತಿಯೊಬ್ಬನು ಗಮನಿಸುತ್ತಾನೆ, ಸ್ವತಃ ಚಿಂತಿಸಿ ಆಡುತ್ತಾನೆ. ಎಲ್ಲಾ ಸತ್ಯವನ್ನು ವಿವೇಚಿಸುವ ಶಕ್ತಿ ಪ್ರತಿಯೊಬ್ಬನಲ್ಲೂ ಇದೆಯಲ್ಲವೆ? ಎಂದು.

* * *

ಅಪ್ಪ ನೆಟ್ಟ ಹೊಂಗೆಸಸಿಗಳಲ್ಲೀಗ ನಾಲ್ಕು ಮರವಾಗಿ ನಿಂತಿವೆ. ಕಲ್ಲೊಳಗೆ ಸಿಕ್ಕಿ ಮೇಲೇಳಲಾಗದೆ ಉಳಿದಿದ್ದ ಹುಣಿಸೆ ಸಸಿ, ಹೆಂಗೋ ಮೇಲೆದ್ದು ಮರವಾಗಿ ಮನೆಗಾಗುವಷ್ಟು ಹುಳಿಕೊಡುತ್ತಿದೆ. ನೆಟ್ಟ ಇಪ್ಪತ್ತರಲ್ಲಿ ಮೂರು ಸಸಿಹೋಗಿ ಹದಿನೇಳು ಗಿಡಗಳ ತೆಂಗಿನ ತೋಟವಾಗಿದೆ ಈಗ.

* * *

ರಾಜಪ್ಪನಲ್ಲಿ ಒಮ್ಮೆ ಕೇಳಿದ ಮಹೇಶ.

"ರಾಜಪ್ಪ... ರಾಜ್ಯ, ಕೇಂದ್ರ ಸರಕಾರದ ಕಾರ್ಮಿಕರಿಗೆ ಭತ್ಯೆ, ಸಂಬಳ ಎಲ್ಲಾ ಏರುತ್ತಲೇ ಇದೆ. ಮುನ್ನೂರು ನಾಲ್ಕುನೂರು ರೂಪಾಯಿಗಳಿಗೆ ಎಂಟು ಗಂಟೆ ದುಡಿದು ಬರುವ ಜನರ ಬಗ್ಗೆ ಯಾರೂ ಯೋಚಿಸುತ್ತಿಲ್ಲ. ಇನ್ನು ಹತ್ತು ಹದಿನೈದು ರೂಪಾಯಿಗಳಿಗೆ ಸೈಕಲ್ ಶಾಪು, ವರ್ಕ್ ಶಾಪುಗಳಲ್ಲಿ ಕೆಲಸ ಮಾಡುವವರಿದ್ದಾರೆ.

ರಾಜಪ್ಪ ತಲೆಗೆ ಹೇನು ತುಂಬಿಕೊಂಡಂತೆ ಪರಪರನೆ ತಲೆ ಕೆರೆಯುತ್ತಾ "ಮಹೇಶ ನಂಗೆ ಹಳ್ಳೀಲಿ ಮಗಳು ಮದ್ವೆ ಮಾಡಲಿಲ್ಲ ಅಂತಾ ಚಿಂತೆ ..." ಅಂದ.

ಮೆಳ್ಳಳ್ಳಿ ಬಸ್‌ಸ್ಟ್ಯಾಂಡಿನಲ್ಲಿ ಟೀ ಕುಡಿದು ಇಬ್ಬರಲ್ಲಿ ಯಾರು ಕೊಡುವುದೆಂದು ಕಚ್ಚಾಡುತ್ತಾ "ನಾಳೆ ನಾ ಕೊಟ್ಟೇನು ಕೊಡು" ಎಂದ ರಾಜಪ್ಪ.

ಹೊಂಗೆ ಮರದ ನೆರಳಲ್ಲಿ ವಲ್ಲಿ ಹಾಸಿ ಮಲಗಿದ್ದ ಮಹೇಶನಿಗೆ ಕಾರಖಾನೆಯಿಂದ ವಜಾ ಆಗಿ ಬಂದುದ್ದು, ನ್ಯಾಯಾಲಯದಲ್ಲಿ ವಿವಾದ ನಡೆಯುತ್ತಿದ್ದುದು ಬೇಜಾರು ಹಿಡಿಸಿತ್ತು.

ರಾಜಪ್ಪ : "ನಾನು ಅವೊತ್ತೇ ಹೇಳ್ದೆ.... ಕಾನೂನು....ನ್ಯಾಯ ಎಲ್ಲಾ ಬಿಡು ಅಂತಾ.

ಮಹೇಶ : ಕೋರ್ಟಲ್ಲಿ ನ್ಯಾಯಾಧೀಶರನ್ನೇ appoint ಮಾಡ್ದೆ ಹದಿನೆಂಟು ತಿಂಗಳು ಇರುವಂತ ದಿನಾ ಊಹಿಸಿರಲಿಲ್ಲ.

ರಾಜಪ್ಪ : ಇದು ಭಾರತದೇಶ. ಇಲ್ಲಿ ನಿನ್ನ ಕಲ್ಪನೆ ಎಲ್ಲಾ ಬಿಡು....

ಮಹೇಶ ಡೈರಿಯನ್ನು ಬರೆಯದೇ ಎಷ್ಟೋ ವರ್ಷವಾಗಿತ್ತು. ರಂಗೇಗೌಡ ಹೇಳಿದ್ದೇ ಸತ್ಯವೇ. ಅಪ್ಪ ಬದುಕಿನ ಬಗ್ಗೆ ಕಿವಿಮಾತು ಹೇಳಿದ್ದೇ ಸತ್ಯವೇ, ಕೃಷ್ಣ ಭಟ್ಟರ, ಲಕ್ಕೇಗೌಡರ ಉತ್ತೇಜಿತ ಮಾತು ಗಳಿಂದ ಸಂಘಟನೆಗಳೇ ಮುಖ್ಯವೇ, ಕಾಡಿತ್ತು, ಅಷ್ಟೆ.

* * *

ರಾಜಪ್ಪ ಈಗ ದನ ಮೇಯಿಸುವ ಗೋಜಿಗೆ ಹೋಗುತ್ತಿಲ್ಲ.

ಇಬ್ಬರೂ ಮೆಳ್ಳಳ್ಳಿ ಬಸ್ ಸ್ಟ್ಯಾಂಡಿಗೆ ಹೋಗಿ ಕುಳಿತಿದ್ದರು.

ಮೇ ೧ರ ಬಗ್ಗೆ ರಾತ್ರಿ ಎಲ್ಲಾ ಮಹೇಶ ಯೋಚನೆಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದ ರಾಜಪ್ಪನಿಗೆ ಡೈರಿ ಬಿಚ್ಚಿ ತೋರಿದ.

ಹೀಗೆ ಬರೆದಿದ್ದ, "ಮೇ ೧........... ಮತ್ತೊಂದು."

ರಾಜಪ್ಪ ಕೇಳಿದ: ಬಹಳ ದಿನದ ಮೇಲೆ ಡೈರಿ ಬರೆದಿದೀಯಾ? ಮಳೆ ಬತ್ತದೆ. ವೀರವೈಷ್ಣವನದಿ ಬಹಳ ವರ್ಷದ ಮೇಲೆ ತುಂಬಿ ಹರಿಬಹುದು. ಅಗಸರಹೊಳೆ ಸೇತುವೆ ಕಟ್ಟಿಸಿದ್ದು ಸಾರ್ಥಕ ಆಗಬಹುದು, ಬಸ್ಸು ಲಾರಿ ಬಳಸಂಗಿಲ್ಲ.

ಬಸ್‌ಸ್ಟ್ಯಾಂಡ್ ಹೋಟೆಲಲ್ಲಿ ಬೈಟು ಟೀ ಕುಡಿಯುತ್ತಾ ಕುಳಿತಿದ್ದಾಗ.

ರಾಜಪ್ಪ: ಅಲ್ಲಿ ನಿಂತವನಲ್ಲ ಅವನು ರಂಗೇಗೌಡರ ಮಗ.... ಬೆಂಗಳೂರಲ್ಲಿ Security officer, ಸಂಬಳ ಎಷ್ಟು ಗೊತ್ತಾ ತಿಂಗಳಿಗೆ ೯೦೦೦ ರೂ, ನೀನು ಇದ್ದೀಯಾ....? ಜಯನಗರದಲ್ಲಿ ಮನೆ....ಬಂಗಲೆಯಂತ ಮನೆ ಅಂದ.

ಮಹೇಶ: ಏನೂ ಮಾತಾಡಲಿಲ್ಲ.

ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪನ್ನೀಯುವದ ಬಿಡದು. ಸುವರ್ಣವ ಕಡೆದೊರೆದೊಡೆ ಬೆಂದು ನೊಂದೆನೆಂದು ಕಳಂಕ ಹಿಡಿದೀತೇ? ಸಂದು ಹಿಡಿದು ಕಬ್ಬನು ತಂದು ಗಾಣದಲಿಕ್ಕೆ ಬೆಂದ ಪಾಕಗಳು ಸಕ್ಕರೆಯಾಗಿ ನೊಂದೆನೆಂದು ತನ್ನ ಸವಿಯ ಬಿಟ್ಟೀತೆ?

—ಅಕ್ಕಮಹಾದೇವಿ

ಕೇವಲ ಶಿಕ್ಷಣದಿಂದ ಜ್ಞಾನೋದಯವಾಗದು. ಶೀಲದಿಂದ ಸಂಸ್ಕಾರಗೊಂಡ ಮನಸ್ಸೇ ಜ್ಞಾನೋದಯಕ್ಕೆ ಮಾರ್ಗವಾಗತ್ತದೆ.

—ಡಾ. ರಾಧಾಕೃಷ್ಣನ್

ಎಲ್ಲೆಡೆ ಗುಲ್ಲೆಬ್ಬಿಸಿರುವ ಎಬೊಲ

ಡಾ|| ಕರವೀರಪ್ರಭು ಕ್ಯಾಲಕೊಂಡ

ಎಬೊಲ!

ಜಗದ ಜನರನ್ನು ತಲ್ಲಣಗೊಳಿಸಿದೆ, ಆಗಿದೆ ಎಲ್ಲೆಡೆ ಅಲ್ಲೋಲ ಕಲ್ಲೋಲ!!

ಏನೀ ಎಬೊಲ!!!

ಇದೊಂದು ನದಿಯ ಹೆಸರು.

ದಕ್ಷಿಣ ಆಫ್ರಿಕದ ಕಿಕ್ವಿಟ್ ಎಂಬ ಪಟ್ಟಣದ ಬಳಿ ಹರಿಯುತ್ತದೆ. ಇದು ನಮ್ಮ ನಿಮ್ಮ ಊರುಗಳಂತೆ ನೀರಿಲ್ಲದ, ಕಣ್ಣು ಮುಚ್ಚಾಲೆ ಆಡುವ ವಿದ್ಯುದ್ದೀಪದ, ಸರಿಯಾದ ಒಳಚರಂಡಿ ವ್ಯವಸ್ಥೆಯಿಲ್ಲದ, ಕೊಳಗೇರಿಗಳಿಂದ ತುಂಬಿದ ನಗರ. ಇಲ್ಲಿಯವರೆಗೆ ಯಾರ ಗಮನ ಸೆಳೆಯದೇ, ಹತ್ತರ ಕೂಡ ಹನ್ನೊಂದಾಗಿ ಇದ್ದ ಈ ಊರು ಇದ್ದಕ್ಕಿದ್ದಂತೆ ಜಗತ್ತಿನ ಗಮನವನ್ನು ತನ್ನತ್ತ ಸೆಳೆದುಕೊಂಡಿದೆ. ವಿಚಿತ್ರ, ವಿಕ್ಷಿಪ್ತ ವಿನಾಶಕಾರೀ ಕಾಯಿಲೆಯೊಂದರ ಶವದೂರು ಎಂಬ ಕುಖ್ಯಾತಿಗೆ ಪಾತ್ರವಾಗಿದೆ! ಎಬೊಲ ನದಿಯ ದಂಡೆಯ ಪ್ರವೇಶದಲ್ಲಿ ಈ ರೋಗದ ಹಾವಳಿ ಕಾಣಿಸಿಕೊಂಡಿದ್ದರಿಂದ ಈ ರೋಗಕ್ಕೆ ಎಬೊಲ ಎಂತಲೆ ಕರೆಯಲಾಗಿದೆ!! ಏಡ್ಸ್‌ನ ಉಗಮಸ್ಥಾನವೆಂದು ನಂಬಲಾದ ಜೈರೆಯೇ ಎಬೊಲಕ್ಕೂ ತವರೂರಾಗಿರುವುದು ದುರಂತವೇ ಸೈ!!!

ಕೆಲವು ಸ್ಥಳಗಳಿಗೆ ಮಾತ್ರ ಸೀಮಿತವಾಗಿದ್ದ ತೀವ್ರ ಸ್ವರೂಪದ ಜ್ವರದಿಂದ ರಕ್ತೋದ್ರೇಕವನ್ನುಂಟು ಮಾಡುವ ಕೆಲವು ವೈರಸ್ ರೋಗಗಳು ಇಂದು ಸೀಮೆಯ ಸಿಮೋಲಂಘನ ಮಾಡಿದೆ. ಇದಕ್ಕೆ ಕಾರಣ ಸಂಪರ್ಕ ಮಾಧ್ಯಮಗಳ ಸೌಲಭ್ಯದಿಂದ ಜಗತ್ತು ಸಣ್ಣದಾಗಿರುವುದು. ಪ್ರಪಂಚದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕ್ಷಣದಲ್ಲಿ ಹೋಗಬಹುದಾಗಿದೆ. ಹೀಗಾಗಿ ಈ ರೋಗಗಳು ಇಂದು ಸಾರ್ವತ್ರಿಕವಾಗುವ ಸಾಧ್ಯತೆ ಇದೆ. ಮಾರ್ಬರ್ಗ್ (ಜರ್ಮನಿ), ಎಬೊಲ (ಜೈರೆ, ಸುಡಾನ್), ಕ್ರಿಮಿಯ (ರಶಿಯಾ), ಸೇಬಿಯ ಮಾಚುಪೋ, ಹಂಟಾ ಮತ್ತು ಕಾಂಗೋ ವೈರಸ್ ರೋಗಗಳು ರಕ್ತೋದ್ರೇಕ ಜ್ವರದ ಕೆಲವು ಪ್ರಮುಖ ಉದಾಹರಣೆಗಳು. ಬುದ್ಧಿಜೀವಿ ಮಾನವ ನಿಸರ್ಗದ ಗುಟ್ಟನ್ನು ರಟ್ಟಾಗಿಸುತ್ತ, ಸವಾಲಾಗಿದ್ದ ರೋಗಗಳ ವಿರುದ್ಧ ಸಮರ ಸಾರಿ ವಿಜಯ ಸಾಧಿಸಿದ್ದೇನೆಂದು ಹೆಮ್ಮೆಯಿಂದ ಬೀಗುವ ಹೊತ್ತಿಗೆ ಪ್ಲೇಗ್ ಬಂತು. ಇತಿಹಾಸ ಮರುಕಳಿಸಿತು. ಈಗ ಎಬೊಲ ಮರುಕಳಿಸಿದೆ. ಜಗದ ಗಂಡೆದೆಗಳ ಗುಂಡಿಗೆಗಳನ್ನೇ ಗಡಗಡ ನಡುಗಿಸಿದೆ.

ಮರುಕಳಿಸಿದ ಮಾರಿ

೧೯೯೫ರ ಮಾರ್ಚ್ ೨೫ರಂದು ವ್ಯಕ್ತಿಯೊಬ್ಬ ಕಿಕ್ವಿಟ್ ಸರಕಾರಿ ಆಸ್ಪತ್ರೆಗೆ

ಬಂದ, ದಾಖಲಾದ ವೈದ್ಯರಿಗೆ ದಿಗಿಲು ಹಿಡಿಸಿದ. ರೋಗ ಪತ್ತೆಯಾಗುವ ಮೊದಲು ಈ ಲೋಕದ ಯಾತ್ರೆ ಮುಗಿಸಿದ. ಈ ರೋಗಿ ಸದ್ದಿಲ್ಲದೆ ಸತ್ತುಹೋದ; ಎಲ್ಲೂ ಸುದ್ದಿಯಾಗಲಿಲ್ಲ. ವಾರ ಕಳೆಯಿತು ಆಸ್ಪತ್ರೆಯಲ್ಲಿ ರೋಗಿಯ ರಕ್ತ ಪರೀಕ್ಷೆ ಮಾಡಿದ ಪ್ರಯೋಗಾಲಯದ ಸಿಬ್ಬಂದಿ ಸುಸ್ತಿನಿಂದ ಹಾಸಿಗೆ ಹಿಡಿದ. ಜ್ವರದಿಂದ ಬಳಲಿದ, ವೈದ್ಯರು ಚಿಕಿತ್ಸೆ ನೀಡಿದರು. ಹೊಟ್ಟೆ ನಗಾರಿಯಾಯಿತು. ವಿಷಮಜ್ವರದಿಂದ ಕರುಳಲ್ಲಿ ಕೆಂಡಿ ಬಿದ್ದು ಹೀಗಾಗಿರಬಹುದೆಂದು ವೈದ್ಯರು ತರ್ಕಿಸಿದರು. ಶಸ್ತ್ರಚಿಕಿತ್ಸೆ ಮಾಡಿದರು ಪ್ರಯೋಜನವಾಗಲಿಲ್ಲ. ಮತ್ತೆ ಶಸ್ತ್ರಚಿಕಿತ್ಸೆ ಮಾಡಲು ರೋಗಿಯ ಹೊಟ್ಟೆ ಹರಿದರು, ದಿಗ್ಭ್ರಮೆಗೊಂಡರು....

ಜೀವಂತ ಹೆಣವಾಗಿದ್ದ ರೋಗಿಯ ಪ್ರತಿ ಅಂಗದಿಂದಲೂ ಕಪ್ಪುದ್ರವ ಒಸರುತ್ತಿತ್ತು. ವೈದ್ಯರು ನಿಸ್ಸಾಯಕರಾದರು. ರೋಗಿಯ ಪ್ರಾಣಪಕ್ಷಿ ಹಾರಿಹೋಯಿತು. ಪತ್ರಿಕೆಗಳಿಗೆಲ್ಲ ಹೊಸ ಸುದ್ದಿಯಾಯಿತು. ವಾರದ ನಂತರ ಇವನನ್ನು ತಪಾಸು ಮಾಡಿದ ವೈದ್ಯರು, ವೈದ್ಯರಿಗೆ ನೆರವು ನೀಡಿದ ನರ್ಸ್, ಶಸ್ತ್ರ ಚಿಕಿತ್ಸೆಗಾಗಿ ಅನಸ್ತೇಸಿಯಾ ಕೊಟ್ಟವರು, ಶಸ್ತ್ರಚಿಕಿತ್ಸೆಗೆ ಸಹಾಯ ಮಾಡಿದ ದಾದಿಯರು ಪತ್ತೆಯಾಗದ ಇದೇ ಕಾಯಿಲೆಗೆ ತುತ್ತಾಗಿ ಸತ್ತಾಗ ಜೈರೆಯ ವೈದ್ಯಕೀಯ ಕ್ಷೇತ್ರ ತಬ್ಬಿಬ್ಬಾಯಿತು. ಅಂತರರಾಷ್ಟ್ರೀಯ ವೈದ್ಯಕೀಯ ಮಹಾಮಂಡಳಿಯ ಗಮನ ಸೆಳೆಯಿತು.

ಮೇ ಎರಡು ಆಸ್ಪತ್ರೆಯ ಬಲಿತಗೆದುಕೊಂಡ ಈ ಕಾಯಿಲೆಯ ರಹಸ್ಯ ಭೇದಿಸಲು ಡಾ|| ಮುಯೆಂಬೆ ನೇತೃತ್ವದ ಒಂದು ತಂಡ ಕಿಕ್ವಿಟ್‌ಗೆ ಬಂದಿಳಿಯಿತು. ಆ ಹೊತ್ತಿಗೆ ಅಳಿದುಳಿದಿದ್ದ ಸಿಬ್ಬಂದಿ ಆಸ್ಪತ್ರೆಯನ್ನು ತೊರೆದು ಹೊರಟು ಹೋಗಿದ್ದರು. ಜೊತೆಗೆ ಪತ್ತೆಯಾಗದ ಈ ಕಾಯಿಲೆಯ ರೋಗಾಣುಗಳನ್ನು ಹೊತ್ತೊಯ್ದಿದ್ದರು. ಡಾ|| ಮುಯೆಂಬೆ ವಿಷಯ ಸಂಗ್ರಹಿಸಿದರು; ವಿಶ್ಲೇಷಿಸಿದರು. ವಿಮರ್ಶಿಸಿ ನಿರ್ಧಾರಕ್ಕೆ ಬಂದರು. ಜೈರೆಯಲ್ಲಿ ಗುಲ್ಲೆಬ್ಬಿಸಿರುವ ಕಾಯಿಲೆ ಹೊಸದೇನೂ ಅಲ್ಲ. ಹಿಂದೆ ಹಾವಳಿ ಎಬ್ಬಿಸಿ, ನಿರ್ನಾಮವಾಗಿದೆಯೆಂದು ನಂಬಲಾಗಿದ್ದ ಎಬೊಲ ಎಂದು ಜಾಗತಿಕ ಆರೋಗ್ಯ ಸಂಸ್ಥೆಗೆ ವರದಿ ಒಪ್ಪಿಸಿದರು.

ಡಾ|| ಮುಯೆಂಬೆ ವರದಿಯ ಮೇರೆಗೆ ಜಾಗತಿಕ ಆರೋಗ್ಯ ಸಂಸ್ಥೆ, ಜೈರೆಯ ಸಾರ್ವಜನಿಕ ಆರೋಗ್ಯ ಸಚಿವಾಲಯ, ದಕ್ಷಿಣ ಆಫ್ರಿಕದ ರಾಷ್ಟ್ರೀಯ ರೋಗಾಣು ಪತ್ತೆ ಸಂಸ್ಥೆ, ಪ್ಯಾರಿಸ್‌ನ ಲೂಯಿಪಾಶ್ಚರ ಸಂಸ್ಥೆ ಮೊದಲಾದ ಸಂಘಟನೆಗಳಲ್ಲದೆ, ಗಡಿಭೇದವಿಲ್ಲದ ಸಮಾಜ ಸೇವಾಸಕ್ತ ವೈದ್ಯರನ್ನೊಳಗೊಂಡ ತಂಡ ರೋಗ ಪ್ರತಿಬಂಧ ಕೋಪಾಯಗಳನ್ನು ಅನುಷ್ಠಾನಕ್ಕೆ ತರಲು, ರೋಗಿಗಳಿಗೆ ಚಿಕಿತ್ಸೆ ನೀಡಲು, ಜನರಿಗೆ ರೋಗದ ಬಗ್ಗೆ ತಿಳಿಹೇಳಲು ಬಂದರು.

ಇತಿಹಾಸ

೧೯೬೭ರಲ್ಲಿ ಜರ್ಮನಿಯ ಮಾರ್ಬರ್ಗ್‌ದಲ್ಲಿ ಹೊಸ ಕಾಯಿಲೆಯೊಂದು ಕಾಣಿಸಿತು. ರೋಗಕಾರಕ ವೈರಸ್ ಎಂಬುದು ಪತ್ತೆಯಾಯಿತು. 'ಮಾರ್ಬರ್ಗ್ ವೈರಸ್' ಎಂದು ನಾಮಕರಣ ಪಡೆಯಿತು. ೧೯೭೬ರಲ್ಲಿ ಹೆಚ್ಚು ಕಡಿಮೆ ಈ ರೋಗದ ಲಕ್ಷಣಗಳನ್ನೇ ಹೊಂದಿದ ರೋಗವೊಂದು

ಸುಡಾನ್ ಮತ್ತು ಜೈರೆಯಲ್ಲಿ ಸ್ಫೋಟಗೊಂಡಿತು. ಇದಕ್ಕೂ ವೈರಸ್‌ವೊಂದು ಕಾರಣವಾಗಿತ್ತು. ಇದು ನೋಡಲು 'ಮಾರ್ಬರ್ಗ್ ವೈರಸ್'ನ್ನೆ ಹೋಲುತ್ತಿತ್ತು. ರೋಗ ಕಾಣಿಸಿಕೊಂಡ ಪ್ರದೇಶ ಎಬೋಲ ನದಿಯ ದಡದ ಊರುಗಳಾಗಿತ್ತು. ಹೀಗಾಗಿ ವಿಜ್ಞಾನಿಗಳು ಇದಕ್ಕೆ ಎಬೋಲ ವೈರಸ್ ಎಂದು ಹೆಸರಿಟ್ಟರು.

ಹಾಗೆ ನೋಡಿದರೆ ಎಬೋಲ ತನ್ನ ಇರುವಿಕೆಯ ಸುಳುವನ್ನು ೧೯೭೨ರಲ್ಲಿಯೇ ನೀಡಿದೆ. ಆ ವರ್ಷ ವಿದ್ಯಾರ್ಥಿಯೊಬ್ಬರು ಜ್ವರದಿಂದ ಮಿಶನರಿ ಆಸ್ಪತ್ರೆಗೆ ದಾಖಲಾದರು. 'ಹಳದಿಜ್ವರ' ಎಂದೇ ವೈದ್ಯರು ಚಿಕಿತ್ಸೆ ನೀಡಿದರು; ಫಲಕಾರಿಯಾಗಲಿಲ್ಲ. ಮೈತುಂಬ ಬೊಬ್ಬೆಗಳೆದ್ದು, ರಕ್ತಸ್ರಾವವಾಗಿ ರೋಗಿ ಸಾವನ್ನಪ್ಪಿದ. ವೈದ್ಯರು ಕುತೂಹಲಕ್ಕಾಗಿ ಮರಣೋತ್ತರ ಪರೀಕ್ಷೆ ಮಾಡಿದರು. ಕಂಡ ಬದಲಾವಣೆಗಳನ್ನೆಲ್ಲ ದಾಖಲಿಸಿದರು. ಅವೆಲ್ಲ ಈಗಿನ ಎಬೋಲ ರೋಗದಲ್ಲಿಯ ಬದಲಾವಣೆಗಳಿಗೆ ಹೋಲಿಕೆ ಪಡೆದಿರುವುದರಿಂದಾಗಿ, ವಿಜ್ಞಾನಿಗಳು ಎಬೋಲ ೧೯೭೨ರಲ್ಲಿಯೆ ಇತ್ತೆಂದು ಒಪ್ಪಿದ್ದಾರೆ.

೧೯೭೬ರಲ್ಲಿ ೫೦೦ಕ್ಕೂ ಹೆಚ್ಚು ರೋಗಿಗಳು ಅಧಿಕೃತವಾಗಿ ದಾಖಲಾಗಿದ್ದರು. ಸಾವಿನ ಪ್ರಮಾಣ ಶೇಕಡಾ ೭೦. ಮಾನುಕುಲಕ್ಕೆ ಅತ್ಯಂತ ಮಾರಕವಾಗಿರುವ ರೇಬಿಸ್ ಅಗ್ರಸ್ಥಾನದಲ್ಲಿದ್ದರೆ, ನಂತರದ ಸ್ಥಾನವನ್ನು ಎಬೋಲ ಪಡೆದಿದೆ. ಆದರೆ, ಇತ್ತೀಚೆಗೆ ಪತ್ರಿಕೆಗಳಲ್ಲಿ ಎಬೋಲ ಏಡ್ಸ್‌ಗಿಂತ ಕ್ರೂರಿ, ಏಡ್ಸ್‌ಗಿಂತ ಭಯಂಕರವಾದ ಕಾಯಿಲೆ ಎಂದು ಅಚ್ಚಾಗಿದೆ. ಇವೆಲ್ಲಾ ಉತ್ಪ್ರೇಕ್ಷಿತ ಬರವಣಿಗೆಗಳಷ್ಟೇ.

ರೋಗಕಾರಕ

ಎಬೋಲ ರೋಗಕಾರಕ ಒಂದು ವೈರಸ್. ಇದು "ಫಿಲೊವೈರಿಡಿಯೆ" ಕುಟುಂಬಕ್ಕೆ ಸೇರಿದ ರಾಬ್ಡೊವೈರಸ್ ಸಮೂಹದ ಸದಸ್ಯ. ೬೦ ಡಿಗ್ರಿ ಸೆಂ. ಉಷ್ಣತೆಯಲ್ಲಿ ಒಂದು ತಾಸಿನವರೆಗೆ ಕಾಸಿದಾಗ ವೈರಸ್ ತನ್ನ ಸೋಂಕು ಗುಣವನ್ನು ಕಳೆದುಕೊಳ್ಳುವುದು. ಹೆಚ್ಚು ಅಮ್ಲೀಯ ದ್ರಾವಣದಲ್ಲಿ, ಈಥರ್‌ದಲ್ಲಿ ಅದ್ದಿದಾಗಲೂ ಇದು ನಾಶವಾಗುವುದು.

ಪಿಡುಗುಶಾಸ್ತ್ರ

ಸೋಂಕಿನ ಮೂಲ ಇನ್ನೂ ನಿಗೂಢವಾಗಿಯೇ ಇದೆ. ಜರ್ಮನಿಯ ಮಾರ್ಬರ್ಗ್‌ದ ಸ್ಫೋಟಕ್ಕೆ ಆಫ್ರಿಕಾದಿಂದ ಆಯಾತಗೊಂಡಿದ್ದ ಹಸಿರು ಕಪಿಗಳೇ ಕಾರಣವೆಂಬುದು ಸ್ಪಷ್ಟವಾಗಿದೆ. ಲಸಿಕೆ ತಯಾರಿಕೆಗಾಗಿ ಇವುಗಳನ್ನು ತರಿಸಿದ್ದರು. ಅಲ್ಲಿಂದ ಬರುವಾಗ ಅವುಗಳಿಗೆ ಸೋಂಕು ತಗುಲಿತ್ತು. ಹೀಗಾಗಿ ಪ್ರಯೋಗ ಶಾಲೆಯಲ್ಲಿ ಕಾರ್ಯ ನಿರ್ವಹಿಸುವವರಿಗೆ ಇದರ ಉಡುಗೊರೆ ದೊರೆತಿತ್ತು. ಈ ರೋಗ ಆ ಮಂಗಗಳಿಗೆಲ್ಲ ಮರಣಾಂತಿಕವಾಗಿತ್ತು. ರೋಗದ ನಿಶ್ಚಿತ ವೈರಸ್ ಪ್ರತಿಕಾಯಗಳು ಅವುಗಳಲ್ಲಿ ಪತ್ತೆಯಾಗಲಿಲ್ಲವಾದ್ದರಿಂದ ಮಂಗಗಳೂ ಈ ಸೋಂಕಿನ ಮೂಲಗಳಾಗಲಿಕ್ಕಿಲ್ಲ ಎಂದು ವಿಜ್ಞಾನಿಗಳು ತರ್ಕಿಸಿದರು. ಸುಡಾನ್ ಮತ್ತು ಜೈರೆಗಳಲ್ಲಿ ವಿಜ್ಞಾನಿಗಳು ಎಲ್ಲ ಕಶೇರುಕಗಳಲ್ಲಿ ಆಳವಾದ ಅಧ್ಯಯನ ಮಾಡಿದ್ದರೂ ಎಬೋಲ ವೈರಸ್ ಮೂಲವನ್ನು ಪತ್ತೆಹಚ್ಚುವಲ್ಲಿ ವಿಫಲರಾಗಿದ್ದಾರೆ. ಏಡ್ಸ್‌ನಂತಹ ಮಾರಕ ಕಾಯಿಲೆ ಹುಟ್ಟಿದ

ನಾಡಿನಲ್ಲೇ ಎಬೊಲ ಉಗಮವಾಗಿರುವುದು ವಿಜ್ಞಾನಿಗಳ ನಿದ್ದೆಗೆ ಭಂಗ ತಂದಿದೆ. ಹಗಲು ರಾತ್ರಿ ಚಿಂತಿಸಲು ಹಚ್ಚಿದೆ.

ರೋಗ ಪ್ರಸಾರ :

ಎಬೊಲ ವೈರಸ್‌ಗಳ ನೈಸರ್ಗಿಕ ಸಂಗ್ರಹಾಗಾರ ಏನೆಂದು ತಿಳಿಯದು. ಆದರ ಮೂಲ ಬಹುಶಃ ಮೂಷಕಗಳಿರಬೇಕೆಂದು ಭಾವಿಸಲಾಗಿದೆ. ಒಂದೆಡೆ ಈ ರೋಗ ನೆಲೆಯೂರಿದರೆ ಅದರ ಹರಡಿಕೆ ಸುಲಭ. ಅದು ಒಬ್ಬರಿಂದ ಇನ್ನೊಬ್ಬರಿಗೆ ಹೇಗೆ ಹರಡುತ್ತದೆಂಬುದೂ ಅಸ್ಪಷ್ಟ. ಆದರೂ ರೋಗಿಷ್ಟ ವ್ಯಕ್ತಿಗಳ ಸಾಮಿಪ್ಯ, ಅವರ ದೇಹದ ಒಸರಿಕೆ, ದೇಹದ್ರವ ಈ ಸೋಂಕನ್ನು ತಗುಲಿಸಬಲ್ಲದು. ರೋಗಿಗಳಿಗೆ ಇಂಜೆಕ್ಷನ್ ಕೊಡಲು ಬಳಸಿದ ಸೂಜಿಗಳನ್ನು, ಶಸ್ತ್ರಚಿಕಿತ್ಸೆಗೆ ಬಳಸಿದ ಉಪಕರಣಗಳನ್ನು ಜೀವಶುದ್ಧಿ ಮಾಡದೇ ಮತ್ತೊಬ್ಬರಿಗೆ ಉಪಯೋಗಿಸಿದಲ್ಲಿ ಅವರಿಗೆ ಈ ರೋಗದ ಬಳುವಳಿ ಸಿಗಬಹುದು.

ರೋಗದ ಲಕ್ಷಣಗಳು :

ಈ ವೈರಸ್ ದೇಹ ಸೇರಿದ ೪–೧೬ ದಿನಗಳಲ್ಲಿ ರೋಗದ ಲಕ್ಷಣಗಳು ಪ್ರಕಟಗೊಳ್ಳುವವು. ಇದಕ್ಕೆ ರೋಗದ ಅದಿಶಯನಕಾಲ ಎಂದು ಕರೆಯುವರು. ನಂತರ ಅಲ್ಲಿ ಅಭಿವೃದ್ಧಿಗೊಂಡು ರೋಗಿಯ ದೇಹವನ್ನೇ ಹೈಜಾಕ್ ಮಾಡಿ ಆಸ್ಪತ್ರೆಗೆ ತರುವವು.

ಭಾರೀ ಜ್ವರ, ಸಿಡಿಯುವಂಥ ತಲೆನೋವು, ಮೈಕೈನೋವು, ಕೀಲುನೋವು, ಉಬ್ಬಳಿಕೆ, ಸುದೀರ್ಘ ಬಿಕ್ಕಳಿಕೆ ಇವು ಕಾಯಿಲೆಯ ಪ್ರಾರಂಭಿಕ ಲಕ್ಷಣಗಳು. ಸುಸ್ತು, ಬಲಹೀನತೆ, ಅತಿಭೇದಿ, ಹೊಟ್ಟೆನೋವು, ವಾಂತಿ ರೋಗಿಯ ಸುತ್ತ ಗಸ್ತು ಹೊಡೆಯುವುವು. ರೋಗದ ಲಕ್ಷಣಗಳು ಕಾಣಿಸಿಕೊಂಡ ಐದನೇ ದಿನ ಮುಖದ ಮೇಲೆ ತುರಿಕೆ, ಕೆಂಪಡರಿದ ಗುಳ್ಳೆಗಳು ಗೋಚರಿಸಿ, ನಂತರ ದೇಹದ ಎಲ್ಲಕಡೆ ಹರಡುತ್ತವೆ. ರೋಗಿಯಲ್ಲಿ ಪಕ್ಕೆದೆಯ ಪುಪ್ಪುಸ ಪೊರೆಯುರಿತದಿಂದ ಎದೆನೋವು ಮತ್ತು ಒಣಕೆಮ್ಮು ಕಾಣಿಸಿಕೊಳ್ಳುವುವು.


ಆರನೇ ದಿನ ಗುಳ್ಳೆಗಳು ಒಡೆದು ಸೋರಿದರೆ, ನವರಂಧ್ರಗಳಿಂದಲೂ ರಕ್ತಸ್ರಾವ ಪ್ರಾರಂಭವಾಗುತ್ತದೆ. ರಕ್ತಭೇದಿ, ರಕ್ತವಾಂತಿ, ರಕ್ತಕೆಮ್ಮು ರೋಗಿಯಲ್ಲಿ ಭಯಭೀತಿಯನ್ನು ಹುಟ್ಟಿಸುವುವು. ಮೂಗು ವಸಡುಗಳಿಂದ ರಕ್ತಸ್ರಾವ ಉಂಟಾಗುವುದು. ಗರ್ಭಿಣಿಯಲ್ಲಾಗುವ ರಕ್ತಸ್ರಾವ ಗರ್ಭಪಾತದಲ್ಲಿ ಅಂತ್ಯಗೊಳ್ಳುವುದು. ಅತಿಭೇದಿಯಿಂದಾಗುವ ನಿರ್ಜಲೀಕರಣ ಮತ್ತು ವಿಪರೀತ ರಕ್ತಸ್ರಾವದ ಪರಿಣಾಮದಿಂದ ರೋಗಿಯ ದೇಹ ತಲ್ಲಣಿಸಿ ಕುಸಿಯುವುದು. ಯಕೃತ್ ಮತ್ತು ಮೂತ್ರಪಿಂಡಗಳು ಕಾರ್ಯವಿಮುಖವಾಗುವುದರಿಂದ ರೋಗಿಗಳು ಸಾವಿನತ್ತ ಸದ್ದಿಲ್ಲದೆ ಹೆಜ್ಜೆ ಹಾಕುವರು.

ಚಿಕಿತ್ಸೆ :

ಸದ್ಯಕ್ಕೆ ಎಬೊಲಕ್ಕೆ ಯಾವುದೇ ಔಷಧಿ ಇಲ್ಲದಿರುವುದರಿಂದ ರೋಗಿ ದಯನೀಯವಾಗಿ ಸಾಯುವುದನ್ನು ವೈದ್ಯರು, ಸಂಬಂಧಿಕರು ಅಸಹಾಯಕರಾಗಿ ನೋಡಬೇಕಾಗಿದೆ. ಎಂಥ ಹೃದಯ ಕಲಕುವ ಸನ್ನಿವೇಶ! ಎಬೊಲ ವೈರಸ್ ತಡೆಗಟ್ಟುವ ಯಾವ

ಲಸಿಕೆಯೂ ಲಭ್ಯವಿಲ್ಲ. ಗುಣಲಕ್ಷಣಗಳಿಗನುಗುಣವಾಗಿ ಅವುಗಳನ್ನು ದೂರ ಮಾಡುವ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ರೋಗಿಯನ್ನು ಪ್ರತ್ಯೇಕವಾಗಿರಿಸಿ ಸುಮಾರು ಮೂರು ವಾರಗಳ ಪರ್ಯಂತ ಶುಶ್ರೂಷೆ ಮಾಡಬೇಕು. ರೋಗಿಯ ಶುಶ್ರೂಷೆಯಲ್ಲಿ ನಿರತರಾದವರು ರೋಗ ರಕ್ಷಣೆಯ ಉಡುಪು, ಗವಸಣಿಕೆಗಳನ್ನು ಮತ್ತು ಮುಖವಾಡಗಳನ್ನು ಧರಿಸಬೇಕು.

ತಲೆನೋವು, ಜ್ವರದಂಥ ಸಾಮಾನ್ಯ ಕಾಯಿಲೆ ಬಂದವರನ್ನು ಜೈರೆಯ ಜನರೀಗ ಸಂಶಯದಿಂದ ನೋಡುತ್ತಿದ್ದಾರೆ. ಹೆದರಿದವರ ಮೇಲೆ ಕಪ್ಪೆಯನ್ನೆಸೆದಂತೆ ಭಿತ್ತಿಪತ್ರಗಳೂ ಕೂಡ 'ಕಾಯಿಲೆ ಇದ್ದವರನ್ನು ಮುಟ್ಟಬೇಡಿ', 'ಶವಗಳ ಹತ್ತಿರ ಹೋಗಬೇಡಿ' ಎಂದು ಸಾರುತ್ತಿವೆ. ಧಾರ್ಮಿಕ ವಿಧಿವಿಧಾನಗಳೂ ವೈದ್ಯರನ್ನು ಕಂಗೆಡಿಸಿವೆಯೆಂದರೆ ತಪ್ಪಾಗಲಾರದು.' ಎಬೋಲದಿಂದ ಸತ್ತವರನ್ನು ಸಾಮೂಹಿಕವಾಗಿ ಸುಡಲು ಕೆಲವು ಸಂಬಂಧಿಕರು ಒಪ್ಪುತ್ತಿಲ್ಲ. ಇನ್ನು ಕೆಲವೆಡೆ ಹೂಳಿದ ಹೆಣಗಳಿಂದ ರಕ್ತದ ಸ್ಯಾಂಪಲ್ ತೆಗೆದುಕೊಳ್ಳಲು ವೈದ್ಯರು ಅಡ್ಡಿ ಎದುರಿಸಬೇಕಾಗಿದೆ. ತಪಾಸಣೆಮಾಡಿಕೊಂಡರೆ ಆಸ್ಪತ್ರೆ ಉಪಕರಣಗಳ ಮೂಲಕ ತಮಗೂ ಸೋಂಕು ತಗಲಬಹುದು ಎಂದು ಹೆದರಿದವರೆಷ್ಟೋ? ತನ್ನಲ್ಲಿಗೆ ಎಬೋಲ ರೋಗಿ ಬಂದಾನೆಂದು ಆಸ್ಪತ್ರೆಗೆ ಹೋಗದೆ ಮನೆಯಲ್ಲಿಯೇ ಉಳಿದ ವೈದ್ಯರೆಷ್ಟೋ? ಒಟ್ಟಿನಲ್ಲಿ ಎಬೋಲ ಯಾರು ಯಾರನ್ನು ನಂಬದಂಥ ಪರಿಸ್ಥಿತಿಯನ್ನು ಸೃಷ್ಟಿಸಿದೆ.



ಅದೃಷ್ಟವೆ ಒಲಿದು ಕೊಡಲಿ ಎಂದು ಆಶೆಯಿಟ್ಟುಕೊಂಡು ಕೂಡುವದು ಮೂರ್ಖತನ. ಅದೃಷ್ಟ ಹುಡುಕಿಕೊಂಡು ನೀನಾಗಿ ಹೋಗಬೇಕು. ಅದೃಷ್ಟದ ಬೆನ್ನು ಹತ್ತಲು ಪ್ರಯತ್ನ ಪುರುಷಾರ್ಥ, ಸಾಧನೆಗಳ ತ್ರಿಸೂತ್ರ ಮಾರ್ಗವನ್ನು ನೀನೂ ಅವಲಂಬಿಸಬೇಕು.

—ಸ್ವಾಮೀ ಅಭಿಷಾನಂದ

ಕ್ಯಾನ್ಸರ್—ಜೀವನ ಶೈಲಿಯ ಪ್ರತಿಬಿಂಬ

ಡಾ|| ಎಚ್. ಡಿ. ಚಂದ್ರಪ್ಪಗೌಡ

ಜನರ ಮನಸ್ಸಿನಲ್ಲಿ ಭಯಭೀತಿ ಉಂಟು ಮಾಡುವ ಕಾಯಿಲೆಗಳ ಪೈಕಿ ಕ್ಯಾನ್ಸರ್‌ಗೆ ಆದ್ಯತೆ. ಇದು ಅನಾದಿಯಿಂದಲೂ ಇರುವ ಕಾಯಿಲೆಯಾದರೂ, ಇತ್ತೀಚಿನ ವರ್ಷಗಳಲ್ಲಿ ಇದರ ಪ್ರಮಾಣ ಹೆಚ್ಚಾಗುತ್ತಿರುವಂತಿದೆ. ಜೊತೆಗೆ ಗುಣಪಡಿಸಲಾರದ ಕಾಯಿಲೆ ಎಂಬ ತಪ್ಪು ಅಭಿಪ್ರಾಯವೂ ಇರುವಂತಿದೆ. ಆದರೆ, ಪ್ರಸ್ತುತ ಅಷ್ಟು ನಿರಾಶಾದಾಯಕ ಪರಿಸ್ಥಿತಿ ಇಲ್ಲ. ಕ್ಯಾನ್ಸರ್ ಪದಕ್ಕೂ ಏಡಿಗೂ ಸಂಬಂಧವಿದೆ. ಏಡಿ ತನ್ನ ಸುತ್ತಲ ಪ್ರದೇಶವನ್ನು ಸದ್ದುಗದ್ದಲವಿಲ್ಲದೆ ಕೊರೆದು ನಾಶಪಡಿಸುವಂತೆಯೇ, ಕ್ಯಾನ್ಸರ್ ಸಹ ಕಾರ್ಯನಿರ್ವಹಿಸುವುದರಿಂದ ಈ ಹೋಲಿಕೆ ಬಂದಂತಿದೆ.

ಮೊದಲಿಗೆ ಕ್ಯಾನ್ಸರ್ ಎಂದರೇನು ಎಂಬುದನ್ನು ತಿಳಿಯಲು ಪ್ರಯತ್ನಿಸೋಣ. ಮೈಮೇಲೆ ಬಹಳ ಕಾಲ ವಾಸಿಯಾಗದ ಹುಣ್ಣು (ವ್ರಣ) ಅಥವಾ ಗೆಡ್ಡೆಗಳಿದ್ದರೆ, ಅದನ್ನೇ ಕ್ಯಾನ್ಸರ್ ಎನ್ನುವರಿದ್ದಾರೆ. ಆದರೆ ಎಲ್ಲ ಗೆಡ್ಡೆ ಅಥವಾ ವ್ರಣಗಳು ಕ್ಯಾನ್ಸರ್ ಆಗಿರುವುದಿಲ್ಲ. ಅಂಥವುಗಳಲ್ಲಿ ಕ್ಯಾನ್ಸರ್ ಉಂಟಾಗುವ ಸಾಧ್ಯತೆಗಳಿರಬಹುದಷ್ಟೆ. ಹಾಗೆ ನೋಡಿದರೆ ರಕ್ತದ ಕ್ಯಾನ್ಸರ್ ಆದವರಲ್ಲಿ ಅಂಥ ಬಾಹ್ಯ ಲಕ್ಷಣಗಳಾವುವೂ ಇರಲಾರವು.

ದೇಹದ ಯಾವುದೇ ಒಂದು ವಲಯ ಅಥವಾ ಅವಯವದ ಜೀವಕೋಶಗಳು ಎಡೆಬಿಡದೆ ವಿಭಜಿಸಿ, ವೃದ್ಧಿಯಾಗುವ ಪ್ರಕ್ರಿಯೆ ಕ್ಯಾನ್ಸರ್‌ಗೆ ನಾಂದಿಯಾಗುತ್ತದೆ. ಆದರೆ ನಮ್ಮ ಜೀವದ ಉಗಮವೇ ಕೋಶಗಳು ವ್ಯವಸ್ಥಿತ ವಿಭಜನೆಯಾಗುವುದರಿಂದಲೇ ಎಂಬುದನ್ನು ಊಹಿಸಿಕೊಳ್ಳಿ. ಪುರುಷನ ವೀರ್ಯಾಣು, ಮಹಿಳೆಯ ಅಂಡಾಣುವಿನೊಡನೆ ಮಿಳಿತಗೊಂಡು ವ್ಯವಸ್ಥಿತವಾಗಿ ವಿಭಜನೆಯಾಗುವುದರಿಂದಲೇ, ತಾಯಿಯ ಗರ್ಭಕೋಶದಲ್ಲಿ ಭ್ರೂಣ ಬೆಳವಣಿಗೆಯಾಗುತ್ತದೆ. ವ್ಯಕ್ತಿಯ ಮುಂದಿನ ಬೆಳವಣಿಗೆಯೂ ಅದೇ ರೀತಿಯ ಕೋಶಗಳ ವಿಭಜನೆಯಿಂದಲೇ ಆಗುತ್ತಿರುತ್ತದೆ. ಮೈಮೇಲೆ ಉಂಟಾದ ಗಾಯಗಳು ವಾಸಿಯಾಗುವುದು ಸಹಾ ಆ ವಲಯದ ಕೋಶಗಳು ವಿಭಜನೆಯಾಗುವುದರಿಂದಲೇ. ಈ ತರಹದ ಸಹಜ ಬೆಳವಣಿಗೆಗೆ ಸಹಕಾರಿಯಾಗುವ ವಿಭಜನೆಗೂ, ಕ್ಯಾನ್ಸರ್ ಪರಿಸ್ಥಿತಿಯಲ್ಲಿ ಕೋಶಗಳು ವಿಭಜನೆಯಾಗುವುದಕ್ಕೂ, ಮೂಲಭೂತ ವ್ಯತ್ಯಾಸಗಳಿರುವುದನ್ನು ಗಮನಿಸಬೇಕು. ಸಹಜ ಬೆಳವಣಿಗೆಯಲ್ಲಿ ವಿಭಜನೆ ಒಂದು ವ್ಯವಸ್ಥಿತ ರೀತಿಯಲ್ಲಾಗುತ್ತದೆ. ಆದರೆ ಕ್ಯಾನ್ಸರ್ ಬೆಳ

ವಣಿಗೆಯು ಕೋಶಗಳ ವಿಭಜನೆ ಯಾವುದೇ ಉದ್ದೇಶ, ನಿಬಂಧನೆ, ನಿರ್ದೇಶನಕ್ಕೊಳ ಪಡದೆ ಯದ್ವಾತದ್ವವಾಗಿ ನಿರಂತರ ಬೆಳೆಯುತ್ತಿರುತ್ತವೆ. ಆದುದರಿಂದಲೇ ಕ್ಯಾನ್ಸರ್ ಗೆಡ್ಡೆ ಅಥವಾ ವ್ರಣ ಶೀಘ್ರಗತಿಯಲ್ಲಿ ಹಿಂದಾಗುತ್ತಿರುತ್ತದೆ; ಇಲ್ಲವೇ ವಿಶಾಲವಾದ ವಿಸ್ತರಣೆಗೊಳ್ಳುತ್ತಿರುತ್ತದೆ. ಆದರೂ ಎಲ್ಲ ರೀತಿಯ ಗೆಡ್ಡೆ ಅಥವಾ ವ್ರಣ ಇದೇ ರೀತಿ ವರ್ತಿಸುವುದಿಲ್ಲ, ಕೆಲವು ನಿಧಾನ ಗತಿಯಲ್ಲಿ ವಿಭಜನೆಯಾಗಿ, ಒಂದು ಹಂತವನ್ನು ತಲಪಿದೊಡನೆ ಸ್ಥಗಿತವಾಗಿಬಿಡುತ್ತವೆ. ಇವನ್ನು "ಸೌಮ್ಯರೀತಿಯ (Benign) ಗೆಡ್ಡೆ ವ್ರಣ" ಗಳೆಂದು ಪರಿಗಣಿಸಲಾಗಿದೆ. ಇವು ಸಾಮಾನ್ಯವಾಗಿ ಕ್ಯಾನ್ಸರ್ ಆಗಿ ಪರಿವರ್ತನೆಯಾಗುವುದಿಲ್ಲ; ....ತೆಗೆದುಹಾಕಿದರೆ ಮತ್ತೆ ಮರುಕಳಿಸಲಾರವು. ಇನ್ನುಳಿದವು "ಅತ್ಯುಗ್ರ ರೀತಿ" ಮತ್ತು ವೇಗದಲ್ಲಿ ಬೆಳವಣಿಗೆಯಾಗುತ್ತವೆ. ದುಗ್ಧರಸನಾಳ ಅಥವಾ ರಕ್ತನಾಳಗಳ ಮೂಲಕ ಪ್ರವಹಿಸಿ ದೂರದ ಅವಯವಗಳಿಗೂ "ಗುಳೆ ಸಾಗಿ" (Metastatize) ನೆಲೆಯಾಗುತ್ತವೆ. ಇವನ್ನು ಮೆಲಿಗ್ನಂಟ್ ಅಥವಾ "ಅತ್ಯುಗ್ರರೀತಿಯ" (Malignant) ಗೆಡ್ಡೆ ಅಥವಾ ವ್ರಣಗಳೆನ್ನುತ್ತಾರೆ. ಈ ಪರಿಸ್ಥಿತಿಯೇ ಕ್ಯಾನ್ಸರ್, ಕಾರ್ಸಿನೋಮ ಅಥವಾ ಸಾರ್ಕೋಮಾ ಮುಂತಾಗಿ ಪ್ರಸಿದ್ಧಿಯಾಗಿರುವುದು.

೧. ಕೆರಳಿಕೆ ಅಥವಾ (Irritation):

ಈಗ, ಕೆಲವು ಕೋಶಗಳ ಅನಿರ್ಬಂಧಿತ, ಯದ್ವಾತದ್ವ, ಅನುದ್ದೇಶಿತ ವಿಭಜನೆಗಳಿಗೆ ಕಾರಣಗಳೇನಿರಬಹುದೆಂಬುದನ್ನು ವಿವೇಚಿಸೋಣ. ಚರ್ಮ ಅಥವಾ ಯಾವುದೇ ಅವಯುವದಲ್ಲಿ ಭೌತಿಕ ಇಲ್ಲವೇ ರಾಸಾಯನಿಕ ಕಾರಣಗಳಿಂದ ಸದಾ ಕೆರಳುವಂಥಾ ಪರಿಸ್ಥಿತಿ ಇದ್ದರೆ ಆ ಭಾಗದ ಕೋಶಗಳು ಈ ತರಹೆಯಲ್ಲಿ ವಿಭಜನೆಯಾಗುವುದು ಸಹಜ ಪ್ರತಿಕ್ರಿಯೆ. ಬಾಯಿಯೊಳಗೆ ಅಡ್ಡಾದಿಡ್ಡಿಯಾಗಿ ನೆಲೆಯಾಗಿರುವ ಕೊರಕಲು ಹಲ್ಲು, ವಸಡು, ನಾಲಿಗೆ ಇಲ್ಲವೇ ಕೆನ್ನೆಯ ಒಳಭಾಗದಲ್ಲಿ ಸದಾ ಕೆರಳಿಕೆಯ ಪರಿಸ್ಥಿತಿಯನ್ನು ಉಂಟುಮಾಡುತ್ತವೆ. ಅಲ್ಲಿಯ ಲೋಳ್ಪರೆಯಲ್ಲಿ ಆಗುತ್ತಿರಬಹುದಾದ ಜಖಮನ್ನು ಮೊದಲಿನ ಸ್ಥಿತಿಗೆ ತರಲು ಕೋಶಗಳು ಪದೇ ಪದೇ ವಿಭಜನೆಯಾಗುತ್ತಿರಬೇಕಾಗುತ್ತದೆ. ಬಹಳ ಕಾಲ ಕೆರಳಿಕೆ ಮುಂದುವರಿದಾಗ ಕೋಶಗಳ ವಿಭಜನೆಯ ಸಹಜ ರೀತಿ ನೀತಿಗಳು ಹತೋಟಿ ತಪ್ಪಿ, ಅಲ್ಲಿ ಕ್ಯಾನ್ಸರ್‌ನ ಪರಿವರ್ತನೆಯಾಗುತ್ತದೆ. ಆರಂಭದ ಹಂತದಲ್ಲೇ ಗುರುತಿಸಿ ಸಂಬಂಧಿಸಿದ ಹಲ್ಲನ್ನು ತೆಗೆಸಿದರೆ, ಪರಿಸ್ಥಿತಿ ಸಹಜ ಸ್ಥಿತಿಗೆ ಹಿಂದಿರುಗಬಹುದು. ಕಾಶ್ಮೀರದ ಚಳಿಯನ್ನು ನಿವಾರಿಸಲು ಅಲ್ಲಿ ಜನರು ಹೊಟ್ಟೆ ಮತ್ತು ತೊಡೆಗಳ ನಡುವಿನ ಜಾಗದಲ್ಲಿ ಕಾಂಗ ಎನ್ನುವ ಕೆಂಡದ ಅಗ್ಗಿಷ್ಟಿಕೆಗಳನ್ನು ಇರಿಸಿಕೊಳ್ಳುತ್ತಾರೆ. ಆದರಿಂದಲೂ ಪದೇ ಪದೇ ಉಂಟಾಗುವ ಸುಟ್ಟಗಾಯಗಳಲ್ಲಿ "ಕಾಂಗರೀ ಕ್ಯಾನ್ಸರ್" ಎಂಬ ಸ್ಥಿತಿಯುಂಟಾಗುತ್ತದೆ. ಭಾರತ, ಮತ್ತಿತರ ಪೌರಸ್ತ್ಯ ದೇಶಗಳ ಜನರು ಬಾಯಿಯೊಳಗಡೆ ಎಲೆ ಅಡಿಕೆ ಸುಣ್ಣ, ತಂಬಾಕುಗಳ ಮಿಶ್ರಣವನ್ನು ಇರಿಸಿಕೊಂಡು ಅಗಿಯುವುದರಿಂದಲೂ ಬಾಯಿಯೊಳಗೆ ಕ್ಯಾನ್ಸರ್ ಉದ್ಭವಿಸುತ್ತದೆ.

೨. ರೋಗಾಣು ಸೋಂಕು:

ಬ್ಯಾಕ್ಟೀರಿಯಾ ಮತ್ತು ವೈರಸ್ ಜೀವ ಕಣಗಳು ಕ್ಯಾನ್ಸರನ್ನೂ ಪ್ರಚೋದಿಸ ಬಹುದೆಂಬ ಶಂಕೆ ಬಹಳ ಕಾಲದಿಂದ ಇದೆ. ಈ ಶತಮಾನದ ಆದಿಯಲ್ಲಿ ರೌಸ್ ಎಂಬ ವಿಜ್ಞಾನಿಯೊಬ್ಬರು ಕೋಳಿಗಳಲ್ಲಿ ಒಂದು ಬಗೆಯ ಸಾರ್ಕೋಮಾ (ಕ್ಯಾನ್ಸರ್)ವನ್ನು ಒಂದರಿಂದ ಇತರೆ ಕೋಳಿಗಳಿಗೆ ದಾಟಿಸು ವಲ್ಲಿ ಯಶಸ್ವಿಯಾಗಿದ್ದರು. ಮನುಷ್ಯರಲ್ಲಿ ಈ ತರಹೆ ಸಾಧ್ಯತೆ ಈ ತನಕ ಕಂಡು ಬಂದಿಲ್ಲ. ಆದರೆ ವೈರಸ್‌ಗಳು, ಕೋಶ ಗಳೊಳಗಿನ ವಂಶವಾಹಿ ಜೀನ್‌ಗಳಲ್ಲಿ ಪರಿ ವರ್ತನೆಯುಂಟುಮಾಡಿ ಮುಂದಿನ ಪೀಳಿಗೆ ಯವರಲ್ಲಿ ಕ್ಯಾನ್ಸರ್‌ಗೆ ಕಾರಣವಾಗಬಹು ದೆಂಬ ಸಾಧ್ಯತೆಗಳನ್ನು ತಳ್ಳಿ ಹಾಕು ವಂತಿಲ್ಲ.

೩. ಅನುವಂಶೀಯತೆ:

ವ್ಯಕ್ತಿಯ ಬಣ್ಣ, ಮತ್ತಿತರ ಗುಣಾವ ಗುಣಗಳು ವಂಶವಾಹಿ ಜೀನ್‌ಗಳ ಮೂಲಕ ಮುಂದಿನ ಪೀಳಿಗೆಯವರಲ್ಲಿ ಕಾಣಿಸಿಕೊಳ್ಳು ತ್ತವಷ್ಟೆ, ಇತ್ತೀಚಿನ ವರ್ಷಗಳಲ್ಲಿ ಈ ಸಾಧ್ಯತೆಗಳ ಬಗೆಗೆ ಪುರಾವೆಗಳು ದೊರೆಯು ತ್ತಿದ್ದು, "ಅಂಕೋಜೀನ್ಸ್" ಗಳೆಂಬ ವಿಶಿಷ್ಟ ಜೀನ್‌ಗಳನ್ನು ಗುರುತಿಸಲಾಗಿದೆ. "ಮೇಲುಗೈ ಪಡೆದ ಜೀನ್ಸ್" (Dominant genes) ಮೂಲಕ ಅವು ಮುಂದಿನ ಪೀಳಿಗೆಯ ಕೆಲವರಲ್ಲಿ ಕಾಣಿಸಿ ಕೊಳ್ಳುತ್ತವೆನ್ನಲಾಗಿದೆ. ಬ್ರೋಕಾ ಎಂಬ ವೈದ್ಯ, ಸಂಗ್ರಹಿಸಿದ ಮಾಹಿತಿಯ ಪ್ರಕಾರ ಒಂದೇ ಕುಟುಂಬದ ೧೬ ಜನರಲ್ಲಿ ವಿವಿಧ ಅವಯವಗಳ ಕ್ಯಾನ್ಸರ್ ಆದವರು ಇದ್ದರು. ರೆಟಿನೋ ಬ್ಲಾಸ್ಟೋಮಾ ಎಂಬ ಕಣ್ಣಿನ ಕ್ಯಾನ್ಸರ್ ಕೆಲವು ವಂಶಸ್ಥರಲ್ಲಿ ಪದೇ ಪದೇ ಕಾಣಿಸಿಕೊಂಡ ದಾಖಲೆಗಳಿವೆ. ಈ ಉದಾ ಹರಣೆಗಳಿಂದ ಕುಟುಂಬದಲ್ಲಿ ಯಾರಿಗಾದರೂ ಕ್ಯಾನ್ಸರ್ ಆಗಿದ್ದರೆ, ಇತರರಿಗೂ ಆಗಿಬಿಡು ತ್ತದೆಂದು ಗಾಬರಿ ಪಡಬೇಕಾಗಿಲ್ಲ. ಆದರೆ ಕ್ಯಾನ್ಸರ್ ಪೀಡಿತ ವ್ಯಕ್ತಿಗೆ ಇದ್ದ ಕ್ಯಾನ್ಸರ್ ಕಾರಕ ಪರಿಸರ, ಉದ್ಯೋಗ, ಆಹಾರಭ್ಯಾಸ, ಚಟ, ರೂಢಿ, ಕೆರಳಿಕೆ, ವಿಕಿರಣಗಳ ಅವ ಕಾಶ ಅವರ ಪೀಳಿಗೆಯವರಲ್ಲಿ ಮುಂದು ವರಿದರೆ, ಅಂತಹವರಲ್ಲಿ ಕ್ಯಾನ್ಸರ್ ಆಗುವ ಸಾಧ್ಯತೆಗಳಿರುತ್ತವೆ.

೪. ಹಾರ್ಮೋನುಗಳ ಪ್ರಭಾವ:

ನಮ್ಮ ಶರೀರದಲ್ಲಿರುವ ಥೈರಾಯಿಡ್, ಸ್ತನ, ವೃಷಣ, ಅಂಡಾಶಯ, ಮುಂತಾದ ಅವಯವಗಳ ಕಾರ್ಯಕ್ರಮಗಳು, ಅವು ಗಳಿಂದಲೇ ಸ್ರವಿಕೆಯಾಗುವ ಅಥವಾ ಇತರ ಪೂರಕ ಗ್ರಂಥಿಗಳಿಂದ ಉದ್ಭವಿಸುವ ಅಂತಃ ಸ್ರವಿಕೆ ಅಥವಾ ಹಾರ್ಮೋನುಗಳಿಂದ ಪ್ರಭಾವಿತವಾಗಿರುತ್ತವೆ. ಥೈರಾಕ್ಸಿನ್ ಪ್ರಚೋದಕ ಹಾರ್ಮೋನು ಹೆಚ್ಚಾದರೆ ಥೈರಾಯಿಡ್ ಕ್ಯಾನ್ಸರ್, ಬಿದೆಜನಕ ಹಾರ್ಮೋನು ಹೆಚ್ಚಾದರೆ ಸ್ತನದ ಕ್ಯಾನ್ಸರ್, ಪುಲ್ಲಿಂಗಕಾರಿ ಹಾರ್ಮೋನು (Testosterone) ಹೆಚ್ಚಾದರೆ ವೃಷಣದ ಕ್ಯಾನ್ಸರ್ ಮುಂತಾದವು ಉದ್ಭವಿಸುತ್ತವೆಂಬುದಕ್ಕೆ ಪುರಾವೆಗಳಿವೆ.

೫. ಆಹಾರ:

ಆಹಾರದಲ್ಲಿ ಪೋಷಕಗಳ ಕೊರತೆ ಇರುವ ಬಡಜನರಲ್ಲಿ ಬಾಯಿ, ಗಂಟಲು, ಲಿವರ್,

ಮುಂತಾದ ಅವಯವಗಳಲ್ಲಿ ಕ್ಯಾನ್ಸರ್ ಆಗುವ ಸಾಧ್ಯತೆಗಳು ಹೆಚ್ಚು, ಕೊಬ್ಬಿನ ಅಂಶಗಳು ಹೆಚ್ಚಾಗಿರುವ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸುವ ಶ್ರೀಮಂತ ವರ್ಗದವರಲ್ಲಿ ಸ್ತನ, ಗರ್ಭಕೋಶ, ಪ್ರಾಸ್ಟೇಟ್ ಮುಂತಾದವುಗಳಲ್ಲಿ ಕ್ಯಾನ್ಸರ್ ಪ್ರಮಾಣ ಜಾಸ್ತಿಯಾಗಿರುವುದು ಕಂಡುಬಂದಿದೆ. ಜೀವಸತ್ವ "ಎ"ಗೆ ಕ್ಯಾನ್ಸರ್ ನಿರೋಧಕ ಶಕ್ತಿಯಿದ್ದು, ಅದರ ಕೊರತೆ ಇರುವವರಲ್ಲಿ ಬಾಯಿ, ಗಂಟಲು, ಶ್ವಾಸಕೋಶ, ಚರ್ಮ, ಲೋಳ್ಪರೆ ಮುಂತಾದ ಕಡೆಯು ಕ್ಯಾನ್ಸರ್‌ಗಳಿಗೆ ಪ್ರಚೋದನೆ ನೀಡಬಹುದೆಂಬ ಶಂಕೆ ಇದೆ. ಈ ದಿಸೆಯಲ್ಲಿ ಹಣ್ಣು-ಹಂಪಲು, ಹಸಿರು ತರಕಾರಿಗಳಿಂದ ಕೂಡಿದ ಸಂತುಲಿತ ಆಹಾರ ಪದಾರ್ಥಗಳನ್ನು ಉಪಯೋಗಿಸುವುದು ಒಳ್ಳೆಯ ಅಭ್ಯಾಸ. ಆಹಾರದಲ್ಲಿ ನಾರು, ಮರದೆಳೆಗಳು ಯಥೇಚ್ಛವಾಗಿದ್ದರೆ, ಕರುಳುಗಳಲ್ಲಿ ಮಲದ ಶಿಲುಕಿನ ಗಾತ್ರ ಹೆಚ್ಚಾಗಿ, ಬಿರುಸಿನಿಂದ ಹೊರಗೆ ತಳ್ಳಲ್ಪಡುತ್ತದೆ. ಅಮೆರಿಕಾದಂಥ ಮುಂದುವರಿದ ರಾಷ್ಟ್ರಗಳ ಜನರ ಆಹಾರದಲ್ಲಿ ಈ ತರಹದ ನಾರು ಮರದೆಳೆಗಳಿಲ್ಲದ ಮಾಂಸ, ಬ್ರೆಡ್, ಬಿಸ್ಕತ್, ಕೇಕ್‌ಗಳನ್ನು ಬಳಸುವ ಅಭ್ಯಾಸವಿರುತ್ತದೆ. ಆದುದರಿಂದ ಅವರಲ್ಲಿ ಮಲದ ಶಿಲುಕು ದೊಡ್ಡ ಕರುಳಿನಲ್ಲಿ ಬಹಳ ಸಮಯ ಉಳಿದುಕೊಂಡು ಕೊಳೆತು ಬಿಡುತ್ತದೆ. ಅಂತಹವರಲ್ಲಿ ದೊಡ್ಡ ಕರುಳಿನ ಕ್ಯಾನ್ಸರ್ ಪ್ರಮಾಣ ಜಾಸ್ತಿಯಾಗಿರುವುದನ್ನು ನೋಡಬಹುದಾಗಿದೆ.

೬. ಚಟ, ರೂಢಿ, ಅಭ್ಯಾಸ ಇತ್ಯಾದಿಗಳ ಪ್ರಭಾವ:

ಜನರು ತಮ್ಮ ಜೀವನ ಶೈಲಿಯಲ್ಲಿ ರೂಢಿಸಿಕೊಂಡಿರುವ ಚಟ, ಅಭ್ಯಾಸ, ಇತ್ಯಾದಿಗಳಿಗೂ ಕೆಲವು ಬಗೆಯ ಕ್ಯಾನ್ಸರ್‌ಗಳಿಗೂ ನಿಕಟ ಸಂಬಂಧವಿರುವುದಕ್ಕೆ ಈಗ ಸಾಕಷ್ಟು ಪುರಾವೆಗಳು ದೊರೆತಿವೆ. ಧೂಮಪಾನ ಹಾಗೂ ತಂಬಾಕನ್ನು ನಾನಾ ರೀತಿಯಲ್ಲಿ ಬಳಸುವ ಚಟ ಇರುವವರಲ್ಲಿ ಶ್ವಾಸಕೋಶ, ಬಾಯಿ, ಗಂಟಲುಗಳಲ್ಲಿ ಕ್ಯಾನ್ಸರ್ ಆಗುತ್ತವೆಂಬುದು ಶೃತಪಟ್ಟಿದೆ. ಸಿಂಗಾಪುರದಲ್ಲಿ ವಾಸಿಸುತ್ತಿದ್ದ ಭಾರತೀಯರು ಇಲ್ಲಿಯಂತೆಯೇ ಎಲೆ ಅಡಿಕೆ ತಂಬಾಕನ್ನು ಜಗಿಯುವ ಅಭ್ಯಾಸವನ್ನು ಮುಂದುವರಿಸಿಕೊಂಡಿರುತ್ತಿದ್ದರು. ಅಂತಹವರಲ್ಲಿ ಬಾಯಿ ವಲಯದ ಕ್ಯಾನ್ಸರ್ ಭಾರತದಲ್ಲಿರುವವರ ಪ್ರಮಾಣದಲ್ಲೇ ಆಗುತ್ತಿತ್ತು. ಕೆಲವು ವರ್ಷಗಳ ಹಿಂದೆ ಹೀಗೆ ಎಲೆ ಅಡಿಕೆ ಹಾಕಿ ಸಿಕ್ಕಸಿಕ್ಕ ಕಡೆ ಉಗುಳುವುದನ್ನು ಅಲ್ಲಿಯ ಸರ್ಕಾರ ಕಟ್ಟುನಿಟ್ಟಾಗಿ ನಿಷೇಧಿಸಿತು. ಉಲ್ಲಂಘನೆ ಮಾಡಿದವರಿಗೆ ಕಠಿಣ ಶಿಕ್ಷೆ ನೀಡಿದರು. ಈ ಅಭ್ಯಾಸವನ್ನು ಇರಿಸಿಕೊಂಡವರು ಅದನ್ನು ನಿಲ್ಲಿಸಬೇಕಾಯಿತು. ಹೊಸ ಪೀಳಿಗೆಯ ಭಾರತ ಸಂಜಾತರು ಈ ಅಭ್ಯಾಸವನ್ನು ರೂಢಿಸಿಕೊಳ್ಳಲೇ ಇಲ್ಲ. ಸಿಂಗಾಪುರದಲ್ಲಿ ಈಗ ಬಾಯಿ ವಲಯದ ಕ್ಯಾನ್ಸರ್ ಹೇಳಹೆಸರಿಲ್ಲದ್ದಾಗಿದೆಯಂತೆ. ಪುರುಷರ ಶಿಶ್ನದ ಕ್ಯಾನ್ಸರ್, ಸುನ್ನತಿ ಮಾಡಿಸುವ ಅಭ್ಯಾಸವಿರುವ ಯಹೂದ್ಯರು ಮತ್ತು ಮುಸ್ಲಿಂ ಜನಾಂಗದವರಲ್ಲಿ ಇಲ್ಲವೇ ಇಲ್ಲ ಎನ್ನಬಹುದು, ಅದನ್ನು ಒಂದು ರೂಢಿಯಂತೆ ಮಾಡಿಕೊಳ್ಳದಿರುವ ಇತರ ಜನಾಂಗದವರಲ್ಲಿ ಶಿಶ್ನದ ಕ್ಯಾನ್ಸರ್ ಪ್ರಮಾಣ ಹೆಚ್ಚಾಗಿರುತ್ತದೆ. ಶಿಶ್ನದ ಮುಂದೊಗಲಿನಡಿಯಲ್ಲಿ ಶೇಖರವಾಗುವ "ಸ್ಮೆಗ್ಮಾ" ಎಂಬ ಪಿಸುರಿನಂಥ ಪದಾರ್ಥ

ಇದಕ್ಕೆ ಕಾರಣವೆನ್ನಲಾಗಿದೆ. ಹೀಗೆ ಜೀವನ ಶೈಲಿಯ ಪ್ರಭಾವದಿಂದ ಉಂಟಾಗುವ ಕ್ಯಾನ್ಸರ್‌ಗಳ ಪಟ್ಟಿ ಬೆಳೆಯುತ್ತಾ ಹೋಗುತ್ತಿದೆ.

೭. ಪರಿಸರ:

ಕಾರ್ಖಾನೆಗಳು ಮತ್ತು ವಾಹನಗಳಿಂದ ಹೊರಬರುವ ಹೊಗೆ, ನಗರವಾಸಿಗಳ ಶ್ವಾಸಕೋಶ ಕ್ಯಾನ್ಸರ್‌ಗಳಿಗೆ ಕಾರಣವಾಗುತ್ತಿವೆಯೆಂದು ತಿಳಿದು ಬಂದಿದೆ. ಆಸ್ಟ್ರೇಲಿಯಾದ ಕ್ವೀನ್ಸ್ ಲ್ಯಾಂಡ್ ಪ್ರಾಂತದಲ್ಲಿ ವಾಸಿಸುವ ಜನರಲ್ಲಿ ಚರ್ಮದ ಕ್ಯಾನ್ಸರ್ ಪ್ರಮಾಣ ಅತಿ ಹೆಚ್ಚು. ಅಲ್ಲಿಯ ಬಿಸಲಿನ ಜಳಕದ ಪರಿಣಾಮದಿಂದ ಹೀಗಾಗುತ್ತಿದೆ. ರೇಡಿಯಂ, ಥೋರಿಯಂ, ಯುರೇನಿಯಂ, ಖನಿಜಗಳ ಗಣಿಗಳಲ್ಲಿ ಕೆಲಸ ಮಾಡುವವರಲ್ಲಿ ವಿಕರಣತೆ ಪರಿಣಾಮವಾಗಿ ಲ್ಯೂಕೀಮಿಯಾ ಮತ್ತಿತರ ಬಗೆಯ ಕ್ಯಾನ್ಸರ್‌ಗಳು ಅತಿ ಹೆಚ್ಚಾಗಿ ಕಂಡು ಬಂದಿದೆ. ಅದೇ ರೀತಿ ಎಕ್ಸರೇ, ಎಲೆಕ್ಟ್ರಿಕ್, ಎಲೆಕ್ಟ್ರಾನಿಕ್ಸ್, ಮುಂತಾದ ಘಟಕಗಳಲ್ಲಿ ಕಾರ್ಯನಿರತರಾಗಿರುವವರಲ್ಲೂ ಕೆಲವು ಬಗೆಯ ಕ್ಯಾನ್ಸರ್‌ಗಳುಂಟಾಗುತ್ತಿರುವುದು ಇತ್ತೀಚಿನ ವರ್ಷಗಳಲ್ಲಿ ಬೆಳಕಿಗೆ ಬರುತ್ತಿದೆ. ಎರಡನೇ ಮಹಾಯುದ್ಧದಲ್ಲಿ ಜಪಾನಿನಲ್ಲಿ ಸಿಡಿಸಿದ ಆಟಂಬಾಂಬುಗಳು, ಇತ್ತೀಚಿಗೆ ರಷ್ಯಾದ ಚರ್ನೋಬೈಲ್ ಅಣುಸ್ಥಾವರದಲ್ಲುಂಟಾದ ಸೋರಿಕೆಯಿಂದ ಸಂಭವಿಸಿದ ಕ್ಯಾನ್ಸರ್‌ಗಳಿಗೆ ಲೆಕ್ಕವೇ ಇಲ್ಲ.

ಪ್ರಸ್ತುತ ನಾಗರೀಕತೆಯ ಸೋಗಿನಲ್ಲಿ ನಾವು ವಾಸಿಸುತ್ತಿರುವ ಪರಿಸರ, ನಿರತರಾಗಿರುವ ವೃತ್ತಿ, ಸೇವಿಸುವ ಆಹಾರ ಪದಾರ್ಥಗಳು, ರೂಢಿಸಿಕೊಳ್ಳುತ್ತಿರುವ ಅಭ್ಯಾಸ, ಚಟಗಳಿಂದ ನಮ್ಮ ಜೀವನ ಶೈಲಿ ಶೀಘ್ರಗತಿಯಲ್ಲಿ ಬದಲಾಗುತ್ತಿದೆ. ಆಹಾರ ಪಾನೀಯಗಳ ಜತೆ ಹಾನಿಕಾರ ರಾಸಾಯನಿಕಗಳು ನಮ್ಮ ದೇಹವನ್ನು ಸೇರುತ್ತಿವೆ. ಪ್ರತಿದಿನ ವಿಷಾನಿಲಗಳನ್ನೇ ಉಸಿರಾಡುತ್ತಿದ್ದೇವೆ. ಎಕ್ಸ್‌ರೇ, ರೇಡಿಯಂ, ಯುರೇನಿಯಂ, ಮುಂತಾದ ಅಣು ವಿಕರಣ ಸೂಸುವ ಪರಿಸರದಲ್ಲೇ ಸದಾ ಕಾಲಕಳೆಯುತ್ತೇವೆ. ನಾವೀಗ "ಕ್ಯಾನ್ಸರ್ ಕಾರಕ" (carcinogenic) ಪರಿಸರವೆಂಬ ಸಾಗರದಲ್ಲಿ ಈಜಾಡುತ್ತಿದ್ದೇವೆ! ನಮ್ಮ ಜೀವನ ಶೈಲಿಯೇ ಕ್ಯಾನ್ಸರ್‌ನ್ನು ಕೈಬೀಸಿ ಕರೆಯುತ್ತಿದೆಯೆಂದರೆ ಅತಿಶಯೋಕ್ತಿಯಲ್ಲ.

ಕ್ಯಾನ್ಸರ್‌ನ ರೋಗಲಕ್ಷಣಗಳು:

ಬಹುಪಾಲು ಕ್ಯಾನ್ಸರ್‌ಗಳು ಯಾವುದೇ ಸದ್ದು ಗದ್ದಲವಿಲ್ಲದೆ ಹಠಾತ್ತಾಗಿ ಪ್ರಕಟವಾಗುತ್ತವೆಂಬ ಪ್ರತೀತಿ ಇದೆ. ಕೆಲಸಾರಿ ಅದು ಸಂಭವಿಸಬಹುದಾದ ಮೂಲಸ್ಥಳದಲ್ಲಿ ಯಾವುದೇ ಕುರುಹುಗಳಿಲ್ಲದೆ ದೂರದ ಅವಯವ ಒಂದರಲ್ಲಿ ಗುಳೇ ಸಾಗಿ ನೆಲಸಿದ ನಂತರ ಅದರತ್ತ ಗಮನ ಸೆಳೆಯುವಂತಾಗುವುದು ಅಪರೂಪವೇನಲ್ಲ. ಮಿತಿ ಮೀರಿ ಬೆಳವಣಿಗೆಯಾಗುತ್ತಿರುವ ಕ್ಯಾನ್ಸರ್ ಕೋಶಗಳಿಗೆ ವ್ಯಕ್ತಿಯ ಬಹುಪಾಲು ಪೌಷ್ಠಿಕಾಂಶಗಳು ಬಳಕೆಯಾಗುತ್ತಿದ್ದು, ಅವನ್ನು "ಕ್ಯಾನ್ಸರ್ ಸೊರಗಣೆ" ಗೊಳಗಾಗುತ್ತಿದ್ದಾಗ ಗಮನ ಸೆಳೆಯಬಹುದು. ಈ ಮೊದಲೇ ಪ್ರಸ್ತಾಪಿಸಿದಂತೆ ಕ್ಯಾನ್ಸರ್ ವ್ಯಾಧಿ ಗೆಡ್ಡೆ ಅಥವಾ ಹುಣ್ಣುಗಳ ರೂಪದಲ್ಲಿ ಪ್ರಕಟವಾಗಬಹುದು' ಆದರೆ ರಕ್ತದ ಕ್ಯಾನ್ಸರ್‌ನಲ್ಲಿ ಇಂತಹ ಬಾಹ್ಯ ಚಿಹ್ನೆಗಳಿರಲಾರವು, ಕ್ಯಾನ್ಸರ್ ಗೆಡ್ಡೆ ವ್ರಣಗಳು ಜಠರ, ಕರುಳು, ಮುಂತಾದ ಟೊಳ್ಳಾದ ಅವಯವಗಳಲ್ಲಿ ಉದ್ಭವವಾಗಿ ಆಹಾರದ

ಚಲನೆಗೆ ಅಡಚಣೆ ಉಂಟಾದಾಗ ಈ ವ್ಯಾಧಿಯ ಇರುವಿಕೆಯನ್ನು ಶಂಕಿಸಬೇಕಾಗುತ್ತದೆ. ಪ್ರಸ್ತುತ ಪ್ರಪಂಚದಾದ್ಯಂತ ಏಳು ಪ್ರಮುಖ ಅಪಾಯಕಾರಿ ಲಕ್ಷಣಗಳನ್ನು ಗುರುತಿಸಲಾಗಿದ್ದು, ಅವುಗಳು ಇದ್ದಾಗ ಕ್ಯಾನ್ಸರ್‌ನ್ನು ಶಂಕಿಸಿ ರೋಗ ನಿರ್ಣಯ ಮಾಡಬೇಕೆಂಬ ನಿಯಮವಿದೆ.

೧. ಬಾಯಿಯಲ್ಲಾದ ಹುಣ್ಣು ಬಹಳ ಕಾಲ ವಾಸಿಯಾಗದಿರುವುದು.

೨. ಮುಟ್ಟು ನಿಂತ ಮಹಿಳೆಯರಲ್ಲಿ ಪದೇ ಪದೇ ರಕ್ತಸ್ರಾವವಾಗುವುದು.

೩. ದೇಹದ ಯಾವುದೇ ಭಾಗದಲ್ಲಿ ಗಂಟು ಕಟ್ಟಿಕೊಳ್ಳುವುದು, ಅಥವಾ ದಪ್ಪ ಗಟ್ಟಿಯಾಗುವುದು, ವಿಶೇಷವಾಗಿ ಮಹಿಳೆಯರ ಸ್ತನದಲ್ಲಿ.

೪. ಸದಾ ಅಜೀರ್ಣ ಅಥವಾ ನುಂಗಲು ತೊಂದರೆಯಾಗುವುದು.

೫. ಸದಾ ಕೆಮ್ಮು, ಕರ್ಕಶ ಅಥವಾ ಗೊರಲು ಧ್ವನಿ.

೬. ಸಾಮಾನ್ಯ ಮಲ ವಿಸರ್ಜನೆಯ ಅಭ್ಯಾಸದಲ್ಲಿ ಬದಲಾವಣೆ.

೭. ಮಚ್ಚೆ ಚರ್ಮ ಗಂಟುಗಳ ಬಣ್ಣ ಮತ್ತು ಗಾತ್ರಗಳಲ್ಲಿ ಬದಲಾವಣೆ.

ಕ್ಯಾನ್ಸರ್ ಯಾವ ವಯೋಮಾನದವರನ್ನು ಕಡೆಗಣಿಸುವುದಿಲ್ಲ; ಅದಕ್ಕೆ ಸ್ತ್ರೀ ಪುರುಷರೆಂಬ ಭೇದಭಾವಗಳಿಲ್ಲ, ಬಿಳಿಯ ಕರಿಯರೆಂಬ ವರ್ಣಭೇದವೂ ಇಲ್ಲ.

ಕ್ಯಾನ್ಸರ್‌ನ ರೋಗ ನಿರ್ಣಯ :

ರಕ್ತದಲ್ಲಿನ ಬಿಳಿಯ ರಕ್ತಕಣಗಳ ಸಂಖ್ಯೆ ಸಹಜ ಪ್ರಮಾಣಕ್ಕಿಂತ ಅತಿ ಹೆಚ್ಚಾಗಿರುವವರಲ್ಲಿ ರಕ್ತದ ಕ್ಯಾನ್ಸರ್ ಆಗಿರುವುದನ್ನು ಗುರುತಿಸಬಹುದು. ಕೆಲವು ಕ್ಯಾನ್ಸರ್‌ಗಳು ಪ್ರಕಟವಾಗುವ ೫–೬ ತಿಂಗಳುಗಳ ಮೊದಲೇ ರಕ್ತದಲ್ಲಿ "ಟ್ಯೂಮರ್ ಮಾರ್ಕರ್" (Tumour) ಗಳೆಂಬ ಅಂಶಗಳು ಇರುವುದನ್ನು ಗುರುತಿಸಲು ಇತ್ತೀಚಿನ ದಿನಗಳಲ್ಲಿ ಸಾಧ್ಯವಾಗುತ್ತಿದೆ.

ಅನುಮಾನಾಸ್ಪದವಾದ ಗೆಡ್ಡೆ ಅಥವಾ ವ್ರಣಗಳ ಮಾದರಿ ತುಣುಕನ್ನು ಕತ್ತರಿಸಿ ತೆಗೆದು ಜೀವುಂಡಿಗೆ ಪರೀಕ್ಷೆ (Biopsy) ಗೊಳಪಡಿಸುವುದರಿಂದ ಬಹಳಷ್ಟು ಕ್ಯಾನ್ಸರ್‌ಗಳನ್ನು ಪತ್ತೆ ಹಚ್ಚಲಾಗುತ್ತಿದೆ.

ಕ್ಯಾನ್ಸರ್ ಬೆಳೆದಿರುವ ಅಂಗಗಳ ಸುತ್ತಲ ಪ್ರದೇಶದಲ್ಲಿ ಉದುರಿಬಿದ್ದಿರಬಹುದಾದ ಜೀವಕೋಶಗಳನ್ನು ಬಳಿದು ತೆಗೆದು ಗಾಜಿನ ಬಿಲ್ಲೆಗೆ ಲೇಪಿಸಿ, ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸುವುದರಿಂದ ಕ್ಯಾನ್ಸರ್ ಕೋಶಗಳನ್ನು ಗುರುತಿಸಲಾಗುತ್ತದೆ. "ಪ್ಯಾಪಸ್ಮಿಯರ್" ಎಂದು ಹೆಸರಾಗಿರುವ ಈ ತರನ ಪರೀಕ್ಷೆಯಿಂದ ಗರ್ಭಕೋಶ, ಗರ್ಭಕಂಠ, ಜಠರ ಮುಂತಾದ ಅವಯವಗಳಲ್ಲಾಗಿರಬಹುದಾದ ಕ್ಯಾನ್ಸರ್‌ಗಳನ್ನು ಬಹಳಷ್ಟು ಮೊದಲೇ ಗುರುತಿಸಲು ಸಾಧ್ಯವಾಗುತ್ತಿದೆ.

ಸಾದಾ ಎಕ್ಸರೇ, ಪರೀಕ್ಷೆಗಳಿಂದ ಶ್ವಾಸಕೋಶ ಮತ್ತು ಎಲುಬುಗಳಲ್ಲಾದ ಕ್ಯಾನ್ಸರ್ ಪರಿವರ್ತನೆಗಳನ್ನು ಕಂಡು ಹಿಡಿಯಬಹುದು. ಎಕ್ಸರೇಗೆ ಅಪಾರದರ್ಶಕ (Radio opaque) ವಾದ ಮದ್ದುಗಳನ್ನು ಕುಡಿಸಿಯೋ, ಇಂಜೆಕ್ಷನ್ ಮೂಲಕ ನೀಡಿಯೋ ನಂತರ ತೆಗೆದ ಎಕ್ಸರೇ ಪಟಗಳಲ್ಲಿ ಕೆಲವು ಅಂಗಗಳಲ್ಲುಂಟಾಗಿರಬಹುದಾದ ಕ್ಯಾನ್ಸರ್ ಗೆಡ್ಡೆ ಅಥವಾ ವ್ರಣಗಳನ್ನು ನೋಡಬಹುದು.

ಬಾಯಿ, ಗಂಟಲು, ಶ್ವಾಸನಾಳ, ಗುದ ನಾಳಗಳ ಮುಖಾಂತರ ಅಂತರದರ್ಶಕ ದುರ್ಬೀನುಗಳನ್ನು ತೂರಿಸಿ, ಜಠರ, ಅನ್ನ ನಾಳ, ಶ್ವಾಸನಾಳ, ದೊಡ್ಡ ಕರುಳು ಮುಂತಾದ ಅವಯವಗಳಲ್ಲಾಗಿರುವ ಬದಲಾವಣೆಗಳನ್ನು ವೀಕ್ಷಿಸಬಹುದು. ಇತ್ತೀಚಿನ ಸಂಶೋಧನೆಗಳಿಂದ ಲಭ್ಯವಿರುವ ನಾರು ಗಾಜಿನ ಅಂತರ್‌ದರ್ಶಕ ದುರ್ಬೀನು ಈ ದಿಸೆಯಲ್ಲಿ ಅತ್ಯುತ್ತಮ ಸಾಧನವಾಗಿವೆ. ಅವುಗಳ ಮೂಲಕ ಗೆಡ್ಡೆ ವ್ರಣಗಳನ್ನು ನೇರವಾಗಿ ನೋಡಬಹುದಲ್ಲದೆ, ಮಾದರಿ ತುಣುಕುಗಳನ್ನು ಕತ್ತರಿಸಿ ತೆಗೆದು ಜೀವುಂಡಿಗೆ ಪರೀಕ್ಷೆಗೊಳಪಡಿಸಬಹುದು.

ಇತ್ತೀಚಿನ ವರ್ಷಗಳ ಸಂಶೋಧನೆಯಾದ ಶ್ರವಣಾತೀತ ಶಬ್ದ ತರಂಗಗಳನ್ನು (Ultra sound) ಯಂತ್ರದಿಂದ ದೇಹದ ಒಳ ಭಾಗದ ಅವಯವಗಳಿಗೆ ಶಬ್ದ ತರಂಗಗಳನ್ನು ಹಾಯಿಸಿ, ಪ್ರತಿಫಲಿತವಾಗುವ ಚಿತ್ರ – ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್, ಕ್ಯಾನ್ಸರ್ ಗೆಡ್ಡೆ ಮುಂತಾದ ವ್ಯತ್ಯಾಸಗಳನ್ನು ತೋರಿಸುತ್ತವೆ.

ಎಕ್ಸ್‌ರೇ ಕಿರಣ ತತ್ವಾಧಾರಿತ ಸಿ.ಟಿ. ಸ್ಕ್ಯಾನ್ ಮತ್ತು ಕಾಂತ ಅನುವಾದ ಪ್ರತಿಬಿಂಬನ ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್ ಯಂತ್ರಗಳು ಕ್ಯಾನ್ಸರ್ ಶೋಧನೆಯಲ್ಲಿ ಹೊಸದಾಗಿ ನಮ್ಮ ಬತ್ತಳಿಕೆಗೆ ಸೇರಿದವುಗಳಾಗಿವೆ. ಅವಯವಗಳಲ್ಲಾಗಿರುವ ವ್ಯತ್ಯಾಸಗಳ ಮೂರು ಆಯಾಮಗಳ (Three Dimension) ಚಿತ್ರಣವನ್ನು ನೀಡುತ್ತವೆ. ಇದರಿಂದ ದೇಹದ ಒಳಾಳದಲ್ಲಿ ಎಲ್ಲೋ ಹುದುಗಿಕೊಂಡಿರುವ ಅಸಹಜ ಬೆಳವಣಿಗೆಯನ್ನು ವಿವಿಧ ಹಾಲೆಗಳ ರೀತಿಯಲ್ಲಿ ಬಯಲಿಗೆಳೆಯುತ್ತವೆ.

ಚಿಕಿತ್ಸಾ ವಿಧಾನಗಳು :

ಕ್ಯಾನ್ಸರ್‌ನಂಥ ವ್ಯಾಧಿಯನ್ನು ಬುಡಮಟ್ಟ ಕಿತ್ತು ಹಾಕಬೇಕೆಂಬುದು ಅನಾದಿಯಿಂದಲೂ ಇರುವ ಅಭಿಪ್ರಾಯ. ಶಸ್ತ್ರ ಚಿಕಿತ್ಸೆಯಿಂದ ವ್ಯಾಪಕವಾಗಿ ಕ್ಯಾನ್ಸರ್ ಬೆಳವಣಿಗೆಯಾಗಿರುವ ಅವಯವ ಅಥವಾ ಗೆಡ್ಡೆಯನ್ನು ಕತ್ತರಿಸಿ ತೆಗೆಯುವ ಚಿಕಿತ್ಸಾ ವಿಧಾನಗಳು ಇತ್ತೀಚಿನ ದಿನಗಳವರೆಗೂ ಜಾರಿಯಲ್ಲಿದ್ದವು. ಪ್ರಸ್ತುತ ಈ ದಿಸೆಯಲ್ಲಿ ಉಂಟಾಗಿರುವ ತಿಳುವಳಿಕೆಗಳಿಂದ ವ್ಯಾಪಕ ಶಸ್ತ್ರಚಿಕಿತ್ಸಾ ಕ್ರಮಗಳು ಕಡಿಮೆಯಾಗುತ್ತಿವೆಯೆಂದೇ ಹೇಳಬಹುದು. ಇಂತಹ ಶಸ್ತ್ರ ಚಿಕಿತ್ಸೆಯ ಮೊದಲು ಮತ್ತು ನಂತರ ಒಳಾಳ ಎಕ್ಸರೇ ಚಿಕಿತ್ಸೆ (Deep X Ray) "ಕ್ಯಾನ್ಸರ್ ಮಾರಕ ಮದ್ದು" (Anti Cancer Drugs) ಗಳ ಬಳಕೆ ಒಳ್ಳೆಯ ಫಲಿತಾಂಶ ನೀಡುತ್ತವೆ. ವಿಕಿರಣತೆ ಬೀರುವ ಎಕ್ಸರೇಯೋ ಅಲ್ಲದೆ, ರೇಡಿಯಂಸೂಜಿ, ರೇಡಿಯೋ ಆಕ್ಟೀವ್, ಐಸೋಟೋಪ್‌ಗಳ ಬಳಕೆಯೂ ಈಗ ಜಾಲ್ತಿಯಲ್ಲಿವೆ. ಎರಡನೇ ಮಹಾಯುದ್ಧದಲ್ಲಿ ಬಳಕೆಯಾದ ನೈಟ್ರೋಜಿನ್ ಮಸ್ಟರ್ಡ್ ಎಂಬ ವಿಷಾನಿಲ ಮಾನವರ ಬಿಳಿ ರಕ್ತಕಣಗಳನ್ನು ನಾಶಗೊಳಿಸುತ್ತವೆಂದು ತಿಳಿದು ಬಂದಿತು. ಬಿಳಿ ರಕ್ತಕಣಗಳು ಅತಿ ಹೆಚ್ಚಾಗುವ ರಕ್ತದ ಕ್ಯಾನ್ಸರ್ ಆದವರಿಗೆ ಅದನ್ನು ಬಳಸಿದಾಗ ಉತ್ತಮ ಪರಿಣಾಮಗಳುಂಟಾದವು. ನಂತರದ ವರ್ಷಗಳಲ್ಲಿ ಅದಕ್ಕೂ ಹೆಚ್ಚು ದಕ್ಷತೆಯಿಂದ ಕಾರ್ಯ ನಿರ್ವಹಿಸುವ ಕ್ಯಾನ್ಸರ್ ಮಾರಕ ಮದ್ದುಗಳ ಉಗಮವಾಗಿವೆ. ಹಲವು ಬಗೆಯ ರಕ್ತದ ಕ್ಯಾನ್ಸರ್‌ಗಳನ್ನು ಇವುಗಳ ಪ್ರಯೋಗದಿಂದಲೇ ಸಂಪೂರ್ಣವಾಗಿ ಗುಣಪಡಿಸಲು

ಸಾಧ್ಯವಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಈಗ ಲಭ್ಯವಿರುವ ಶಸ್ತ್ರ ಚಿಕಿತ್ಸೆ, ವಿಕಿರಣ ಚಿಕಿತ್ಸೆ ಮತ್ತು ಕ್ಯಾನ್ಸರ್ ಮಾರಕ ಮದ್ದುಗಳನ್ನು ಕ್ರಮವರಿತು ಹಾಗೂ ನಿಯೋಜಿತ ರೀತಿಯಲ್ಲಿ ಬಳಸಿಕೊಂಡು ಹಿಂದೆಂದು ವಾಸಿ ಮಾಡಲಾಗದಂಥ ಕೆಲವು ಕ್ಯಾನ್ಸರ್‌ಗಳನ್ನು ಬಹಳ ಕಾಲ ಹಿಮ್ಮೆಟ್ಟಿಸಬಹುದು; ಹಾಗೂ ಕೆಲವನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಾಗುತ್ತಿದೆಯೆಂಬುದು ಸಂತಸದ ವಿಷಯ.

ಹಾರ್ಮೋನುಗಳಿಂದ ಪ್ರಚೋದಿತವಾಗುತ್ತದೆನ್ನಲಾದ ಸ್ತನ, ಥೈರಾಯಿಡ್, ಪ್ರೊಸ್ಟೇಟ್ ಮುಂತಾದ ಕ್ಯಾನ್ಸರ್‌ಗಳಿಗೆ ಅವುಗಳ ವಿರುದ್ಧ ಕಾರ್ಯವೆಸಗುವ ಇತರ ಹಾರ್ಮೋನು ಅಥವಾ ಮದ್ದುಗಳ ಬಳಕೆಯಿಂದ ಕೆಲವನ್ನು ಬಹಳ ಕಾಲ ಹಿಮ್ಮೆಟ್ಟಿಸಬಹುದು ಮತ್ತು ಹಲವನ್ನು ಸಂಪೂರ್ಣವಾಗಿ ಗುಣಪಡಿಸಲೂ ಸಾಧ್ಯವಾಗುತ್ತಿದೆ. ಸ್ತನದ ಕ್ಯಾನ್ಸರ್‌ನ ಚಿಕಿತ್ಸೆ ಮತ್ತು ನಿವಾರಣೆಗಾಗಿ ಈಗ ಬಳಸುತ್ತಿರುವ ಟಾಮಾಕ್ಸಿಫೆನನ್ನು ಇಲ್ಲಿ ಉದಾಹರಿಸಬಹುದು.

ಸಾಂಕ್ರಾಮಿಕ ರೋಗಗಳ ನಿವಾರಣೆಗೆ ಬಳಕೆಯಾಗುತ್ತಿರುವ ನಿರೋಧಕ ವ್ಯಾಕ್ಸೀನಿನ (Vaccination) ತತ್ವವನ್ನು ಕ್ಯಾನ್ಸರ್ ನಿರೋಧಕಕ್ಕೂ ಬಳಸುವ ಸಾಧ್ಯತೆಗಳ ಬಗೆಗೆ ಸಂಶೋಧನೆಗಳು ಜರುಗುತ್ತಿದ್ದು, ಕೆಲವೇ ವರ್ಷಗಳಲ್ಲಿ ಅದು ಸಾಧ್ಯವಾಗಬಹುದು. ಆಂಕೋಜೀನ್ಸ್‌ಗಳೆಂಬ ಕ್ಯಾನ್ಸರ್ ಉಂಟುಮಾಡಬಹುದಾದ ವಂಶವಾಹಿ ಜೀನ್‌ಗಳನ್ನು ಸಹಾ ಗುರುತಿಸಲಾಗಿದೆ. ಅವುಗಳನ್ನು ಬದಲಾಯಿಸುವ "ಜೀನ್‌ಥೆರಪಿ"ಯ ಕಾರ್ಯ, ಭರದಿಂದ ಸಾಗುತ್ತಿದ್ದು ಅದು ಸಹಾ ಕೆಲವೇ ವರ್ಷಗಳಲ್ಲಿ ನಮ್ಮ ಬತ್ತಳಿಕೆಯನ್ನು ಸೇರುವ ನಿರೀಕ್ಷೆ ಇದೆ.

ಮುನ್ನೋಟ

ಕ್ಯಾನ್ಸರ್ ದೈತ್ಯನ ವಿರುದ್ಧ ವಿವಿಧ ರಂಗಗಳಲ್ಲಿ ಇವೀಗ ಘೋರ ಸಮರ ನಡೆಯುತ್ತಿದೆ. ಅದನ್ನು ನಿರೋಧಿಸುವ, ಹತ್ತಿಕ್ಕುವ ಹಾಗೂ ನಿಯಂತ್ರಿಸುವ ದಿಸೆಯಲ್ಲಿ ಹೊಸ ಹೊಸ ಶಸ್ತ್ರಾಸ್ತ್ರಗಳ ಶೋಧನೆ ಬಿರುಸಿನಿಂದ ಜರುಗುತ್ತಿದೆ. ಅಮೇರಿಕಾದಂಥ ದೇಶದಲ್ಲಿ ಬಾಹ್ಯಾಕಾಶ ಸಂಶೋಧನೆಗಳಿಗೆ ಖರ್ಚು ಮಾಡುವ ಪ್ರಮಾಣದಲ್ಲೇ ಕ್ಯಾನ್ಸರ್ ಸಂಶೋಧನೆಗೂ ಹಣಕಾಸುಗಳನ್ನು ಖರ್ಚು ಮಾಡುತ್ತಿದ್ದಾರೆನ್ನಲಾಗಿದೆ.

ಬಹುಪಾಲು ಕ್ಯಾನ್ಸರ್‌ಗಳು ನಮ್ಮ ಆಹಾರ, ವಿಹಾರ, ಪರಿಸರ, ಉದ್ಯೋಗಗಳಿಂದ ರೂಪಿಸಿಕೊಂಡ ಜೀವನ ಶೈಲಿಯ ಪ್ರತಿಬಿಂಬವೆಂಬಂತೆ ನಮ್ಮನ್ನು ಹಿಂಬಾಲಿಸುತ್ತಿವೆ. ಬರೀ ವೈದ್ಯರು, ವಿಜ್ಞಾನಿಗಳು ಅಥವಾ ಸರ್ಕಾರಗಳು ಮಾತ್ರ ಅದರ ವಿರುದ್ಧ ಕಾರ್ಯಕ್ರಮಗಳನ್ನು ಜರುಗಿಸುವುದರಿಂದ ಯಶಸ್ಸು ದೊರೆಯಲಾರದು. ಇಡೀ ಜನಸಮುದಾಯವೇ ತಮ್ಮ ಜೀವನ ಶೈಲಿಯನ್ನು ಸುಧಾರಿಸಿಕೊಂಡು ಪರಿಶುದ್ಧ ಪರಿಸರದಲ್ಲಿ ಜೀವನ ನಡೆಸುವಂತಾಗಬೇಕು. ಹಾಗೆ ವರ್ತಿಸಿದಲ್ಲಿ ಕ್ಯಾನ್ಸರ್, ಈಗ ನಶಿಸುತ್ತಿರುವ ಹಲವು ಕಾಯಿಲೆಗಳಂತೆ ಮುಂದಿನ ಕೆಲವೇ ವರ್ಷಗಳಲ್ಲಿ ಹತೋಟಿಗೆ ಬರುತ್ತದೆಂಬ ಆಶಾಭಾವನೆಯನ್ನು ತಾಳಬಹುದು.

ಜ್ವರದ ಬಗ್ಗೆ ತಿಳಿದಿರಿ

ಎಸ್. ರಘು

ಬೆಳಗಿನಜಾವದ ವೇಳೆಯಲ್ಲಿ ದೂರವಾಣಿ ಕರೆಯೊಂದು ಅಮೆರಿಕದ ಶಿಶುವೈದ್ಯಶಾಸ್ತ್ರ ಉಪಚಾರಗಳ ತಜ್ಞೆ ಡಾ|| ಸೂಸನ್ ಕಾರಿಗನ್ನಳನ್ನೆಚ್ಚರಿಸಿತು. ಒಬ್ಬಾಕೆ 'ತನ್ನ ಮಗುವಿಗೆ ತೀವ್ರತಾಪದ ಜ್ವರ ಬಂದಿರುವುದಾಗಿಯೂ, ಏನುಮಾಡಲೂ ತೋಚುತ್ತಿಲ್ಲ'ವೆಂದೂ ತನ್ನ ಚಡಪಡಿಕೆಯನ್ನು ತೋಡಿಕೊಂಡಳು. ವೈದ್ಯೆ, ತಕ್ಷಣವೇ ಮಗುವಿನ ವಯಸ್ಸು, ಜ್ವರದ ತಾಪಮಾನ ಇತರ ಲಕ್ಷಣಗಳ ಬಗ್ಗೆ ವಿವರಪಡೆದಳು. ಇದರಿಂದ ಆಕೆ ಗ್ರಹಿಸಿದ್ದಿಷ್ಟು! ೧೦೦° ಫ್ಯಾರನ್‌ಹೀಟ್ ಜ್ವರ ತಾಪವಿದ್ದ ೧೫ ತಿಂಗಳ ಕೂಸು ಶಾಂತನಿದ್ರೆಯ ತೆಕ್ಕೆಯಲ್ಲಿತ್ತು.

ತಾಯಿ ಮಗುವನ್ನೆಚ್ಚರಿಸಿ ಔಷಧಿ ನೀಡದಿದ್ದಲ್ಲಿ ತಾಪ ಹೆಚ್ಚೀತೆಂಬ ಚಿಂತೆಗೆ ಈಡಾಗಿದ್ದಳು, ವೈದ್ಯೆ. ಜ್ವರವು ಲಘು ಸ್ವರೂಪದ್ದೆಂದೂ, ಅದು ಕೇವಲ ಹೊರಗಿನಿಂದ ದೇಹವನ್ನು ಸೇರಲು ಪ್ರಯತ್ನಿಸಿದ ಯಾವುದಾದರೂ ಆಕ್ರಮಣಕಾರಿ ನಂಜಿನ ವಿರುದ್ಧ ದೇಹದ ಸಹಜ ಪ್ರತಿರೋಧ ರೂಪವೆಂದೂ ತಿಳಿಯ ಹೇಳಿದರು. ಅನ್ಯ ಲಕ್ಷಣಗಳೇನೂ ಕಂಡು ಬರದಿದ್ದಲ್ಲಿ ಮಗುವನ್ನು ಅದರ ಪಾಡಿಗೆ ನಿದ್ರಿಸಲು ಬಿಡುವಂತೆಯೂ ಸೂಚಿಸಿದರು.

ಅನೇಕರಂತೆ ಈ ತಾಯಿಯೂ ಜ್ವರವಿದ್ದಲ್ಲಿ ತೀವ್ರ ಸ್ವರೂಪದ ಅನಾರೋಗ್ಯವೆಂದು ಭಾವಿಸಿದಳು. ರೋಗಿಗಳು ಜ್ವರವನ್ನೇ ಖಾಯಿಲೆ ಎಂದು ಭಾವಿಸಬಾರದು, ಅದು ದೇಹವು ಬಾಹ್ಯಸೋಂಕುಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಶೀಘ್ರ ಕಾರ್ಯತತ್ಪರತೆಯಲ್ಲಿ ತೊಡಗುವ ವಿಧಾನವಷ್ಟೇ ಎಂದು ಡಾ|| ಕಾರಿಗನ್ ಹೇಳುತ್ತಾರೆ.

ಜ್ವರ ತಾಪದ ಏರಿಕೆ ಸಾಮಾನ್ಯ ಪ್ರತಿಕ್ರಿಯೆಯಾಗಿದ್ದರೂ, ಅದರ ಬಗ್ಗೆ ಅಸಮರ್ಥನೀಯ ಭಯ ವ್ಯಕ್ತಪಡಿಸುವುದನ್ನು 'ಜ್ವರದ ಹೆದರಿಕೆ' ಎಂದು ಹೆಸರಿಸುತ್ತಾರೆ ಶಿಶುವೈದ್ಯ ಶಾಸ್ತ್ರದ ಡಾ|| ಬಾರ್ಟನ್ ಷ್ಮಿಟ್ಟರು. ಅವರ ಪ್ರಕಾರ ನಿರಪಾಯಕಾರಿ ಜ್ವರವನ್ನು ಆಸ್ಪಿರಿನ್/ಪ್ಯಾರಾಸಿಟಮಾಲ್ ಬಳಕೆಯಿಂದ, ಗುಣಹೊಂದುವುದನ್ನು ನಿಧಾನಿಸಲೂಬಹುದು ಎಂಬ ಅಂಶ ತಿಳಿದಿರುವವರು ವಿರಳ.

೧೯೯೫ರ ಫೆಬ್ರುವರಿ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಕೆರೋಲ್ ಕಪ್ರಿಕೋಫ್ ಅವರ "ವೆನ್ ಟು ವರಿ ಅಬೌಟ್ ಎ ಫೀವರ್" ಎಂಬ ಲೇಖನದ ಅನುವಾದ.

ಜ್ವರದ ಬಗೆಗೆ ಆರು ವಿಸ್ಮಯಕಾರಿ ವಾಸ್ತವಾಂಶಗಳ ತಿಳುವಳಿಕೆಯಿಂದ ನೀವು, ನಿಮ್ಮನ್ನು. ನಿಮ್ಮ ಸಂಸಾರವನ್ನು ರಕ್ಷಿಸಿ ಕೊಳ್ಳಬಲ್ಲಿರಿ.

೧) ೯೮.೬° ಫ್ಯಾರನ್‌ಹೀಟ್ ದೇಹದ ಸಾಮಾನ್ಯ ತಾಪಮಾನವೆಂಬುದು ಈಗ್ಗೆ ಸರಿಯಲ್ಲವೆಂದು ಮೇರಿಲ್ಯಾಂಡ್ ವಿಶ್ವ ವಿದ್ಯಾನಿಲಯದ ಡಾ|| ಫಿಲಿಪ್ ವ್ಯಾಕೊ ವಿಯಾಕ್ ಹೇಳುತ್ತಾ, ತಾಪವು ಒಂದು ವ್ಯಾಪ್ತಿಯಲ್ಲಿದ್ದು, ನಿರ್ದಿಷ್ಟ ಸಂಖ್ಯೆ ಯಾಗಿರುವುದಿಲ್ಲ ಹಾಗೂ ಅದು ವ್ಯಕ್ತಿ ಯಿಂದ ವ್ಯಕ್ತಿಗೆ ಹೆಚ್ಚು ಕಡಿಮೆ ಇರುತ್ತ ದೆಂದೂ ತಿಳಿಸಿದ್ದಾರೆ.

ದೇಹದ, ಸಹಜ, ದೈನಂದಿನ, ಸಕ್ರಮ, ಚಟುವಟಿಕೆಗಳು ದೇಹದ ತಾಪವನ್ನು ಒಂದು ಡಿಗ್ರಿ ಮಾನದಷ್ಟು ವ್ಯತ್ಯಸ್ತವಾಗಿಸುತ್ತವೆ. ಆದರೆ ಕೆಲವರಲ್ಲಿ ಈ ವ್ಯಾಪ್ತಿಯು ೦.೧ರಿಂದ ೨.೪ ಡಿಗ್ರಿವರೆಗೂ ಹೊಯ್ದಾಡುತ್ತವೆ. ಮಕ್ಕಳು ದೊಡ್ಡವರಿಗಿಂತ ಏರುಗತಿಯ ತಾಪಮಾನ ಜ್ವರದಿಂದ ಬಳಲಲು ಬಾಹ್ಯ ಸೋಂಕೇ ಕಾರಣ. ವಯಸ್ಸಾದವರು ವಯಸ್ಕರಿಗಿಂತ ಕಡಿಮೆ ದೇಹ ತಾಪವನ್ನು ಹೊಂದಿರುತ್ತಾರೆ.

ಸಾಮಾನ್ಯ ಕ್ರಿಯೆಗಳೂ ದೇಹದ ತಾಪ ವನ್ನು ಹೆಚ್ಚಿಸಬಲ್ಲವು, ಉದಾಹರಣೆಗೆ— ಹಬ್ಬದೂಟದ ಜೀರ್ಣಕ್ರಿಯೆ, ಸೂರ್ಯನಿಗೆ ಮೈ ಒಡ್ಡುವುದು. ವ್ಯಾಯಾಮ, ವಿಪರೀತ ಅಳುತ್ತಲೇ ಇರುವ ಮಗು. ದೇಹದ ತಾಪಮಾನ ಸಾಮಾನ್ಯವಾಗಿ ೧೦೬.೫° ಫ್ಯಾರನ್‌ಹೀಟ್‌ಗಿಂತ ಹೆಚ್ಚಿರದು, ಇದಕ್ಕೆ ಅಪವಾದವೆಂದರೆ—ದೇಹ ತಾಪವನ್ನು ರಕ್ಷಿಸುವ ಮಿದುಳಿನ ಭಾಗ (ಹೈಪೋಥ್ಯಾಲ ಮಸ್)ದ ಕಾರ್ಯವನ್ನು ಅಡಚಣೆಗೊಳಿ ಸುವ ಬಾವು ಅಥವಾ ಗ್ರಂಥಿಯಾಗಿದ್ದಾಗ ಮತ್ತು ಸಾಮಾನ್ಯವಾಗಿ ಬಿಸಿಲಿನ (ಅಲೆ) ತಾಪದಿಂದ ರಕ್ಷಿಸಿಕೊಳ್ಳದಿದ್ದಲ್ಲಿ ಅಂಗಾಂಗ ಗಳು ಊನವಾಗಬಹುದು. ತೀವ್ರ ಬಿಸಿಲಿನ ತಾಪದಿಂದ ಸಾವೂ ಸಂಭವಿಸಬಹುದು.

೨) ಕಡಿಮೆ ತಾಪದ ಜ್ವರಕ್ಕೆ ಔಷಧಿ ಸೇವಿಸಿದಲ್ಲಿ, ಅನಾರೋಗ್ಯ ಮತ್ತಷ್ಟು ಮುಂದುವರಿಯುವುದು ಜ್ವರದ ಕಾರ್ಯ ವೈಖರಿ ಹೀಗೆ: ಬಿಳಿ ರಕ್ತಕಣಗಳು ಆಕ್ರಮಣಕಾರಿ ಪರ(ವಸ್ತುವಿನ) ಕಣ ಗಳನ್ನು ಗುರುತಿಸಿದಾಗ, ಅವು ಬಿಡುಗಡೆ ಮಾಡುವ ಪ್ರೊಟೀನ್ ಅಂಶವು ಹೈಪೋ ಥ್ಯಾಲಮಸ್‌ನ್ನು ತಲುಪಿ ಕ್ಷಿಪ್ರವಾಗಿ ದೇಹದ ಏಕಮಾನ ತಾಪವನ್ನು ಏರಿಸುವಂತೆ ಕಾರ್ಯನಿರ್ವಹಿಸುತ್ತದೆ. ಹೀಗೆ ದೇಹ ಶಾಖ ವನ್ನು ಉತ್ಪಾದಿಸುವ ಪ್ರತಿಕ್ರಿಯೆ ತೋರು ವುದರಿಂದ ನಮಗೆ 'ಛಳಿ'ಯ ಅನುಭವ ಆಗುತ್ತದೆ. ಅನೇಕ ದೇಹ ಸ್ವರಕ್ಷಣಾಕ್ರಿಯೆ ಗಳು ಹೆಚ್ಚಿನ ತಾಪಮಾನದಲ್ಲಿ ಸಫಲ ಪರಿಣಾಮ ನೀಡುತ್ತವೆ. ಎಂದು ಶಿಶು ವೈದ್ಯೋಪಚಾರ ತಜ್ಞ, ಜಾನ್ ಹಾಪ್‌ಕಿನ್ಸ್ ವಿಶ್ವವಿದ್ಯಾನಿಲಯದ ಡಾ|| ಟಿಮೊತಿದೊರಾನ್ ಹೇಳುತ್ತಾರೆ. ಅವರ ಪ್ರಕಾರ ಕೆಲವು ಕೀಟಾಣುಗಳು, ಸೋಂಕು ಉಂಟಾಗುವಿಕೆಯ ಕ್ರಿಯೆಯು ಏರು ತಾಪಮಾನದಲ್ಲಿ ಹೆಚ್ಚು ಬೆಳವಣಿಗೆ ಯಾಗವುದಿಲ್ಲ.

ಇತ್ತೀಚೆಗೆ ಪ್ರಾಣಿಗಳನ್ನು ಕೀಟಾಣು ಗಳ (ಬ್ಯಾಕ್ಟೀರಿಯ) ಆಕ್ರಮಣಕ್ಕೊಳ ಪಡಿಸಿ ಜ್ವರಬರದಂತೆ ಎಚ್ಚರವಹಿಸಿದಾಗ, ಹಲವು, ಸೋಂಕಿನಿಂದ ಸಾವಿಗೀಡಾಗಿ, ಅವು

ಗಳಿಗೆ ಜ್ವರ ಬಂದಿದ್ದಲ್ಲಿ ಸೋಂಕಿನಿಂದ ರಕ್ಷಣೆ ಒದಗುತ್ತಿತ್ತೆಂದು ಕಂಡುಕೊಳ್ಳಲಾಗಿದೆ. ದಡಾರ ಪೀಡಿತ ಮಕ್ಕಳನ್ನು ವೀಕ್ಷಿಸಿದ ಡಾ|| ಡೊರಾನ್ ಕಂಡುಕೊಂಡ ಅಂಶ ವೆಂದರೆ, ಜ್ವರದ ಉಪಚಾರಕ್ಕೆ ಔಷಧಿ ಸೇವಿಸದ ಮಕ್ಕಳು, ಔಷಧಿ ಸೇವಿಸಿದ ಮಕ್ಕಳಿಗಿಂತಲೂ ಅರ್ಧ ದಿನ ಮೊದಲೇ ಗುಣ ಮುಖರಾಗುವರೆಂಬುದು, ಸಾಕಷ್ಟು ಜನರು, ಅಸುಖ ಉಂಟು ಮಾಡದ ಜ್ವರ ವನ್ನು ಔಷಧೋಪಚಾರ ವಿಲ್ಲದೇ ಯಾವ ತೊಂದರೆಯನ್ನು ಅನುಭವಿಸುವುದಿಲ್ಲ ವಾದರೂ, ಹೃದ್ರೋಗಿಗಳು, ಮಧುಮೇಹಿ ಗಳು, ಸಂಧಿವಾತದಿಂದ ನರಳುತ್ತಿರುವವರು, ವೈದ್ಯ ಸಲಹೆ ಪಡೆಯುವುದು ಸೂಕ್ತ.

ಜ್ವರೋಪಚಾರದ ಅಪಾಯ ಅಥವಾ ಒಳಿತು, ಇವುಗಳ ಸಮತೋಲನ ರೋಗಿಯ ಹಿತದೃಷ್ಟಿಯನ್ನವಲಂಬಿಸಿರು ತ್ತದೆ. ಮಾಹಿತಿಗಳ ಪ್ರಕಾರ ಜ್ವರ ಒಳಿತು ಮಾಡಿದರೂ, ಸಾಕಷ್ಟು ಅಸ್ವಸ್ಥತೆ, ಅಸೌಖ್ಯವನ್ನು (ಆದರಲ್ಲೂ ತಾಪಮಾನ ೧೦೧.೫° ಫ್ಯಾರನ್‌ಹೀಟ್ ಇದ್ದಾಗ) ಉಂಟುಮಾಡುತ್ತದೆಂದು ಬೋಸ್ಟನ್ ವಿಶ್ವವಿದ್ಯಾನಿಲಯದ ಡಾ|| ಅರೆನ್ ಮಿಚೆಲ್ ಸೂಚಿಸಿದ್ದಾರೆ. ಜ್ವರವು ನಿಮ್ಮಲ್ಲಿ ನೋವು ಅಸುಖವನ್ನು ಉಂಟು ಮಾಡಿದಲ್ಲಿ ವೈದ್ಯರು ಆಸ್ಪಿರಿನ್ / ಪ್ಯಾರಸಿಟಮಾಲ್ /ಇಬು ಫ್ರೋಫೇನ್ ಮಾತ್ರೆಗಳನ್ನು ಸೇವಿಸಲು ಸೂಚಿಸಬಹುದು. ಆದರೆ ಡಾ|| ಮಿಚೆಲ್‌ರು ಮಕ್ಕಳು/ತರುಣದಲ್ಲಿರುವವರು ಹೆಚ್ಚು ಆಸ್ಪಿರಿನ್ ಸೇವಿಸಿದಲ್ಲಿ ಮಾರಕವಾದ ಹಲ ವಾರು ಲಕ್ಷಣಗಳುಳ್ಳ 'ರೇಯಿಸಿಂಡ್ರೋಂ' ಉಂಟಾಗಬಹುದೆಂದು ಎಚ್ಚರಿಸುತ್ತಾರೆ.

೩) ಜ್ವರವು ಅಂತಹ ತೀಕ್ಷ್ಣ ಖಾಯಿಲೆ ಎನಿಸಲೇಬೇಕೆಂದಿಲ್ಲ. ೧೦೪° ಜ್ವರ ತಾಪ ವಿದ್ದು ಆಡಿಕೊಂಡಿರುವ ಮಗುವಿಗಿಂತ, ೧೦೧° ತಾಪದ ಪ್ರತಿಕ್ರಿಯೆ ತೋರದೇ ಇರುವ ಮಗುವಿನದೇ ಚಿಂತೆ ನನಗೆ ಎನ್ನು ತ್ತಾರೆ ಶಿಶುವೈದ್ಯ ಡಾ|| ಡೇನಿಯಲ್ ಹೈಮನ್. ರೋಗಿಯ ಮೇಲ್ನೋಟ, ಕ್ರಿಯೆಗಳ ಮೇಲೆ ಉಷ್ಣಮಾಪಕದ ರೇಖೆಯ ಮೇಲಿಗಿಂತ ಹೆಚ್ಚಾಗಿ ಪರಿಶೀಲಿ ಸಲು ಅವರು ತಿಳಿಸುತ್ತಾರೆ.

ವಿಶೇಷವಾಗಿ ಇದು ಆಗತಾನೇ ಜನಿಸಿದ ಶಿಶುಗಳಲ್ಲಿ, ವೃದ್ಧರಲ್ಲಿ ಮುಖ್ಯ. ಏಕೆಂದರೆ ಅವರಲ್ಲಿ ಸ್ವಯಂರಕ್ಷಣಾ ವಿಧಾನಗಳು ಪೂರ್ತಿಯಾಗಿ ಕಾರ್ಯಾಚರಣೆಯಲ್ಲಿ ತೊಡಗಿರಲಾರವು ಹಾಗೂ ಅಸೌಖ್ಯ ವಿದ್ದರೂ ಅವರಲ್ಲಿ ಜ್ವರ ಹೆಚ್ಚಾಗಿ ಕಂಡು ಬರುವುದಿಲ್ಲ. ಅದೃಷ್ಟವಶಾತ್ ಪ್ರಕೃತಿ, ಸೋಂಕು ಪೀಡಿತರನ್ನು ಗುರುತಿಸಲು ಸಹಾಯ ಮಾಡುತ್ತದೆ. ಉದಾಹರಣೆಗೆ, ಅಸೌಖ್ಯ ಮಗುವು ನೆಟ್ಟದೃಷ್ಟಿ ಹಾಯಿಸು ತ್ತಿರುತ್ತದೆ, ಚರ್ಮ ಬೂದುಬಣ್ಣ ವಾಗಿರಲೂಬಹುದು, ಕಾಲು ತಣ್ಣಗಿರು ವುದು, ನಿಶ್ಯಕ್ತ ವಯಸ್ಕರಲ್ಲಿ ಆಲಸ್ಯ, ಮನೋಬದಲಾವಣೆಗಳನ್ನು ಗುರುತಿಸ ಬಹುದು.

೪) ತೀವ್ರಜ್ವರಗಳು ಅಪರೂಪಕ್ಕೆ ಮಾರಕವಾಗಿರುತ್ತದೆ ಅಥವಾ ಮಿದುಳಿಗೆ ಹಾನಿ ಉಂಟುಮಾಡುತ್ತವೆ. ೧೦೬.೫° ಗಿಂತ ಜ್ವರ ಹೆಚ್ಚಾದಲ್ಲಿ ಮಾತ್ರ ಮಿದುಳಿಗೆ ಹಾನಿ ಒದಗಬಹುದು. ಡಾ|| ಶ್ಮಿಟ್ ಅವರ ಪ್ರಕಾರ ತಂದೆ ತಾಯಿಗಳು, ಮಕ್ಕಳ ತಾಪ ೧೦೪° ಸನಿಹದಲ್ಲಿ ನರದೌರ್ಬಲ್ಯ ಅಥವಾ

ಮಿದುಳಿಗೆ ಹಾನಿ ಉಂಟಾಗಬಹುದೆಂದು ಭಾವಿಸುತ್ತಾರೆ. ಸ್ವಲ್ಪ ವೈಬಿಚ್ಚಗಿದ್ದರೂ ಅರ್ಧಕ್ಕಿಂತ ಹೆಚ್ಚು ಪಾಲು ತಾಯಿತಂದೆಗಳು ಜ್ವರ ಕಡಿಮೆ ಆಗಲು ಔಷಧಿ ನೀಡುತ್ತಾರೆ. ಇದು ಸಾಮಾನ್ಯ ತಾಪವಾಗಿರಲೂ ಸಾಕು. ಸರಿಯಾದ ಅಳತೆಯ ಔಷಧಿ ಸಹ ೨ ರಿಂದ ೩ ಡಿಗ್ರಿ ತಾಪಮಾನ ಇಳಿಸಬಹುದೇ ವಿನಃ, ಶೀರಾ ೯೮.೬°ಗೆ ಬಾರದಿದ್ದರೆ ಗಾಬರಿಯಾಗುವುದು ಕಂಡುಬರುತ್ತದೆ.

ಜ್ವರದ ಬಗೆಗಿನ ಹೆದರಿಕೆ (Phobia) ನಿವಾರಿಸಲು ವೈದ್ಯರು, ದಾದಿಯರು ತಂದೆತಾಯಿಗಳಿಗೆ ತಿಳಿಸಬೇಕಾದದ್ದು ಮಗುವಿನ ಉಪಚಾರ ಅದರ ಸೌಖ್ಯಕ್ಕಷ್ಟೇ.

೫) ನಿಮಗೆ ಅಸೌಖ್ಯವಿದ್ದಲ್ಲಿ, ಪದೇ ಪದೇ ತಾಪಮಾನ ಪರೀಕ್ಷಿಸಿಕೊಳ್ಳುವ ಅಗತ್ಯವಿರುವುದಿಲ್ಲ. ವೈದ್ಯರಿಗೆ ತಾಪಮಾನದ ಮಾನವು ರೋಗ ಪರೀಕ್ಷೆಯ ವಿಧಾನವಾಗಿ, ಸಲಹೆಯ ಅಗತ್ಯವನ್ನು ನಿರ್ಧರಿಸುತ್ತದೆ. ಅಸೌಖ್ಯದಿಂದ ಜ್ವರ ಇದೆ ಎನಿಸಿದರೆ ಒಂದೆರಡು ಘಂಟೆಗಳು ತಡೆದು ತಾಪಮಾನ ನೋಡಿಕೊಳ್ಳಿರಿ. ಗುದದ್ವಾರದ ತಾಪಮಾನವು ನಿಖರವಾಗಿದ್ದು, ಚಿಕ್ಕ ಮಕ್ಕಳಲ್ಲಿ ಉಪಯುಕ್ತವಾಗಿರುತ್ತದೆ. ವಯಸ್ಕರಲ್ಲಿ ಬಾಯಿಯ ತಾಪಮಾನವು ಆಯಲ್ಪಡುತ್ತದೆ. ತಜ್ಞ ಡಾ|| ಬಾಯ್ಡ್ ಶರ್ಕರ ಸೂಚನೆಯಂತೆ ನಿದ್ರಿಸುತ್ತಿರುವ ರೋಗಿಯನ್ನು ವೈದ್ಯರ ಅಣತಿವಿನಃ, ತಾಪಮಾನ ಪಡೆಯಲು ಎಬ್ಬಿಸಬೇಡಿ ಅಸೌಖ್ಯದಿಂದಿರುವವರಿಗೆ ನಿದ್ರೆ ಅಮೂಲ್ಯವಾಗಿರತ್ತದೆ.

೬) ಜ್ವರವಿದ್ದಲ್ಲಿ ಮಲಗಿರಲೇಬೇಕೆಂಬ ನಿಯಮವಿರುವುದಿಲ್ಲ. ಹೀಗೆ ಮಾಡುವುದರಿಂದ ಸಮಸ್ಯೆಗೆ ಹೆಚ್ಚು ಒತ್ತುಕೊಟ್ಟಂತಾಗುತ್ತದೆ. ದಣಿವಾಗದಂತೆ ವಿಶ್ರಾಂತಿ ಪಡೆಯಬಹುದು. ಮಕ್ಕಳನ್ನು ಮಲಗೇ ಇರಲು ಹೇಳುವುದಕ್ಕಿಂತ, ವಿಶ್ರಾಂತಿ ಪಡೆಯಲು ಹೇಳಿರಿ.

ಜ್ವರ ಕಂಡುಬಂದಾಗ, ವೈದ್ಯರ ಪ್ರಕಾರ ಹೀಗೆ ಮಾಡಿರಿ :

೩ ತಿಂಗಳೊಳಗಿನ ಮಗುವಿಗೆ ೧೦೦.೨° ಜ್ವರ ಅಥವಾ ಹೆಚ್ಚಾಗಿದ್ದರೆ, ೩–೬ ತಿಂಗಳ ಮಗುವಿಗೆ ೧೦೦° ಗಿಂತ ಹೆಚ್ಚಿದ್ದಲ್ಲಿ, ೬ ತಿಂಗಳಿಗಿಂತ ಹೆಚ್ಚಿನ ಮಗುವಿಗೆ ೧೦೩° ಗಿಂತ ಹೆಚ್ಚಿದ್ದರೆ ವೈದ್ಯರನ್ನು ಸಂಪರ್ಕಿಸಿ ವಯಸ್ಕರಲ್ಲಿ ೧೦೩°ಗಿಂತ ಅಧಿಕವಾಗಿದ್ದಲ್ಲಿ, ಇಲ್ಲವೇ ೩ ದಿನಗಳಿಗೂ ಮಿಕ್ಕಿ ೧೦೧° ಜ್ವರವಿದ್ದಲ್ಲಿ, ಬೇರೆ ಯಾವುದೇ ಲಕ್ಷಣಗಳು ಇಲ್ಲದಿದ್ದಲ್ಲೂ ವೈದ್ಯರನ್ನು ಕಾಣಬೇಕು.

ಜ್ವರದೊಟ್ಟಿಗೆ, ತೀವ್ರ ತಲೆನೋವು, ಗಂಟಲುನೋವು, ಕುತ್ತಿಗೆಯ ಜಡತ್ವ, ಕೆಮ್ಮು, ನೋವು, ದದ್ದು, ವಾಂತಿ, ಕಫ ಅಥವಾ ರಕ್ತಯುಕ್ತಕೆಮ್ಮು, ಅಮಶಂಕೆ, ಮಲದಲ್ಲಿ ರಕ್ತ ಹೋಗುವಿಕೆ, ವಿಪರೀತ ನಿದ್ರೆ ಕಾಣಿಸಿಕೊಂಡಲ್ಲಿ ವೈದ್ಯರನ್ನು ಸಂಪರ್ಕಿಸಬೇಕು. ಸೋಂಕಿನ ಗಾಯಗಳನ್ನು ಚೆನ್ನಾಗಿ ಪರೀಕ್ಷಿಸಿಕೊಳ್ಳಿರಿ ಹಾಗೂ ಸೋಂಕಿರುವಾಗ ಜ್ವರ ೧೦೨° ಕ್ಕಿಂತ ಹೆಚ್ಚಿದ್ದರೆ ವೈದ್ಯರನ್ನು ಕಾಣಿರಿ.


ವಯಸ್ಸಾದವರು ಹೆಚ್ಚಾಗಿ ದ್ರವ ಪದಾರ್ಥಗಳನ್ನು ಸೇವಿಸುವುದು ಅವಶ್ಯ. ೨ ಘಂಟೆಗಳಿಗೊಮ್ಮೆ ಸ್ವಚ್ಛವಾಗಿ ಮೂತ್ರವಾಗುವಂತೆ ಪದೇಪದೇ ದ್ರವ ಪದಾರ್ಥಗಳನ್ನು ಉಪಯೋಗಿಸಿ ಹೃದ್ರೋಗಗಳು

ಹಾಗೂ ಮೂತ್ರಪಿಂಡದ ಕಾಯಿಲೆ ಇರುವವರು ವೈದ್ಯರ ಸೂಚನೆಯನ್ನು ಅನುಸರಿಸಬೇಕು.

ಹೆಚ್ಚು ಊಟ ಮಾಡದೇ ಇರುವುದು, ವಾಂತಿ ಅಥವಾ ಭೇದಿ ಇದ್ದಲ್ಲಿ ಹಾಲು, ಜಿಡ್ಡು ಸೇವಿಸದೆ ಅನ್ನ ಅಥವ ಬ್ರೆಡ್ ಸೇವಿಸುವುದು ಉಚಿತ.

೧೦೪° ಯಷ್ಟು ಜ್ವರವಿರುವ ಮಕ್ಕಳಿಗೆ, ನೀರಿನಲ್ಲಿ ಅದ್ದಿದ ಬಟ್ಟೆಯಿಂದ ಮೈತೊಳೆಯುವುದರಿಂದ ಸ್ವಲ್ಪ ಸುಖವೆನಿಸುತ್ತದೆ. ಪ್ಯಾರಾಸೆಟ್‌ಮಾಲ್ ಮಾತ್ರೆ ಕೊಟ್ಟಿದ್ದಲ್ಲಿ ಒಂದು ಗಂಟೆ ತಡೆದು ಮೈತೊಳೆಯುವುದರಿಂದ ಛಳಿಯಾಗುವುದನ್ನು ತಡೆಯಬಹುದು. ಬೆಚ್ಚಗಿನ ನೀರು ಉಪಯೋಗಿಸಬೇಕು. ಮದ್ಯಸಾರದಿಂದ ಮಕ್ಕಳ ಮೈ ಉಜ್ಜಬಾರದು-ಕಾರಣ ಅವರ ಚರ್ಮವು ವಿಷಾಣುಗಳನ್ನು ಹೀರಿಕೊಳ್ಳುವ ಸಾಧ್ಯತೆ ಇರುತ್ತದೆ.

ಜ್ವರವೆಂದಾಕ್ಷಣ ಗಾಬರಿ ಆಗಬೇಡಿರಿ. ಜ್ವರವು ಸೋಂಕಿಗೆ ಪ್ರತಿಯಾಗಿ ಆಗುವ ಕ್ರಿಯೆಯಷ್ಟೇ ಅದರಿಂದಾಗಿಯೇ ಹೆಚ್ಚು ತೊಂದರೆಗಳಾಗದು. ಶಿಶುವೈದ್ಯ ಸೂರ್ಸ ಗಾರಿಗಸ್ ಹೇಳುವಂತೆ "ಅನೇಕ ರೀತಿಗಳಲ್ಲಿ ಜ್ವರವು ಮಿತ್ರನಷ್ಟೇ ಶತ್ರುವಲ್ಲ."



ದುಃಖಾನುಭವವುಳ್ಳವರು ದೇವರಿಗೆ ಸಮಾನರು. ಕಷ್ಟದಿಂದ ನರಳುವವರು ದೇವರಿಗೆ ಸಮಾನ. ಅದು ಮುಂದೆ ಸ್ವರ್ಗ ಸುಖವನ್ನನುಭವಿಸಲು ಅವರು ಮಾಡುತ್ತಿರುವ ಪುಣ್ಯ.

—ಕೈಲಾಸಂ

ಜ್ಞಾನಿಗಳ ಬೈಗುಳನ್ನು ಬೇಕಾದಷ್ಟು ಕೇಳಬಹುದು. ಮೂರ್ಖರ ಸಂಗೀತ ಮಾತ್ರ ನನ್ನ ಕಿವಿಗೆ ಅಡಚದಿರಲಿ.

—ಗಟ್ಕಾಲ್ಡ

ಜೀವಸತ್ವಗಳು

ಡಾ|| ಎನ್. ಚಂದ್ರಶೇಖರ

‘ಊಟ ಬಲ್ಲವನಿಗೆ ರೋಗವಿಲ್ಲ’ ಎಂಬ ಮಾತುಗಳು ನಮ್ಮ ಆರೋಗ್ಯ ರಕ್ಷಣೆಯಲ್ಲಿ ಆಹಾರದ ಮುಖ್ಯ ಪಾತ್ರವನ್ನು ತಿಳಿಸುತ್ತವೆ. ನಾವು ಪ್ರತಿ ನಿತ್ಯ ಸೇವಿಸುವ ತಿಂಡಿ ತಿನಿಸುಗಳು, ಊಟ, ಪಾನೀಯಗಳು ಇವೆಲ್ಲವುಗಳಿಂದ ನಮಗೆ ಅಗತ್ಯವಾದ ಪೋಷಕಗಳೂ ‘ಶಕ್ತಿ’ಯೂ ದೊರಕುವಂತಿದ್ದರೆ ಅಂಥ ಆಹಾರ ಪುಷ್ಟಿಕರವೆನಿಸಿಕೊಳ್ಳುತ್ತದೆ. ಅವರವರ ಅನುಕೂಲತೆಗೆ ತಕ್ಕಂತೆ, ಅಭ್ಯಾಸಬಲದಂತೆ ಅಂಥ ಆಹಾರ ಸಸ್ಯಾಹಾರ ಅಥವಾ ಮಾಂಸಾಹಾರವಾಗಿರಬಹುದು. ಅಕ್ಕಿ, ರಾಗಿ, ಜೋಳ, ಗೋಧಿ, ಬೇಳೆಕಾಳುಗಳು, ಹಾಲು, ಬೆಣ್ಣೆ, ತುಪ್ಪ, ಕೋಳಿಮೊಟ್ಟೆ, ಮಾಂಸ, ತರಕಾರಿ, ಸೊಪ್ಪು ಮುಂತಾದವುಗಳಿಂದ ಕೂಡಿರುವುದು ವಾಡಿಕೆ. ಪ್ರಮಾಣದಲ್ಲಿ ಹೆಚ್ಚು ಸೇವಿಸತಕ್ಕವುಗಳಾದ ಶರ್ಕರಪಿಷ್ಟಗಳು (ಕಾರ್ಬೋಹೈಡ್ರೇಟುಗಳು), ಪ್ರೋಟೀನುಗಳು, ಜಿಡ್ಡು ಪದಾರ್ಥಗಳು ನಮ್ಮ ಗಮನವನ್ನು ಹೆಚ್ಚು ಸೆಳೆಯುವುದು ಸಹಜ. ಆದಾಗ್ಯೂ ಸೂಕ್ಷ್ಮ ಪ್ರಮಾಣದಲ್ಲಿ ಸೇವಿಸುವ, ಸೇವಿಸಲೇಬೇಕಾದ ಜೀವಸತ್ವಗಳು (ವಿಟಮಿನ್ನುಗಳು) ನಮ್ಮ ಆರೋಗ್ಯದ ಮೇಲೆ ಬಲು ಹೆಚ್ಚು ಪ್ರಭಾವವನ್ನು ಬೀರುತ್ತವೆ. ಅವುಗಳ ಆವಿಷ್ಕಾರವಾದದ್ದು ಇಂಥ ಪ್ರಭಾವಗಳನ್ನು ಆಧರಿಸಿಯೇ ‘ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು’ ಎಂಬ ನಾಣ್ನುಡಿ ಜೀವಸತ್ವಗಳಿಗೆ ಚೆನ್ನಾಗಿ ಅನ್ವಯಿಸುತ್ತದೆ.

ಜೀವಸತ್ತ್ವಗಳ ಲಕ್ಷಣಗಳೇನು? ಅವು ಆಹಾರ ಪದಾರ್ಥಗಳಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿರುತ್ತವೆ (ಮಿಲಿಗ್ರಾಮ್ = $\frac{೧}{೧೦೦೦}$ ಗ್ರಾಮ್ ; ಮೈಕ್ರೊಗ್ರಾಮ್ = $\frac{೧}{೧೦೦೦೦೦೦}$ ಗ್ರಾಮ್ ; ಜೀವಿಯ ಬೆಳವಣಿಗೆಗೆ ಆವಶ್ಯಕವಾಗಿ ಬೇಕೇಬೇಕು ; ಇತರ ಆಹಾರ ಮೂಲವಾದ ರಾಸಾಯನಿಕಗಳಿಂದ ಜೀವಿ ತಾನೇ ತಯಾರು ಮಾಡಿಕೊಳ್ಳಲಾರದಂಥವು. ಒಂದೊಂದು ಜೀವಸತ್ವದ ಅಭಾವದಿಂದಲೂ ವಿಶಿಷ್ಟವಾದ ಒಂದೊಂದು ರೋಗ ಪ್ರಾಪ್ತವಾಗುತ್ತದೆ. ‘ಎ’ ಜೀವಸತ್ವದ ಕೊರತೆಯಿಂದ ‘ಇರುಳುಗಣ್ಣು’ ‘ಬಿ’, ಅಭಾವದಿಂದ ‘ಬೆರಿಬೆರಿ’, ‘ಸಿ’ಯ ಅಭಾವದಿಂದ ‘ಸ್ಕರ್ವಿ’ ಇತ್ಯಾದಿ. ಆದ್ದರಿಂದಲೇ ಈ ಪೋಷಕಗಳಿಗೆ ‘ಜೀವ

ಸತ್ವ'ಗಳೆಂಬ ಅನ್ವರ್ಥನಾಮವೂ ಬಳಕೆಯಲ್ಲಿದೆ.

ಜೀವಸತ್ವಗಳನ್ನು ಆವಿಷ್ಕರಿಸಿದ ಮತ್ತು ಅವುಗಳ 'ಕಾರ್ಯಜಟಿಲತೆ'ಯನ್ನು ಅರ್ಥ ಮಾಡಿಕೊಳ್ಳುವಲ್ಲಿ ನಡೆದ ಸಂಶೋಧನೆಗಳ ಸಫಲತೆಯ ಸಂಕ್ಷೇಪವಾದ ಸಾರಾಂಶವನ್ನು 'ಸಿ' ಮತ್ತು 'ಬಿ'ಗಳ ಉದಾಹರಣೆಗಳೊಂದಿಗೆ ನಿರೂಪಿಸಬಹುದು. ಹದಿನೇಳನೇ ಶತಮಾನದಲ್ಲಿ ನಾವಿಕರು ಪ್ರಪಂಚ ಪರ್ಯಟನದ ಹಾಗೂ ಹೊಸ ಹೊಸ ನಾಡುಗಳನ್ನು ಅನ್ವೇಷಿಸುವ ಸಾಹಸದಲ್ಲಿ ತೊಡಗಿದರೆಂಬುದು ಚಾರಿತ್ರಿಕವಾದ ಸಂಗತಿ. ಅಂಥಹ ಸಮುದ್ರಯಾನಗಳ ದೀರ್ಘಾವಧಿಯಲ್ಲಿ ಮಾಮೂಲಿನಂತೆ ಆಹಾರ ದೊರಕದೆ ಹಲವಾರು ನಾವಿಕರು ರೋಗಕ್ಕೆ ತುತ್ತಾಗಿ ಸಾವನ್ನಪ್ಪುತ್ತಿದ್ದರು. ಅಂಥಹವರಲ್ಲಿ ಪ್ರಮುಖವಾಗಿ ಕಂಡು ಬರುತ್ತಿದ್ದ ರೋಗ ಲಕ್ಷಣಗಳೆಂದರೆ : ನಿತ್ರಾಣರಾಗಿ ಕೃಶರಾಗುತ್ತಿದ್ದುದು, ಬೇಗ ತಾಳ್ಮೆಗೆಡುತ್ತಿದ್ದುದು, ವಸಡಿನಲ್ಲಿ ರಕ್ತಸ್ರಾವ, ಸಂದುಗಳ ನೋವು ಇತ್ಯಾದಿ. ಈ ದುರಂತಗಳಿಂದ ನಾವಿಕರೂ ನೌಕಾಯಾನದ ಪೋಷಕರಾಗಿದ್ದ ರಾಜ ಮಹಾರಾಜರೂ ನೊದಮೊದಲು ಕಂಗಾಲಾದರು. ಮುಂದೆ 'ಏಕೆ ಹೀಗೆ?' ಎಂಬ ಪ್ರಶ್ನೆ ಕೇಳಿಕೊಂಡಿರಬೇಕು. ಕಾಲಕ್ರಮೇಣ ಒಂದು ಸ್ವಾರಸ್ಯವಾದ ಸಂಗತಿ ಬೆಳಕಿಗೆ ಬಂದಿತು. ಪ್ರತಿ ದಿನದ ಆಹಾರದಲ್ಲಿ ನಿಂಬೆ ಅಥವಾ ಆ ಜಾತಿಯ ಹಣ್ಣಿನ ರಸವನ್ನು ಅಥವಾ ಹಣ್ಣನ್ನು ಸೇವಿಸುವುದರಿಂದ ಈ ಪಿಡುಗನ್ನು ತಪ್ಪಿಸಬಹುದು. ಈ ತಿಳಿವಿನ ಆಧಾರದ ಮೇಲೆ ನಾವಿಕರಿಗೆ ಪ್ರತಿದಿನದ ಊಟದಲ್ಲಿ ಅಂತಹ ಹಣ್ಣುಗಳನ್ನು ಅಥವಾ ಹಣ್ಣಿನ ರಸವನ್ನು ಕಡ್ಡಾಯ ಮಾಡಲಾಯಿತು. ಈ ರೋಗಕ್ಕೆ 'ಸ್ಕರ್ವಿ' ಎಂದೂ ಪಿಡುಗನ್ನು ನಿವಾರಿಸುವ ಸಾಮರ್ಥ್ಯವುಳ್ಳ ಘಟಕಕ್ಕೆ 'ಸ್ಕರ್ವಿ ವಿರೋಧಿ ಜೀವಸತ್ವ' ಎಂದೂ ನಾಮಕರಣ ಮಾಡಲಾಯಿತು. ೧೯೩೨ರಲ್ಲಿ 'ಸಿ' ಜೀವಸತ್ತ್ವವನ್ನು ಬೇರ್ಪಡಿಸಿ ಗುರುತಿಸಲಾಯಿತು. ಅನಂತರನದ ೪-೫ ವರ್ಷಗಳಲ್ಲಿ ಅದರ ರಾಸಾಯನಿಕ ರಚನೆಯನ್ನು ವಿಶ್ಲೇಷಿಸಿದುದಲ್ಲದೆ ಸಂಯೋಜನೆಯನ್ನೂ ಸಾಧಿಸಲಾಯಿತು.

ಅನಂತರದ ೩೦-೪೦ ವರುಷಗಳಲ್ಲಿ ಈಗ ನಮಗೆ ತಿಳಿದಿರುವ ಸುಮಾರು ೩೦ ಜೀವ ಸತ್ವಗಳೆಲ್ಲಾ ಕಂಡು ಹಿಡಿಯಲ್ಪಟ್ಟುದು ಮಾತ್ರವಲ್ಲದೆ ಅವುಗಳನ್ನು ಕಾರ್ಖಾನೆಗಳಲ್ಲಿ ತಯಾರಿಸುವ ಸಾಮರ್ಥ್ಯವನ್ನೂ ಗಳಿಸಿಕೊಳ್ಳಲಾಯಿತು. ಇಂದು ನಾವು ನೂರು ಕಟ್ಟೆಯಲ್ಲಿ ಈ 'ವಿಟಮಿನ್ನು'ಗಳನ್ನು ಮಾತ್ರೆ, ಕ್ಯಾಪ್ಸೂಲ್ ಅಥವಾ ಸಿರಪ್‌ಗಳ ರೂಪದಲ್ಲಿ ಕೊಳ್ಳಬಹುದು. ಇದೇ ಕಾಲಾವಧಿಯಲ್ಲಿ ಜೀವಸತ್ತ್ವಗಳ ಕೊರತೆಯಿಂದ ವಿಶಿಷ್ಟವಾದ ಕಾಯಿಲೆಗಳು ಏಕೆ ಮತ್ತು ಹೇಗೆ ಉಂಟಾಗುತ್ತವೆ ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡು ಹಿಡಿಯುವ ಪ್ರಯತ್ನಗಳೂ ಸಾಗುತ್ತಿದ್ದುವು. ಮೊದಮೊದಲು ಪ್ರಯೋಗ ಪಶುಗಳಲ್ಲಿ ಮುಂದೆ ಮಾನವರಲ್ಲಿ ಈ ಸಂಶೋಧನೆಗಳು ಮುಂದುವರಿದು ಬಹುಪಾಲು ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳು ದೊರಕಿವೆ.

ನಾವು ಸೇವಿಸಿದ ಆಹಾರವು ಜೀರ್ಣವಾಗಿ ರಕ್ತದ ಮೂಲಕ ವಿವಿಧ ಅಂಗೋಪಾಂಗಗಳಲ್ಲಿರುವ ಕೋಶಗಳಿಗೆ ಮೂಲರಾಸಾಯ

ನಿಕಗಳನ್ನೊದಗಿಸುತ್ತವೆ. ಇವನ್ನು ಉಪಯೋಗಿಸಿಕೊಂಡು ಜೀವಕೋಶಗಳು ತಮಗೆ ಬೇಕಾದ ಸಂಕೀರ್ಣ ರಾಸಾಯನಿಕಗಳನ್ನು ತಯಾರಿಸಿಕೊಳ್ಳುತ್ತವೆ. ಈ ಎಲ್ಲ ಕ್ರಿಯೆಗಳಿಗೆ 'ಉಪಾಪಚಯ' (Metabolism)ವೆಂದು ಹೆಸರು. ಈ ಕ್ರಿಯೆಗಳು ನಡೆಯಲು 'ಕಿಣ್ವಗಳು' ಬೇಕು. ಅಂತಹ ಅನೇಕ ಕಿಣ್ವಗಳು (enzymes) ಎಲ್ಲ ಜೀವಿಗಳಲ್ಲಿ ಕಾರ್ಯಮಗ್ನವಾಗಿರುತ್ತವೆ. ಜೀವ ಸತ್ವಗಳು ಪ್ರಮುಖವಾಗಿ 'ಬಿ' ಗುಂಪಿನವು, ಹಲವಾರು ಕಿಣ್ವಗಳೊಡನೆ ಸಂಯೋಗ ಹೊಂದಿದ್ದು ಅವುಗಳ ಅಂಗವಾಗಿ ಕೆಲಸ ಮಾಡುತ್ತವೆ. ಆದ್ದರಿಂದಲೇ ಒಂದು ಜೀವಸತ್ವದ ಕೊರತೆಯುಂಟಾದರೆ ಅದಕ್ಕೆ ಸಂಬಂಧಿಸಿದ ಕಿಣ್ವದ ಕಾರ್ಯಕ್ಷಮತೆ ಕುಂಠಿತಗೊಳ್ಳುತ್ತದೆ; ಇದರಿಂದ ಆ ಕಿಣ್ವಕ್ಕೆ ಸಂಬಂಧಪಟ್ಟ ಉಪಾಪಚಯ ಕ್ರಿಯೆಗಳು ವ್ಯತ್ಯಸ್ತಗೊಳ್ಳುತ್ತವೆ. ಪರಿಣಾಮವಾಗಿ ವಿಶಿಷ್ಟವಾದ ಕಾಯಿಲೆ ಗೋಚರಿಸುತ್ತದೆ. 'ಬಿ' ಅನ್ನಾಂಗದ ಅಭಾವದಿಂದ ಉಂಟಾಗುವ 'ಬೆರಿ ಬೆರಿ' ರೋಗ ಒಂದು ನಿದರ್ಶನ.

ಮೊದಲೇ ತಿಳಿಸಿದಂತೆ ಸುಮಾರು ೩೦ ಜೀವಸತ್ವಗಳು ಆವಿಷ್ಕೃತವಾಗಿದ್ದರೂ ಎಲ್ಲಾ ಜೀವಿಗಳಿಗೂ ಎಲ್ಲಾ ಜೀವಸತ್ತ್ವಗಳ ಆವಶ್ಯಕತೆ ಇರುವುದಿಲ್ಲ. ಉದಾಹರಣೆಗೆ ಮಾನವರಿಗೆ ಕೋತಿಗಳಿಗೆ ಮತ್ತು ಗಿನೀ ಇಲಿಗಳಿಗೆ 'ಸಿ' ಜೀವಸತ್ತ್ವ ಬೇಕು; ಆದರೆ ಇಲಿ, ಮೊಲ ಮುಂತಾದ ಪ್ರಾಣಿಗಳಿಗೆ 'ಸಿ'ಯ ಅಗತ್ಯವಿಲ್ಲ.

ಸಾಮಾನ್ಯವಾಗಿ ಜೀದಸತ್ತ್ವಗಳನ್ನು ಎರಡು ಗುಂಪುಗಳಾಗಿ ವಿಂಗಡಿಸುವುದು ವಾಡಿಕೆ. ಎ,ಡಿ,ಇ ಮತ್ತು ಕೆಗಳು ಜಿಡ್ಡಿನಲ್ಲಿ ಲೀನವಾಗತಕ್ಕವು. 'ಬಿ' ಗುಂಪಿನ ಹಾಗೂ 'ಸಿ' ಜೀವಸತ್ತ್ವಗಳು ನೀರಿನಲ್ಲಿ ವಿಲೀನವಾಗತಕ್ಕವು. ಮಾನವರಿಗೆ ಮುಖ್ಯವಾದ ಜೀವಸತ್ತ್ವಗಳನ್ನೂ ಅವುಗಳ ಕೊರತೆ ಮತ್ತು ಅಭಾವದಿಂದ ಉಂಟಾಗುವ ರೋಗಗಳನ್ನೂ ಆ ಜೀವಸತ್ತ್ವಗಳು ದೊರಕುವ ಆಹಾರ ಪದಾರ್ಥಗಳನ್ನೂ ಪಟ್ಟಿ ೧ ರಲ್ಲಿ ಸೂಚಿಸಲಾಗಿದೆ.

ನಮ್ಮ ದೇಶದಲ್ಲಿ ಪ್ರಮುಖವಾಗಿ ಕಂಡುಬರುವ ಕೊರತೆಗಳೆಂದರೆ 'ಎ' ಮತ್ತು 'ಬಿ' ಗುಂಪಿನ' ಜೀವಸತ್ವಗಳದ್ದು. 'ಎ'ಯ ಕೊರತೆಯಿಂದ (ಅಭಾವದಿಂದ) ದೃಷ್ಟಿದೋಷವುಂಟಾಗುತ್ತದೆ. ಮೊದಮೊದಲು ರಾತ್ರಿಯ ಹೊತ್ತು ಕಣ್ಣು ಚೆನ್ನಾಗಿ ಕಾಣಿಸುವುದಿಲ್ಲ ಹಾಗೂ ಬೆಳಕಿನಿಂದ ಕತ್ತಲೆಗೆ ಹೋದಾಗ ಕಣ್ಣನೋಟ ಹೊಂದಿಕೊಳ್ಳುವುದು ಆರೋಗ್ಯವಂತ ವ್ಯಕ್ತಿಗಿಂತ ಬಹಳ ಹೆಚ್ಚು ಹೊತ್ತಾಗುತ್ತದೆ. ಈ ಸ್ಥಿತಿಗೆ 'ಇರುಳುಗಣ್ಣು' (Night blindness) ಎಂದು ಹೆಸರು. ಜೀವಸತ್ತ್ವದ ಕೊರತೆ ಹಾಗೇ ಮುಂದುವರಿದರೆ ವ್ಯಕ್ತಿ ಕುರುಡಾಗುವ ಸಾಧ್ಯತೆ ಹೆಚ್ಚುತ್ತದೆ. ಸಕಾಲದಲ್ಲಿ ಅದರ ಪೂರೈಕೆ ಮಾಡುವುದರಿಂದ ದೃಷ್ಟಿದೋಷವನ್ನು ಗುಣಪಡಿಸಬಹುದು.


ವೈದ್ಯರ ಬಳಿ ಕಾಲಕಾಲಕ್ಕೆ ಹೋಗಿ ತಪಾಸಣೆ ಮಾಡಿಸಿಕೊಳ್ಳುವುದರಿಂದ ಜೀವಸತ್ತ್ವಗಳ ಕೊರತೆಯಿಂದುಂಟಾಗುವ ಹಾನಿಕರ ಪರಿಣಾಮಗಳನ್ನು ತಡೆಗಟ್ಟಲು ಯುಕ್ತ ಕ್ರಮಗಳನ್ನು ತೆಗೆದುಕೊಳ್ಳಬಹುದು. ಅದಕ್ಕೂ ಮಿಗಿಲಾಗಿ ಕೊರತೆಯೇ ಉಂಟಾಗದಂತೆ ಎಚ್ಚರ ವಹಿಸಿ ನಮ್ಮ

ಪಟ್ಟಿ ೧. ಮುಖ್ಯ ಜೀವಸತ್ವಗಳ ವಿವರಗಳು

ಜೀವಸತ್ವದ ಅಕ್ಷರ ಸಂಕೇತ	ಜೀವಸತ್ವದ ರಾಸಾಯನಿಕ ಹೆಸರು	ಕೊರತೆ/ಅಭಾವದಿಂದ ಉಂಟಾಗುವ ಕಾಯಿಲೆ	ದೊರಕುವ ಆಹಾರ ಪದಾರ್ಥಗಳು ಅಥವಾ ಬೇರೆ ಪರಿಹಾರ
ಎ	ರೆಟಿನಾಲ್	ಇರುಳುಗಣ್ಣು (ಕತ್ತಲಲ್ಲಿ ಕಣ್ಣು ಚೆನ್ನಾಗಿ ಕಾಣದಿರುವುದು)	ಷಾರ್ಕ್ ಲಿವರ್ ಎಣ್ಣೆ, 'ಎ' ಯ ಜನಕಗಳಾದ ಕ್ಯಾರಟ್, ದಂಟು, ಪಪ್ಪಾಯಿ, ಮಾವಿನಹಣ್ಣು, ಹಾಲು, ಕೋಳಿಮೊಟ್ಟೆ
ಡಿ	ಕ್ಯಾಲ್ಸಿಫೆರಾಲ್	ರಿಕೆಟ್ಸ್ (ಹಕ್ಕಿ ಕಡಪು-ಮಕ್ಕಳಲ್ಲಿ ಕೈ, ಕಾಲಿನ ಮೂಳೆಗಳು ಬಗ್ಗಿರುವುದು, ಎದೆಯ ಮೂಳೆಯ ಪಾರ್ಶ್ವಗಳಲ್ಲಿ ಗಂಟುಗಳಿರುವುದು)	ಸೂರ್ಯನ ಬೆಳಕಿಗೆ ಚರ್ಮವನ್ನೊಡ್ಡುವುದು
ಬಿ$_1$	ಥಯಮಿನ್	'ಬೆರಿ ಬೆರಿ' ಕೈ ಕಾಲುಗಳ ಸ್ನಾಯು ನೋವು	ಯೀಸ್ಟ್, ತೌಡು, ಕಡಲೆಕಾಯಿ, ಕಡಿಮೆ ಪಾಲಿಷ್ ಮಾಡಿದ ಅಕ್ಕಿ
ಬಿ$_2$	ರಿಬೊಫ್ಲೇವಿನ್	ತುಟಿ ಬಿರಿತ, ಉರಿ, ನಾಲಿಗೆ ಕೆಂಪೇರಿ ಉರಿಯುವುದು	ಹಾಲು, ಮೊಸರು, ಕೋಳಿಮೊಟ್ಟೆ
ಬಿ$_{12}$	ಸೈಯನೊ ಕೊಬಾಲಮಿನ್	ಅನೀಮಿಯ (ರಕ್ತಹೀನತೆ)	ತೆನೆ ಧಾನ್ಯಗಳು, ಸೊಪ್ಪು, ತರಕಾರಿಗಳು
	ಫೋಲಿಕ್ ಆಮ್ಲ	ಅನೀಮಿಯ	
	ನಿಕೋಟಿನಿಕ್ ಆಮ್ಲ	ಪೆಲ್ಲಾಗ್ರ (ಒರಟುಚರ್ಮ)	
ಸಿ	ಆಸ್ಕಾರ್ಬಿಕ್ ಆಮ್ಲ	ಸ್ಕರ್ವಿ (ಒಸಡಿನ ರಕ್ತಸ್ರಾವ)	ನೆಲ್ಲಿಕಾಯಿ, ಸೀಬೆಹಣ್ಣು, ಕಿತ್ತಳೆಹಣ್ಣು ಮೊಳಕೆ ಬರಿಸಿದ ಹೆಸರುಕಾಳು ಮತ್ತು ಕಡಲೆಕಾಳುಗಳು

ಆರೋಗ್ಯ ಕಾಪಾಡಿಕೊಳ್ಳಬಹುದು. ಈ ಮಾತುಗಳು ಗರ್ಭಿಣಿಯರಿಗೆ, ಶಿಶುಗಳಿಗೆ ಎಳೆಯರಿಗೆ ಹಾಗೂ ವೃದ್ಧರಿಗೆ ಹೆಚ್ಚು ಅನ್ವಯವಾಗುತ್ತವೆ. ಮಕ್ಕಳಿಗೆ ಜೀವಸತ್ತ್ವಗಳ ಮತ್ತು ಇತರ ಪೋಷಕಗಳ ಕೊರತೆಯಿಲ್ಲದ ಆಹಾರದ ಪೂರೈಕೆಯಾಗುವಂತೆ ಎಚ್ಚರ ವಹಿಸುವುದರಿಂದ ಅವರು ಹೆಚ್ಚು ದೃಢಕಾಯರಾಗಿ ಬೆಳೆಯುವುದು ಮಾತ್ರವಲ್ಲದೆ ಮೇಧಾವಿಗಳೂ ಆಗುವ ಸಾಧ್ಯತೆ ಹೆಚ್ಚು.

ವಿಜ್ಞಾನದಿಂದ ಮಾನವ ಕಲ್ಯಾಣಕ್ಕೆ ಸಂದಿರುವ ಅನೇಕ ಕೊಡುಗೆಗಳ ಇತಿಹಾಸದಲ್ಲಿ ಜೀವಸತ್ವಗಳ ಆವಿಷ್ಕಾರ ಮತ್ತು ಅವುಗಳಿಂದ ಮಾನವ ಜೀವನದ ಮೇಲೆ ಆಗಿರುವ ಶುಭ ಪರಿಣಾಮಗಳು ಸುವರ್ಣಾಕ್ಷರಗಳಲ್ಲಿ ಬರೆಯುವಂಥವು.



ವ್ಯವಸ್ಥಿತ ಬುದ್ಧಿಯಿಲ್ಲದ ಅಧ್ಯರನ್ನು ಸರ್ವಾತ್ಮನಾತನೆಂದು ನಂಬಿಕೊಂಡು ನೀನು ಆಶ್ರಯಿಸಿಕೊಂಡಿರಬೇಡ. ಏಕೆಂದರೆ ಅವರ ಅನುಗ್ರಹವು ಕೂಡಾ ಭಯಂಕರವಾದುದು.

—ಭರ್ತೃಹರಿ

ನಿನ್ನ ಸುದೈವವನ್ನು ಶ್ರೀಮಂತಿಕೆ ಎಂಬ ಮಾನದಂಡದಿಂದ ಹಳೆಯಬೇಡ. ಉತ್ತಮವಾದ ಮನುಷ್ಯತ್ವದ ಪ್ರಜ್ಞೆಯೊಂದೇ ನಿನ್ನ ಸುದೈವದ ಮಾನದಂಡವಾಗಿದೆ.

—ನೀತಿಮಂಜರಿ

ಗರ್ಭಿಣಿ ಆರೋಗ್ಯ

ಡಾ|| ಕೆ. ವಿ. ರಾಘವೇಂದ್ರರಾವ್

ಗರ್ಭಧಾರಣೆ ಮಾಡುವುದು ಸ್ತ್ರೀಯ ನೈಸರ್ಗಿಕ ಧರ್ಮ. ಗರ್ಭಧಾರಣೆಯ ಅನಂತರ ಅವಳು ಒಳ್ಳೆ ಆರೋಗ್ಯಕರ ಶಿಶುವಿಗೆ ಜನ್ಮ ಕೊಡಬೇಕಾದರೆ ಮೊದಲಿಗೆ ತನ್ನ ಆರೋಗ್ಯವನ್ನು ಸರಿಯಾಗಿ ಕಾಪಾಡಿಕೊಳ್ಳಬೇಕು. ಆರೋಗ್ಯವಂತಳಾದ ಸ್ತ್ರೀಯು ಆರೋಗ್ಯವಂತ ಶಿಶುವನ್ನು ಪಡೆಯಲು ಇಷ್ಟಪಡುತ್ತಾಳೆ. ಆದುದರಿಂದ ಗರ್ಭಿಣೀ ಅವಸ್ಥೆಯಲ್ಲಿ ಅವಳು ತನ್ನ ಆರೋಗ್ಯವನ್ನು ಸರಿಯಾಗಿ ಕಾಪಾಡಿಕೊಂಡು ಬರಬೇಕು. ಆಹಾರ ವಿಹಾರ ನಿಯಮಗಳೊಂದಿಗೆ ಅವಳು ಕಾಲಕಾಲಕ್ಕೆ ವೈದ್ಯರಲ್ಲಿ ಪರೀಕ್ಷೆಯನ್ನೂ ಸಹ ಮಾಡಿಸಿಕೊಳ್ಳುತ್ತಾ ಬರಬೇಕು.

ಆಹಾರ ನಿಯಮ : (Diet) :

ಗರ್ಭಿಣಿ ಆಹಾರದಲ್ಲಿ ಸ್ವಲ್ಪ ಮಟ್ಟಿಗೆ ಪರಿವರ್ತನೆ ಮಾಡಿಕೊಳ್ಳುವ ಅವಶ್ಯಕತೆ ಇದೆ. ಕೆಲವು ಸ್ತ್ರೀಯರು ಸ್ವಲ್ಪ ನಿಯಮಿತ ಆಹಾರವನ್ನು ಸೇವನೆ ಮಾಡುತ್ತಾರೆ. ಕೆಲವರು ಮಿತಿಯಿಲ್ಲದೆ ಆಹಾರ ಸೇವನೆ ಮಾಡುತ್ತಾರೆ. ಆದುದರಿಂದ ಗರ್ಭಿಣಿಗೆ ಆಹಾರ ಸೇವನೆಯಲ್ಲಿ ಸಲಹೆಯನ್ನು ಕೊಡುವುದು ಅವಶ್ಯಕ. ಅವಳು ಸೇವನೆ ಮಾಡುವ ಆಹಾರವು ಸ್ವಚ್ಛವಾಗಿಯೂ ರುಚಿಯಾಗಿಯೂ ಪೌಷ್ಟಿಕಾಂಶದಿಂದ ಕೂಡಿದ್ದಾಗಿಯೂ, ಜೀವಸತ್ವವನ್ನು ಒಳಗೊಂಡಿರುವ, ಅದರಲ್ಲಿಯೂ ಮುಖ್ಯವಾಗಿ ಖನಿಜಾಂಶವನ್ನು ಹೊಂದಿರುವ ಆಹಾರವಾಗಿಯೂ ಇರಬೇಕು. ಗರ್ಭಿಣಿ ಯಾವ ಆಹಾರವನ್ನು ಸೇವನೆ ಮಾಡಿದರೂ ಅದು ಸುಲಭವಾಗಿ ಜೀರ್ಣವಾಗಬೇಕು.

ಖನಿಜಾಂಶ :

ರಕ್ತವೃದ್ಧಿಗೆ ಗರ್ಭಿಣಿಗೆ ಈ ಖನಿಜಾಂಶದ ಅವಶ್ಯಕತೆ ಬಹಳ ಮಟ್ಟಿಗೆ ಇದೆ. ಗರ್ಭದ ಬೆಳವಣಿಗೆ ತಾಯಿಯ ರಕ್ತವನ್ನವಲಂಬಿಸಿದೆ. ಖನಿಜಾಂಶದ ಕೊರತೆ ಬಹಳ ಮಟ್ಟಿಗೆ ತರಕಾರಿಗಳಿಂದ ತುಂಬಲ್ಪಡುತ್ತದೆ. ಮುಖ್ಯವಾಗಿ ಸೊಪ್ಪುಗಳ ಸೇವನೆಯಿಂದ ಖನಿಜಾಂಶವನ್ನು ಹೊಂದಬಹುದು. ಇದರ ಜೊತೆಗೆ ಮೋಸಂಬಿ, ದ್ರಾಕ್ಷಿ, ಅಂಜೂರ ಇವೇ ಮೊದಲಾದ ಹಣ್ಣುಗಳನ್ನು ಸಹ ಸೇವನೆ ಮಾಡಬೇಕು. ಇವುಗಳ ಸೇವನೆಯಿಂದ ಮಲಬದ್ಧತೆಯುಂಟಾಗುವುದಿಲ್ಲ.

ಮಲಬದ್ಧತೆ

ಗರ್ಭವು ಗರ್ಭಾಶಯದಲ್ಲಿ ವೃದ್ಧಿ ಹೊಂದುವಾಗ ಅವರ ಒತ್ತಡವು ಮಲಾಶಯದ ಮೇಲೆ ಬೀಳುವುದರಿಂದ ಸಾಮಾನ್ಯವಾಗಿ ಗರ್ಭಿಣಿಗೆ ಮಲಬದ್ಧತೆ ಉಂಟಾಗಬಹುದು. ಇದನ್ನು ಹೋಗಲಾಡಿಸುವುದಕ್ಕೆ ಯಥೇಚ್ಛವಾಗಿ ನೀರನ್ನು ಕುಡಿಯುವುದು ಅಥವಾ ಮೃದು ವಿರೇಚನವನ್ನು ಕೊಡಬಹುದು. ಯಾವ ಕಾರಣದಿಂದಲೂ ತೀಕ್ಷ್ಣವಿರೇಚನವನ್ನು ಕೊಡಬಾರದು. ಉದಾ : ಸ್ವಾದಿಷ್ಟ ವಿರೇಚನ ಚೂರ್ಣವನ್ನು ನೀಡಬಹುದು.

ವ್ಯಾಯಾಮ

ಗರ್ಭಿಣಿ ವ್ಯಾಯಾಮ ಮಾಡುವುದು ಲಾಭದಾಯಕ. ಅವಳು ಮನೆಯ ಕೆಲಸವನ್ನು ಮಾಡುವುದರಿಂದಲೂ ವ್ಯಾಯಾಮವಾಗುತ್ತದೆ. ಆದರೂ ಪ್ರಸವವು ಸುಖಕರವಾಗುವುದಕ್ಕೆ ಸ್ವಲ್ಪಜಾಸ್ತಿ ವ್ಯಾಯಾಮದ ಅವಶ್ಯಕತೆ ಇರುತ್ತದೆ. ಬಹಳ ಒಳ್ಳೆಯ ವ್ಯಾಯಾಮವೆಂದರೆ ನಡೆಯುವುದು. ಓಡುವುದು, ಕುದುರೆ ಸವಾರಿ ಮಾಡುವುದು, ಎತ್ತಿನಗಾಡಿಯಲ್ಲಿ ಕುಳಿತುಕೊಂಡು ಹೋಗುವುದು, ಸೈಕಲ್ ಸವಾರಿ, ಸ್ಕೂಟರ್ ಸವಾರಿ, ಭಾರ ಹೊರುವುದು ಇವೆಲ್ಲವನ್ನೂ ಗರ್ಭಿಣಿಯರು ಬಿಡಬೇಕು. ಇವುಗಳಿಂದ ಗರ್ಭಸ್ರಾವವಾಗುವ ಸಂಭವವಿದೆ. ಕೊನೆಯ ಮೂರು ತಿಂಗಳುಗಳಲ್ಲಿ ಹೆಚ್ಚಾಗಿ ನಡೆಯುವುದರಿಂದ ಸುಖಪ್ರಸವವಾಗುತ್ತದೆ.

ಸ್ವಚ್ಛತೆ

ಬಾಹ್ಯ ಮತ್ತು ಅಭ್ಯಂತರ ಸ್ವಚ್ಛತೆಯನ್ನು ಗರ್ಭಿಣಿ ಪಾಲಿಸಬೇಕು. ಬಾಹ್ಯ ಸ್ವಚ್ಛತೆಯಲ್ಲಿ ಅವಳು ತನ್ನ ಶರೀರವನ್ನು ಶುಚಿಯಾಗಿಟ್ಟಿರಬೇಕು. ಯಾವಾಗಲೂ ಬಿಸಿನೀರಿನಿಂದ ಸ್ನಾನ ಮಾಡಬೇಕು. ಒಂದು ವೇಳೆ ಪ್ರತಿದಿನವೂ ಸ್ನಾನ ಮಾಡದಿದ್ದ ಪಕ್ಷದಲ್ಲಿ ಬಿಸಿನೀರಿನ ಬಟ್ಟೆಯಲ್ಲಿ ಶರೀರವನ್ನು ಒರೆಸಿಕೊಳ್ಳಬೇಕು. ಯಾವಾಗಲೂ ಗರ್ಭಿಣಿಯು ತನ್ನ ಮೊಲೆತೊಟ್ಟುಗಳನ್ನು ಮತ್ತು ಗುಪ್ತಾಂಗವನ್ನು ಶುಚಿಯಾಗಿಟ್ಟುಕೊಂಡಿರಬೇಕು. ಅಭ್ಯಂತರ ಸ್ವಚ್ಛತೆಯಲ್ಲಿ ವೇಗಾವರೋಧವನ್ನು ಮಾಡಬಾರದು.

ಉಡುಪು

ಕಾಲಕ್ಕನುಗುಣವಾಗಿ ಉಡುಪು ಧರಿಸಬೇಕು. ಬೇಸಗೆಯಲ್ಲಿ ತೆಳುವಾದ ಬಟ್ಟೆಗಳನ್ನು, ಶೀತಕಾಲ ಅಥವಾ ಚಳಿಗಾಲದಲ್ಲಿ ದಪ್ಪ ಅಥವಾ ಉಣ್ಣೆ ಬಟ್ಟೆಗಳನ್ನು ಧರಿಸಬೇಕು. ಬಟ್ಟೆಗಳನ್ನು ಬಿಗಿಯಾಗಿ ತೊಡಬಾರದು.

ಪುರುಷ ಸಂಪರ್ಕ

ಆಯುರ್ವೇದ ರೀತ್ಯಾ ಗರ್ಭಿಣಿಗೆ ಪುರುಷ ಸಂಪರ್ಕ ವರ್ಜ್ಯ. ಏಕೆಂದರೆ ಗರ್ಭಾಶಯಗ್ರೀವದ ರಂಧ್ರ ಮುಚ್ಚಿರುತ್ತದೆ. ಸಂಭೋಗದಿಂದ ತೊಂದರೆಯುಂಟಾಗಿ ಗರ್ಭಸ್ರಾವವಾಗಬಹುದು.

ಆಧುನಿಕ ವೈದ್ಯ ವಿಜ್ಞಾನದ ಪ್ರಕಾರ ಸ್ತ್ರೀ ಒಳ್ಳೆಯ ಆರೋಗ್ಯದಿಂದಿದ್ದರೆ ಸಂಭೋಗದಿಂದ ಯಾವ ತೊಂದರೆಯೂ ಆಗುವುದಿಲ್ಲ. ಮತ್ತೆ ಕೆಲವರ ಅಭಿಪ್ರಾಯದಂತೆ ಪುರುಷ ಸಂಪರ್ಕವನ್ನು ಮೊದಲು

ಮೂರು ತಿಂಗಳು ಗರ್ಭಸ್ರಾವವನ್ನೂ ಗರ್ಭಪಾತವನ್ನೂ ತಪ್ಪಿಸುವುದಕ್ಕೂ ಕೊನೆಯ ತಿಂಗಳು ಕ್ರಿಮಿ ಆವೃತದಿಂದ ತಪ್ಪಿಸುವುದಕ್ಕೂ ಮಾಡಬಾರದೆಂದು ಹೇಳುತ್ತಾರೆ.


ನಿದ್ರೆ

ಗರ್ಭಿಣಿಗೆ ನಿದ್ರೆ ತುಂಬ ಅವಶ್ಯಕ. ನಿದ್ರೆಯಿಂದ ತಾಯಿಯ ಶಾರೀರಿಕ ಪೋಷಣೆ ಮತ್ತು ಗರ್ಭದ ಬೆಳವಣಿಗೆ ಚೆನ್ನಾಗಿ ಆಗುತ್ತದೆ. ರಾತ್ರಿ ಬಹಳ ಹೊತ್ತು ಮಲಗಬೇಕು. ಬೇಗ್ಗೆಯಲ್ಲಿ ಕೊನೆಯಪಕ್ಷ ಒಂದು ಗಂಟೆ ವಿಶ್ರಾಂತಿ ಪಡೆದುಕೊಳ್ಳಬೇಕು. ಬೆಳಗಿನ ವೇಳೆಯಲ್ಲಿ ನಿದ್ರೆಮಾಡಬಾರದು.

ಮನಃಶಾಂತಿ

ಗರ್ಭಿಣಿ ಸದಾ ಹಸನ್ಮುಖಿಯಾಗಿ ಶಾಂತಿಯುತಳಾಗಿರಬೇಕು. ಮಾನಸಿಕ ಉದ್ವೇಗವನ್ನು ಹೊಂದಬಾರದು.

ಮೇಲೆ ಹೇಳಿದ ಅಂಶಗಳ ಜೊತೆಗೆ ಗರ್ಭಿಣಿ ಏಳು ತಿಂಗಳತನಕ ತಿಂಗಳಿಗೊಂದು ಬಾರಿ, ಏಳು ತಿಂಗಳನಂತರ ಹದಿನೈದು ದಿನಗಳಿಗೊಂದುಬಾರಿ, ಕೊನೆಯ ತಿಂಗಳಲ್ಲಿ ವಾರಕ್ಕೊಂದು ಬಾರಿ ವೈದ್ಯರಲ್ಲಿ ಹೋಗಿ ಪರೀಕ್ಷೆ ಮಾಡಿಸಿಕೊಳ್ಳಬೇಕು.



ಹದಗೊಂಡ ನೆಲವು ಫಲವತ್ತಾಗುವಂತೆ, ದುಃಖದಿಂದ ನಮ್ಮ ಹೃದಯವು ಹದಗೊಳ್ಳುವುದು. ಮನಸ್ಸನ್ನು ಆಳವಾಗಿ ವಿಚಾರಿಸಲು ಹಚ್ಚುವುದು.

—ವಾಶಿಂಗ್ಟನ್

ಶಾಶ್ವತ ಸಂಪತ್ತು ಯಾವುದು ?

ಸರಸ್ವತಿ ಬಡೆಕ್ಕಿಲ

ಒಂದು ಶತಮಾನದ ಹಿಂದೆ ಬರೆದ ಚಿಕ್ಕ ಪುಸ್ತಕ ಇಂದಿಗೂ ಉತ್ತರ ನೀಡುತ್ತಿದೆ. ಇಂದಿನ ಸಮಸ್ಯೆಗಳಿಗೆ, ಸಂಶಯಗಳಿಗೆ ಸಮರ್ಪಕ ಸಮಾಧಾನ ನೀಡುತ್ತಿದೆ. ಸತ್ಯದ ಗಂಟೆಯನ್ನು ಬಾರಿಸುತ್ತಿದೆ!

ನನ್ನ ಅಕ್ಕ, ನನ್ನಿಂದ ಹದಿಮೂರು ವರ್ಷ ಹಿರಿಯಳು. ಅವಳಲ್ಲಿದ್ದ ಗುಣಗಳ್ಯಾವುವೂ ನನ್ನಲ್ಲಿರಲಿಲ್ಲ. ಅವಳು ನಿಸ್ವಾರ್ಥಿಯಾಗಿದ್ದಳು. ಆಧ್ಯಾತ್ಮವಾದಿಯಾಗಿದ್ದಳು. ಆಸ್ತಿಕಳಾಗಿದ್ದಳು. ಎಲ್ಲರೂ ಅವಳನ್ನು ಮೆಚ್ಚಿಕೊಳ್ಳುತ್ತಿದ್ದರು. ಹೊಗಳುತ್ತಿದ್ದರು. ಆದರೆ ನಾನೋ! ಅವಳ ಬಗ್ಗೆ ಮಾತ್ಸರ್ಯ ನನ್ನೆದೆಯಲ್ಲಿ ಸದಾ ಹಸುರಾಗಿರುತ್ತಿತ್ತು. ಮತ್ಸರ ಪಡುತ್ತಲೇ ಬೆಳೆದೆ ನಾನು. ಆದರೆ ಒಂದು ದಿನ, ಅವಳ ಸಾವು ನನ್ನೆದೆಯನ್ನು ಒಡೆದು ನುಚ್ಚು ನೂರುಮಾಡಿತು!

ಅವಳ ಶವಸಂಸ್ಕಾರದ ಸಮಯ, ನಾನೊಂದು ವಿಚಿತ್ರ ಪೂರ್ವಸ್ಮರಣೆಗೊಳಗಾದೆ. ಅವಳೂ ಚಾರ್ಲಿಯೂ ಮದುವೆಯಾಗಿ ಒಂದುವರ್ಷವಾಗಿತ್ತಷ್ಟೆ. ಅವರ ಅತಿಥಿಯಾಗಿ ನಾನಲ್ಲಿಗೆ ಹೋದಾಗ ಕೇವಲ ಹನ್ನೊಂದು ವರ್ಷದ ಹುಡುಗಿ ನಾನು. ಅವರ ಶಯ್ಯಾಗೃಹದೊಳಕ್ಕೆ ಇಣುಕಿ ನೋಡಿದೆ. ಜೂಲಿಯಾ ಲೆವೆಂಡರ್ ಹೂವಿನ ಬಣ್ಣದ ಉದ್ದವಾದ ರೇಶ್ಮೆ ನಿಲುವಂಗಿಯನ್ನು ತೊಟ್ಟಿದ್ದಳು. ಕಂದುಬಣ್ಣದ ದಟ್ಟವಾಗಿ ಬೆಳೆದ ಕೂದಲು ಅವಳ ಬೆನ್ನ ಮೇಲೆ ಹರಡಿಕೊಂಡಿತ್ತು. ಜೋಡಿ ಮಂಚದ ಬಳಿ ನೆಲದಲ್ಲಿ ಮಂಡಿಯೂರಿ ಪ್ರಾರ್ಥನೆಸಲ್ಲಿಸುತ್ತಿದ್ದಳು. "ಎಂಥ ವಿಚಿತ್ರ! ಇಷ್ಟು ದೊಡ್ಡವಳಾದ ಮೇಲೆಯೂ ಪ್ರಾರ್ಥನೆಯೇ!" ನನಗೆ ಆಶ್ಚರ್ಯವಾಗಿತ್ತು. ನನ್ನ ಯೋಚನೆ ಮುಂದುವರಿದಿತ್ತು—ಮಲಗುವ ಮೊದಲು ಪ್ರಾರ್ಥಿಸುವುದು ಚಿಕ್ಕಮಕ್ಕಳ ಕೆಲಸ!

ಮುಂದೆ, ಜೀವನದ ಎಲ್ಲ ವಿಚಾರಗಳನ್ನು ತಿಳಿದ ಪ್ರೌಢಶಾಲಾ ವಿದ್ಯಾರ್ಥಿನಿ ನಾನಾದಾಗ, ಅವಳಿಗೂ ನನಗೂ ಎಂದೂ ಮುಗಿಯದ ವಾರ್ತಾಲಾಪ, ವಾದಪ್ರತಿವಾದಗಳು, ಪ್ರಾರಂಭಗೊಂಡುವು. ನನ್ನ ತತ್ವಜ್ಞಾನವೆಲ್ಲ ಪ್ರಶ್ನೆಗಳ ಮಾಲಿಕೆಯಾಗಿರುತ್ತಿತ್ತು. ಆದರೆ ಜೂಲಿಯಾಳಲ್ಲಿ ಯಾವ ಸಂಶಯವೂ, ಸಮಸ್ಯೆಯೂ ಇರಲಿಲ್ಲ. ಅವಳ ನಂಬಿಕೆ ನಿಶ್ಚಲವಾಗಿತ್ತು. "ನಾನು ಅಮರತ್ವವನ್ನು ನಂಬುತ್ತೇನೆ." ದೃಢತೆಯಿಂದ ಆಕೆ ಹೇಳಿ

೧೯೬೫ರ ಮೇ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ನಾಡೀರೀಡರ್ ಚಾಂಪಿಯನ್ ಅವರ "ವಾಟ್ ರಿಯಲಿ ಈಸ್ ವರ್ತ್—ವೈಲ್" ಎಂಬ ಲೇಖನದ ಅನುವಾದ.

ದಳು—"ವಿಶ್ವದ ಈ ಎಲ್ಲ ಆಗು ಹೋಗುಗಳನ್ನು ಅರ್ಥಮಾಡಿಕೊಳ್ಳಲು ಇರುವ ಒಂದೇ ಒಂದು ದಾರಿ ಇದೇ!—ಜೀವನಕ್ಕೆ ಒಂದು ನಿಶ್ಚಿತವಾದ ಉದ್ದೇಶವಿದೆ. ಎಂಬುದನ್ನು ನಂಬುವುದು. ಆಗ ನಮ್ಮ ಮುಂದಿನ ದಾರಿ ನಿರಾತಂಕ!"

ಅಕ್ಕನ ಅಂತ್ಯಕ್ರಿಯೆಯ ದಿನ ಚರ್ಚಿನ ಮಬ್ಬುಗಟ್ಟಿದ ನಿಸ್ತಬ್ಧತೆಯಲ್ಲಿ ಕುಳಿತಿದ್ದಾಗ ಸತ್ಯವು ನನ್ನನ್ನು ಕುಟುಕಿತು. ಜೂಲಿಯಾಳ ದೀರ್ಘ ಕೇಶರಾಶಿಗಾಗಿ ನನಗೆ ಮತ್ಸರ ವಿರಲಿಲ್ಲ. ಅವಳ ನಿಷ್ಕಪಟ ಮಂದಹಾಸ, ಅವಳ ಹಲವಾರು ಗೆಳೆಯ ಗೆಳತಿಯರು, ಇವಾವುದಕ್ಕೂ ನಾನು ಅಸೂಯೆ ಪಡುತ್ತಿರಲಿಲ್ಲ. ನಾನು ಕರುಬುತ್ತಿದ್ದುದು ಯಾರಿಂದಲೂ ಕದಲಿಸಲಾಗದ ಅವಳ ದೃಢ ವಿಶ್ವಾಸಕ್ಕೆ! ಅವಳ ಪಾರ್ಥಿವ ಶರೀರವನ್ನು ಮಣ್ಣೊಳಗೆ ಹೂಳುತ್ತಿದ್ದಂತೆ ಪಶ್ಚಾತ್ತಾಪದ, ಅಪರಾಧಿ ಪ್ರಜ್ಞೆಯ ಮಡುವಿನಲ್ಲಿ ಮುಳುಗಿ ಕರಗಿಹೋದೆ.

ಕೆಲವರು ಕಳವಳದಿಂದ ಧೃತಿಗೆಟ್ಟಾಗ ಮನಶಾಸ್ತ್ರಜ್ಞರ ಬಳಿಗೆ ಹೋಗುತ್ತಾರೆ. ಇನ್ನು ಕೆಲವರು 'ಬಾರ್'ಗೆ ಅರ್ಥಾತ್ ಕುಡಿತಕ್ಕೆ ಶರಣಾಗುತ್ತಾರೆ. ಮತ್ತೆ ಕೆಲವರು ಧರ್ಮ ಗುರುಗಳನ್ನು ಆಶ್ರಯಿಸುತ್ತಾರೆ. ಆದರೆ ನಾನು ಮನಶ್ಶಾಂತಿಯನ್ನು ಅರಸಲು ಲೈಬ್ರರಿಗೆ ಹೋಗುತ್ತೇನೆ. ನನ್ನ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಪುಸ್ತಕಗಳ ಸಾಲುಗಳ ಮೇಲೆ ಕಣ್ಣಾಡಿಸುತ್ತಾ ಹೋದೆ. ನನ್ನ ಆತ್ಮಗ್ಲಾನಿಯನ್ನು ದೂರಗೊಳಿಸಲು ಏನಾದರೂ ಸಿಗುವುದೇ? ಅಲ್ಲೊಂದು ಬಿಳಿಹೊದಿಕೆಯ ಪುಸ್ತಕ. ಬಂಗಾರದ ಬಣ್ಣದ ಅಕ್ಷರಗಳಲ್ಲಿ ಹೊದಿಕೆಯ ಮೇಲೆ ಬರೆಯಲಾಗಿತ್ತು. 'ವಾಟ್ ಈಸ್ ವರ್ತ್‌ವೈಲ್?' ಅದೊಂದು ತೆಳುವಾದ ಪುಸ್ತಕ. ಅದರ ಗ್ರಂಥ ಕರ್ತೆ 'ಅನ್ನಾ ರಾಬರ್ಟ್‌ಸನ್ ಬ್ರೌನ್.' ಹಲವು ಕಾಲದಿಂದ ಮರತೇಬಿಟ್ಟ ಹೆಸರು. ಅಂದು ಅವಳನ್ನು ಹುಡುಕಿ ತೆಗೆದಿದ್ದೆ ನಾನು! ೧೮೮೦ರಲ್ಲಿ ಇದೇ ವಿಶ್ವವಿದ್ಯಾಲಯದಲ್ಲಿ ಉಚ್ಚ ಶಿಕ್ಷಣ ಪಡೆದು ಪದವೀಧರೆಯಾಗಿದ್ದವಳು. ಆ ಪುಸ್ತಕದ ಒಳಗೆ, ಸಮಾಚಾರ ಪತ್ರಿಕೆಯ ಒಂದು ಚಿಕ್ಕ ತುಣುಕನ್ನು ಕತ್ತರಿಸಿ ಹೊಲಿದಿಡಲಾಗಿತ್ತು. ಅದು ೧೯೩೮ರ ಸುದ್ದಿಯ ಚಿಕ್ಕಚೂರು. ಅದರಲ್ಲಿ—ಅನ್ನಾಳ ನಿಧನದ ಬಗ್ಗೆ ಶ್ರದ್ಧಾಂಜಲಿ ಸಲ್ಲಿಸಿ, ಆಕೆಯ 'ವಾಟ್ ಈಸ್ ವರ್ತ್‌ವೈಲ್' ಎಂಬ ಪುಸ್ತಕವು ಆಧ್ಯಾತ್ಮ ಚಿಂತನೆಗೆ ಪ್ರಚೋದನೆ ನೀಡಬಲ್ಲುದೆಂದು ವರ್ಣಿಸಲಾಗಿತ್ತು.

(ಈ ಪುಸ್ತಕ ಜಪಾನೀ ಭಾಷೆಗೆ ತರ್ಜುಮೆಗೊಂಡು ಎಪ್ಪತ್ತಮೂರು ಬಾರಿ ಪುನರ್ ಮುದ್ರಣಗೊಂಡಿತ್ತು. ಅರುವತ್ತೇಳು ವರ್ಷ ಪದೇ ಪದೇ ಮುದ್ರಣ ನಡೆಯುತ್ತಲೇ ಇತ್ತು!)

ಅಂಥ ವಿನೀತ ಗಾಂಭೀರ್ಯದ ಪುಸ್ತಕ ಅತ್ಯಂತ ಜನಪ್ರಿಯವಾಯಿತೇಕೆ? ೧೮೯೦ರ ಭಾವಾತಿರೇಕತೆಯು ಇಂದೂ ಪ್ರಸ್ತುತವಾಗಲು ಸಾಧ್ಯವಾದೀತೇ? ಎರಡೆರಡು ಬಾರಿ ವಿಶ್ವಸಮರದ ಮಹಾ ಅಗ್ನಿಕುಂಡದಲ್ಲಿ ಕುದಿದು ಬತ್ತಿ ಕಾಠಿಣ್ಯ ಹೊಂದಿದ, ೧೯೫೦ರ ದಶಕದ ಭೌತಿಕವಾದದ ಜತೆ ಉಸಿರೆತ್ತಲು ಕೂಡ ಈ ಭಾವತರಂಗಿಣಿಗೆ ಸಾಧ್ಯವಿದೆಯೇ?

ಪ್ರೆಸಬಿಟೇರಿಯನ್ ಮೂಲದ, ಧರ್ಮಗುರುವಿನ ಪುತ್ರಿ ಅನ್ನಾ, ಪೆನ್ಸಿಲ್ವೇನಿಯದ

ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ಮೊದಲ ಮಹಿಳೆ. ಪ್ರಥಮ ವರ್ಗದ ವಿದುಷಿ. ಆಕ್ಸ್‌ಫರ್ಡ್ ಮತ್ತು 'ಕಾಲೇಜ್ ಡಿ ಫ್ರಾನ್ಸ್' ನಂಥ ಉಚ್ಚಶ್ರೇಣಿಯ ಮಹಾ ವಿದ್ಯಾಲಯಗಳಲ್ಲಿ ಪದವಿಪಡೆದು ಕೊಂಡ ಹತ್ತೊಂಬತ್ತನೆಯ ಶತಮಾನದ ಏಕೈಕ ವಿದ್ಯಾರ್ಥಿನಿ ಅನ್ನಾ. ಆ ಕಾಲದಲ್ಲಿ ಸ್ತ್ರೀಯೊಬ್ಬಳು ಇಂಥ ಶ್ರೇಷ್ಠ ಪದವಿಗಳಿಸು ವುದು ಒಂದು ಸಾಹಸ ಕಾರ್ಯವೇ ಸರಿ.

ಕ್ರಿ.ಶ. ೧೮೮೬ರಲ್ಲಿ ಅನ್ನಾ ರಾಬರ್ಟ್ ಸನ್ ಬ್ರೌನ್ ಡಾಕ್ಟರ್ ಸಾಮ್ಯುಎಲ್ ಮೆಕ್ಯೂಸ್ ಲಿಂಡ್ಸೇಯನ್ನು ಮದುವೆ ಯಾದಳು. 'ಪೋಅರ್ಟೋರಿಕೋ' ಎಂಬಲ್ಲಿ ಡಾ|| ಸಾಮ್ಯುಎಲ್ ಶಿಕ್ಷಣ ಇಲಾಖೆಯ ಪ್ರಧಾನ ಅಧಿಕಾರಿಯಾಗಿದ್ದ ಮುಂದೆ ಆತ ಕೊಲಂಬಿಯ ವಿಶ್ವವಿದ್ಯಾಲಯದ ಪ್ರಖ್ಯಾತ ಸಮಾಜಶಾಸ್ತ್ರ ಶಿಕ್ಷಕನಾದ. ಅಲ್ಲಿಂದ ಮತ್ತೆ ಅನ್ನಾ ಮತ್ತು ಸ್ಯಾಮ್ಯುಎಲ್ ಜತೆಯಾಗಿ ವಿಶ್ವಪರ್ಯ ಟನೆ ಮಾಡಿದರು. 'ಜೀವನ ಪರ್ಯಂತ ನಾನೊಬ್ಬ ವಿದ್ಯಾರ್ಥಿನಿ. ಈ ವಿಶ್ವದ ನಿಯಮಗಳೇನೆಂದು ಹುಡುಕುವ, ಸತತ ಪ್ರಯತ್ನಿಸುವ, ವಿದ್ಯಾರ್ಥಿ ನಾನು' ಅನ್ನಾ ತನ್ನ ಬಗ್ಗೆ ಹೇಳುತ್ತಿದ್ದಳು. ಆಕೆ ಮೂವರು ಮಕ್ಕಳನ್ನು ಪಡೆದಳು. ೩೪ ಪುಸ್ತಕಗಳನ್ನು ಬರೆದಳು. ತನ್ನ ೮೪ನೇ ವಯಸ್ಸಿನಲ್ಲಿ ಮರಣವನ್ನಪ್ಪಿದಳು.

ಗ್ರಂಥಾಲಯದ ಉದ್ಯಾನದಲ್ಲಿ ನಿಶ್ಶಬ್ಧ ವಾಗಿದ್ದೊಂದು ಮೂಲೆಯಲ್ಲಿ ಕುಳಿತೆ. ಅನ್ನಾಳ ಪ್ರಥಮ ವಾಕ್ಯಗಳು ನನ್ನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದುವು. "ಬದುಕಲು ಕೇವಲ ಒಂದೇ ಒಂದು ಜೀವನಾವಕಾಶ! ನಾವೆಲ್ಲ ಈ ಸಣ್ಣ ಜೀವನ ದಲ್ಲೇ ಅತಿಹೆಚ್ಚು ಪಡೆಯಲು ಬಯಸುತ್ತಿರು ತ್ತೇವೆ. ನಮಗಿರುವ ಸೀಮಿತ ಸಾಮರ್ಥ್ಯ ದಲ್ಲಿ ಆ ಹೆಚ್ಚಿನದನ್ನು ಹೊಂದಲು ಹೇಗೆ ಸಾಧ್ಯ? ನಿಜವಾದ ಶಾಶ್ವತವಾದ ಸಂಪತ್ತು ಯಾವುದು?"

ಈಕೆ ನನಗಾಗಿಯೇ ಇವನ್ನಿಲ್ಲಿ ಬರೆದಿಟ್ಟಿ ದ್ದಾಳೆ! ಇದೇ ಪ್ರಶ್ನೆಗಳನ್ನು ಪ್ರತಿದಿನ ನನಗೆ ನಾನೇ ಕೇಳಿಕೊಳ್ಳಬೇಕಾಗಿತ್ತು. ಆದರೆ ನಾನು?

ನನ್ನ ಸೋದರಿಯಂತೆ ಅನ್ನಾ ಆಸ್ತಿಕ ಳಾಗಿದ್ದಳು. "ಜೀವನವನ್ನು ಸಮಗ್ರ ವಾಗಿ ಅರ್ಥಮಾಡಿಕೊಳ್ಳಲು, ಸ್ವಾಧೀನ ಪಡಿಸಿಕೊಳ್ಳಲು ನಮ್ಮಿಂದ ಸಾಧ್ಯವಾಗದು. ಆದರೆ, ಈ ರೀತಿ ನಮ್ಮ ಪ್ರಯತ್ನ ಮುಂದು ವರಿಸಬಹುದು. ಇಲ್ಲೊಂದು ಸರಳವಾದ ಮಾರ್ಗವಿದೆ. ಸತ್ವಯುತವಾದುದು ಯಾವುದು? ಯಾವುದನ್ನು ನಾವು ಧಾರಾಳ ಮನಸ್ಸಿನಿಂದ ಬಿಟ್ಟುಕೊಡಬಹುದು? ಯಾವುದನ್ನು ಬಿಟ್ಟು ಬಿಟ್ಟರೆ ನಮಗೆ ಲಾಭ? ಯಾವುದನ್ನು ಜೀವನದ ಪರಮ ಸಿದ್ಧಿ ಎನ್ನೋಣ? ಅನಂತತೆಯೆಡೆಗೆ ಸಾಗುವ ನಮ್ಮೊಡನೆ ಬರುವ ಸಂಪತ್ತು ಯಾವುದು?

ಅನ್ನಾಳ ಪುಸ್ತಕವನ್ನು ಓದುತ್ತಿದ್ದಂತೆ ಸ್ವರ್ಗೀಯ ಸೌಂದರ್ಯವು ನಮ್ಮ ಕಣ್ಣೆದುರು ತೆರೆದುಕೊಳ್ಳುತ್ತದೆ. ಜೀವನದ ಮೌಲ್ಯಗಳನ್ನವಳು ತನ್ನದೇ ಅಲೌಕಿಕ ಮಾನದಂಡದಿಂದ ಅಳೆಯುತ್ತಾಳೆ. 'ಇದು ಸತ್ಯ', 'ಇದು ವ್ಯರ್ಥ' ಎಂದು ಆಕೆಯದೇ ವಿಚಾರಗಳಿಂದ ನಮ್ಮನ್ನೂ ಚಿಂತನೆಗೊಳಪಡಿಸುತ್ತಾಳೆ. ತನ್ನ ವಿಚಾರ

ಗಳನ್ನು ಅನುಸರಿಸುವುದು ನಿಮಗೆ ಕಠಿಣ ವೆನಿಸಿದರೆ, ಈ ನಾಲ್ಕು ವಿಧಾನಗಳನ್ನು ಅನುಸರಿಸಬಹುದು.

೧ ನೆಪ ಹೇಳಿ ತಪ್ಪಿಸಿಕೊಳ್ಳುವುದನ್ನು ಬಿಟ್ಟು ಬಿಡಿರಿ. ಅನಂತವಾದ ಅಮರತ್ವವು ಠಕ್ಕರಿಗೆ ದಕ್ಕಲಾರದು.

೨ ಕಳವಳವನ್ನು ಬಿಟ್ಟು ಬಿಡಿ. ಅದೂರದರ್ಶಿತ್ವವೇ ಕಳವಳ! ಕ್ಷುಲ್ಲಕ ವಿಷಯುಗಳಲ್ಲಿ ತಡಕಾಡುವುದು; ಅವುಗಳು ಮಹತ್ವಪೂರ್ಣವೆಂದು ಭ್ರಮಿಸುವುದು; ಇವೇ ಕಳವಳಕ್ಕೆ ಕಾರಣ.

೩ ಅತೃಪ್ತಿಯನ್ನು ಹೋಗಲಾಡಿಸಿ, ನಿಮಗೆ ಎಂಥ ಜೀವನ ದೊರಕಿದೆಯೋ, ಅದರಲ್ಲೇ ಸಾಹಸದಿಂದ ಜೀವಿಸಿ.

೪ ಸ್ವಾರ್ಥ ಸಾಧನೆಯನ್ನು ಬಿಟ್ಟು ಬಿಡಿ. ಅಮರ ಜೀವನದಲ್ಲಿ ನನ್ನದು, ನಿನ್ನದು, ಯಾವುದೂ ಇಲ್ಲ, ಎಲ್ಲವೂ ಎಲ್ಲರದು.

ಅನ್ನಾ, ಬದುಕಿನ ಇನ್ನೊಂದು ಮುಖವನ್ನೂ ಪರೀಕ್ಷೆಗೊಳಪಡಿಸದಿರುವುದಿಲ್ಲ. ಯಾವ ವಸ್ತು, ವಿಷಯುಗಳನ್ನು, ನಾವು ನಿಮಗಾಗಿ ಇಟ್ಟುಕೊಂಡಿರಬೇಕು. ಉಪಯೋಗಿಸಬೇಕು, ರಕ್ಷಿಸಬೇಕು? ಅವಳ ಅಭಿಪ್ರಾಯದಲ್ಲಿ "ಎಂಟು ಧಾರಣೆಗಳು ಜೀವನವನ್ನು ಎತ್ತರಿಸಲು ಸಾಕಾಗುತ್ತವೆ." ಅನ್ನಾ ಬರೆಯುತ್ತಾಳೆ.—

೧ ಬುದ್ಧಿವಂತಿಕೆಯಿಂದ ಸಮಯವನ್ನು ಉಪಯೋಗಿಸಿರಿ. "ನಾವೆಷ್ಟು ಕಾಲ ಬದುಕುವೆವು? ಎಂಬ ಪ್ರಶ್ನೆ ಮುಖ್ಯವಲ್ಲ. ಪ್ರಶ್ನೆ ಇರುವುದು, ಅರ್ಥವಿರುವುದು,–ಬಾಳಿನಲ್ಲಿ ನಾವೇನು ಮಾಡುವೆವು ಎಂಬುದರಲ್ಲಿ.

೨ ಕೆಲಸಕ್ಕೆ ಮಹತ್ವ ನೀಡಿ. ಅಂದರೆ ಆದರರ್ಥ ಯಾವುದೋ ಒಂದು ಕೆಲಸವಲ್ಲ. ನಿಮಗೆ ನೀವೇ ಪ್ರಶ್ನಿಸಿಕೊಳ್ಳಿ.–ನಾನು ಮಾಡುತ್ತಿರುವ ಕೆಲಸ ಜೀವನಕ್ಕೆ ಅಗತ್ಯವೇ? ಈ ಕೆಲಸದಿಂದ ನನ್ನ ಮನಶ್ಶಕ್ತಿ ಹೆಚ್ಚುವುದೇ? ಅಥವಾ ಇತರರಿಗೆ ಪ್ರೇರಣೆ ನೀಡಬಲ್ಲುದೇ? ಈ ಜಗತ್ತಿಗೆ ನನ್ನ ಈ ಕಾರ್ಯದಿಂದ ಕಿಂಚಿತ್ತಾದರೂ ಪ್ರಯೋಜನವಿದೆಯೇ?

೩ ಪ್ರತಿದಿನ ಆನಂದವ ಅನ್ವೇಷಣೆ ಮಾಡಿರಿ–ಇಂದು ನೀವು ಸಂತೋಷದಿಂದ ಇರಲಾರಿರೆಂದರೆ ನೀವು ಮುಂದೆಂದೂ ಆನಂದವನ್ನು ಹೊಂದಲಾರಿರಿ. ನಮ್ಮ ಕೈಗೆಟಕುವುದು 'ಇಂದು' ಹೊರತು ನಾಳೆಗಳಲ್ಲ. ಶಾಂತವಾಗಿರಲು ಶ್ರಮಿಸಿರಿ. ನಿಸ್ವಾರ್ಥಿಯಾಗಿರಿ. ಸದುದ್ದೇಶದಿಂದ ದುಡಿಯಿರಿ. ಶಕ್ತಿಶಾಲಿಗಳಾಗಿರಿ. ಬಲವುಳ್ಳವರಾಗಿರಿ. ಅತ್ಯಾಸಕ್ತಿಯಿಂದ ಪೂರ್ಣ ಮನಸ್ಸಿನಿಂದ, ಪೂರ್ಣ ಸಾಮರ್ಥ್ಯವನ್ನುಪಯೋಗಿಸಿ ಕೆಲಸ ಮಾಡಿ. ಕೃತಜ್ಞತಾ ಭಾವದಿಂದ ಕೆಲಸ ಮಾಡಿರಿ. ಈ ಭೂಮಿಯ ಮೇಲೆ ಬಾಳಲು ನಮಗೆಷ್ಟು ಅವಕಾಶ ಸಿಕ್ಕಿದೆ-ಅಷ್ಟಾದರೂ ಕಾಲ ಆನಂದದಿಂದಿರಿ.

೪ ಪ್ರೀತಿಯನ್ನು ಬೆಳೆಸಿರಿ, ನಿಜವಾದ ಪ್ರೇಮ ಎಂದೂ ಕ್ಲೇಷ ನೀಡದು. ಪ್ರೇಮ ವಿಶ್ವಾಸ ಗಳಿಸಿಕೊಡು ವುದು. ಪ್ರೇಮಕ್ಕೆ ಕಾಲದ ಬಂಧನ ವಿಲ್ಲ. ಅಮರತ್ವ ಪಡೆಯಲು ಪ್ರೇಮ ಅಡ್ಡಿಯಾಗುವುದೂ ಇಲ್ಲ. ಪ್ರೀತಿ ಯನ್ನು ಬಂಧಿಸಿಡಬೇಡಿರಿ. ಎಲ್ಲರಿಗೂ ಹಂಚಿರಿ.

೫ ನಿಮ್ಮ ಮಹತ್ವಾಕಾಂಕ್ಷೆಯನ್ನು ಅಂಕೆಯಲ್ಲಿರಿಸಿಕೊಳ್ಳಿರಿ. ಅವುಗಳು ಮಿತಿಯಲ್ಲಿರಲಿ. ಸಾಮಾನ್ಯ ವಾದ ಮಾನುಷ ಆಸಕ್ತಿಗಳಿಗೆ ಬೌದ್ಧಿಕ ಆಸಕ್ತಿಗಳನ್ನು ಹೋಲಿ ಸುವ ಅಥವಾ ಸಮಾನವೆಂದು ಭಾವಿಸುವ ಅಪಾಯಕಾರೀ ಕೆಲಸ ಮಾಡದಿರಿ. ಭೌತಿಕ ಆಕಾಂಕ್ಷೆಗಳು ನಮ್ಮ ಜೀವಿತೋದ್ದೇಶದ ಕೇವಲ ಒಂದಂಶವೆಂದು ಮನದಟ್ಟುಮಾಡಿ ಕೊಂಡು ಬಾಳಿರಿ.

೬ ಗೆಳೆತನವನ್ನು ಆಲಂಗಿಸಿರಿ. ನಿಜವಾದ ಗೆಳೆಯನಾಗಿರಲು ಕಂಕಣ ಬದ್ಧ ರಾಗಿರಿ. ನಿಜವಾದ ಗೆಳೆಯನಾಗಲು ಆತ ಮಹಾನ್ ಆತ್ಮವಾಗಬೇಕು. ಇತರರ ದೋಷಗಳನ್ನಾತ ಕ್ಷಮಿಸ ಬೇಕು. ಇತರರ ತಪ್ಪುಗಳನ್ನು ಮರೆಯಬೇಕು. ಗೆಳೆಯರಿಂದಾದ ತೊಂದರೆಗಳನ್ನು ತಾಳಿಕೊಳ್ಳಬೇಕು.

೭ ಎಂದಿಗೂ ದುಃಖಕ್ಕೆ ಭಯ ಪಡ ಬೇಡಿರಿ. ಆಶಾಭಂಗ, ನಿರಾಶೆಗಳು ಎಲ್ಲರಿಗೂ ಜೀವನದಲ್ಲಿ ಇದ್ದದ್ದೇ. ಅವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯ ವಿಲ್ಲ. ನೋವು ಒಂದು ಸಾಮಾನ್ಯ ಸಂಗತಿ. ದುಃಖ ನಮಗೊಬ್ಬರಿಗೆ ಮಾತ್ರವೇ ಎಂದು ಭಾವಿಸದಿರಿ. ಆನಂದದ, ಪ್ರೇಮದ, ವಾತ್ಸಲ್ಯದ ಅರ್ಥ ನಮಗಾಗಲೆಂದೆ, ನಮಗೆ ದುಃಖ, ನೋವುಗಳು ಬರುತ್ತವೆ. ದುಃಖವನ್ನನುಭವಿಸಿ, ಬಳಲಿ, ಅತ್ತು ಕರೆದು ನಲುಗಿದ ಮೇಲೆಯೇ ನಮಗೆ ಸುಖದ ಬೆಲೆ, ಪ್ರೀತಿಯ ಸವಿ, ಅನುಭವ ವೇದ್ಯವಾದೀತು.

೮ ಆಸ್ತಿಕತೆಯನ್ನು ಬೆಳೆಸಿಕೊಳ್ಳಿರಿ– ಸ್ಥಿರವಾದ, ಅಕ್ಷುಬ್ಧವಾದ, ಪ್ರಬಲ ನಂಬಿಕೆ ಬೆಳೆಸಿಕೊಳ್ಳಿ. ಭಗವಂತನ ಅಮಿತವಾದ, ಅನಂತವಾದ ಪ್ರೇಮದ ಮೇಲೆ–ಅಕ್ಷಯವಾದ, ಎಂದಿಗೂ ಬತ್ತಿ ಹೋಗದ ವಿಶ್ವಾಸ ವನ್ನು ಬೆಳೆಸಿಕೊಳ್ಳಿ. ಒಂದಲ್ಲ ಒಂದು ದಿನ ನಾಶಹೊಂದುವ, ಕೇವಲ ತಾತ್ಕಾಲಿಕವಿರುವ ಈ ಜೀವ ನದ ಅಸ್ತಿತ್ವವು ಕೊನೆಗೊಳ್ಳುವ ಗಳಿಗೆಯನ್ನು ನಿರ್ಭಯವಾಗಿ ಎದುರಿ ಸಲು, ಅರ್ಥಾತ್ ಅಮರತ್ವದ ಪ್ರಾರಂಭವನ್ನು, ಆಗ ಸ್ವಾಗತಿಸಲು ಶಕ್ಯವಾದೀತು ಮತ್ತು ಭೂಮಿಯ ಮೇಲಿನ ಈ ಜೀವನವನ್ನು ಸಾರ್ಥಕ ವಾಗಿ ಬದುಕಲು, ಪರಿಣಾಮಕಾರಿ ಯಾಗಿ, ಸುಂದರವಾಗಿ ಬದುಕಲು, ನಾವು ಸಮರ್ಥರಾದೇವು."—

ನಾನು ಪುಸ್ತಕವನ್ನು ಕೆಳಗಿಟ್ಟು, ಸುತ್ತೆಲ್ಲ ನೋಡಿದೆ. ಉದ್ಯಾನವು ನಿರ್ಜನವಾಗಿತ್ತು. ಅನ್ನಾಳ ಬಗ್ಗೆ, ಸೋದರಿ ಜೂಲಿಯಾಳ

ಬಗ್ಗೆ ಯೋಚಿಸುತ್ತಾ ಹೆಜ್ಜೆಹಾಕಿದೆ. ನಂಬಿಕೆ ಅವರಿಬ್ಬರ ಉಸಿರಾಗಿತ್ತು. ಉಸಿರಿನಷ್ಟೇ ಸಹಜವಾಗಿತ್ತು. ಅವರ ಹೃದಯದೊಳಗಿನ ಹೃದಯದಲ್ಲಿ ಜೀವಾತ್ಮ ಅಮರವಾದ್ದು, ಅವಿನಾಶಿಯಾದ್ದು ಎಂದು ತಿಳಿದಿದ್ದರು. ನನ್ನಲ್ಲಿ ಅಂಥದೃಢ ವಿಶ್ವಾಸದ ಕೊರತೆ ಇದೆ. ನನ್ನ ಹೃದಯಾಂತರಂಗದ ಕೇಂದ್ರ ಬಿಂದುವಿನಲ್ಲಿ ಅಂಥ ನಂಬುಗೆ ತುಂಬಲು ಅಸಮರ್ಥಗಳಾಗಿದ್ದೇನೆ. ಆದರೂ ಇಂದಿನ ನನ್ನೀ ಅಂತರಂಗ ಪರೀಕ್ಷೆಯಲ್ಲಿ ಸ್ವಲ್ಪಮಟ್ಟಿನ ಸಮಾಧಾನವನ್ನು ಕಂಡುಕೊಂಡೆ. ಕವಯಿತ್ರಿ 'ಎಮಿಲಿ ಡಿಕೆನ್‌ಸನ್' ಹೇಳುವಂತೆ, "ಸಂಭವನೀಯತೆಯಲ್ಲಿ ನನ್ನ ವಿಶ್ವಾಸವನ್ನು ನೆಲೆಗೊಳಿಸಬಲ್ಲೆ."

ಅನ್ನಾ ಮತ್ತು ಜೂಲಿಯಾರಂತಹ ಆಸ್ತಿಕರು ಮರಣವು ಒಂದು ಸ್ವಾಭಾವಿಕ ಕ್ರಿಯೆಯೆಂದು, ಜೀವಾತ್ಮದ ಒಂದು 'ದೊಡ್ಡ ಹೆಜ್ಜೆ' ಎಂದು ಒಂದು 'ಉಡ್ಡಯನ'ವೆಂದು ಭಾವಿಸಬಹುದು. ಏಕೆಂದರೆ, ಜೀವನಕ್ಕೊಂದು ಉದ್ದೇಶವಿದೆ, ಒಂದು ಅರ್ಥವಿದೆ ಎಂಬ ಬಗ್ಗೆ ಅವರಲ್ಲಿ ಕಿಂಚಿತ್ತಾದರೂ ಸಂದೇಹವಿಲ್ಲ. ಅವರಿಬ್ಬರ ಜೀವನವನ್ನು ಎಳೆ ಎಳೆಯಾಗಿ ಬಿಡಿಸಿ ಎಳೆದೆಳೆದು ನೋಡುತ್ತಿದ್ದಂತೆ, ನನ್ನ ಚೂರು ಚೂರಾದ ಹೃದಯವು ಸೇರಿಕೊಳ್ಳುವಂತೆನಿಸುತ್ತಿದೆ. ನಾನು ಕೇಂದ್ರೀಕೃತಳಾಗುತ್ತಿದ್ದೇನೆ. ಅಲ್ಲೋಲ ಕಲ್ಲೋಲಗಳು ಕಡಿಮೆಯಾಗುತ್ತಿವೆ. ಶಾಂತಳಾಗುತ್ತಿದ್ದೇನೆ. ಅಪೂರ್ವವಾದ ಶಾಂತಿ! ಒಂದು ಶತಮಾನದ ಆಚೆಯ ಕಾಲದ ಕಡಲೊಳಗಿಂದ ಅನ್ನಾ ಕರೆಯುತ್ತಿದ್ದಾಳೆ ನನ್ನನ್ನು–ತಿಳಿವಂತೆ, ತಿಳಿವು ಮೂಡುವಂತೆ ಹೇಳುತ್ತಿದ್ದಾಳೆ–ಪ್ರತಿಯೊಂದು ದಿನವೂ ನನಗೆ ನಾನೇ ಪ್ರಶ್ನಿಸಿಕೊಳ್ಳಲು ತಿಳಿಸುತ್ತಿದ್ದಾಳೆ. ಯಾವುದು ಮೌಲಿಕವಾದ್ದು ? ಯಾವುದು ನಮಗೆ ಶ್ರೇಯಸ್ಕರವಾದ್ದು ? ಪ್ರತ್ಯಕ್ಷವಾಗಿದ್ದರೂ, ನಮ್ಮ ಕಣ್ಣಿಗೆ ನಮ್ಮ ಬುದ್ಧಿಗೆ ಅಗೋಚರವಾಗಿರುವುದು ಯಾವುದು? ಆದರೆಡೆಗೆ, ನಮ್ಮ ಮನಃಚಕ್ಷುಗಳನ್ನು ಕೇಂದ್ರೀಕರಿಸಲು ತಿಳಿಸುತ್ತಿದ್ದಾಳೆ. ಯಾವುದು ಮರಣೋತ್ತರದ ಅವ್ಯಕ್ತದಲ್ಲಿ ನಿಷ್ಪ್ರಯೋಜಕವೋ, ಅವುಗಳನ್ನೆಲ್ಲಾ ತ್ಯಾಗ ಮಾಡಲು ತಿಳಿಸುತ್ತಿದ್ದಾಳೆ. ನನ್ನ ಅಕ್ಕ ಕೈ ಬೀಸಿ ಕರೆದಂತೆ ಭಾಸವಾಗುತ್ತಿದೆ. ಅನ್ನಾ ಜೂಲಿಯಾರ ಪ್ರಭಾ ವಲಯದಲ್ಲಿ ಅನಿರ್ವಚನೀಯ ಶಾಂತಿ ನನ್ನನ್ನು ಆವರಿಸುತ್ತಿದೆ. "ಮರಣೋತ್ತರದಲ್ಲಿ ಅಮರ ಜೀವನವಿದೆ! ಅದೋ ಮುನ್ನಡೆ! ನೋಡು ನಿನ್ನ ದಾರಿ ಎಷ್ಟೊಂದು ಪ್ರಕಾಶಮಯವಾಗಿದೆ. ನಿನಗಾವ ಸಂಶಯವೂ ಬೇಡವಿನ್ನು!

ಅಸೂಯೆಯ ಲೇಶವೂ ಮನಸ್ಸಿನೊಳಗಿರದವರೇ ಇಹಪರಗಳೆರಡರಲ್ಲೂ ಸುಖವನ್ನು ಹೊಂದುವರು.

—ಗೀತೆ

ಜೀವಾಣು ಯುದ್ಧದ ಪ್ರಯೋಗಾಲಯ ಗ್ರುನಿಯಾರ್ಡ್ ದ್ವೀಪ

ಡಾ|| ಕೆ. ಎಸ್. ಮಂಜ

ಕೊಲ್ಲಿ ಯುದ್ಧದ ಸಂದರ್ಭದಲ್ಲಿ ಇತ್ತೀಚೆಗೆ ಬ್ರಿಟಿಷ್ ಸರಕಾರ ಜೀವಾಣು ಯುದ್ಧದ ಪ್ರಯೋಗಾಲಯವಾದ ಗ್ರುನಿಯಾರ್ಡ್ ದ್ವೀಪವನ್ನು ಅದರ ಸ್ವಾಮಿತ್ವ ಪಡೆದ ವಾರಸುದಾರರಿಗೆ ವಾಪಸ್ಸು ಮಾಡಿದ ಕಥೆ ರೋಮಾಂಚಕವಾಗಿದೆ. ಈ ದ್ವೀಪ ಸ್ಕಾಟ್‌ಲೆಂಡಿನ ೫೭° ೫೭' ಉತ್ತರಕ್ಕೆ ಹಾಗೂ ೫° ೩೫' ಪಶ್ಚಿಮಕ್ಕೆ ಇದೆ. ಇದು ಸುಮಾರು ೨ ಕಿ. ಮೀ. ಉದ್ದ ಹಾಗೂ ೧ ಕಿ. ಮೀ. ಅಗಲವಿದ್ದು ಇವರ ವಿಸ್ತೀರ್ಣ ೫೨೨ ಎಕ್ರೆ ಇದೆ. ಸ್ಕಾಟ್‌ಲೆಂಡಿನ ಸಮುದ್ರದಿಂದ ಇದು ೧.೨ ಕಿ. ಮೀ ದೂರದಲ್ಲಿದೆ.

೧೮೮೧ರ ಅಂದಾಜಿಗೆ ಈ ದ್ವೀಪದಲ್ಲಿ ಬರೀ ಆರು ಜನರಿದ್ದು ಅವರ ಅವಶೇಷಗಳನ್ನು ಬಿದ್ದು ಹೋದ ಗುಡಿಸಿಲಿಂದ ತಿಳಿಯಬಹುದು. ಆದರೆ ೨೦ ನೇ ಶತಮಾನದಲ್ಲಿ ಇದನ್ನು ಬರೀ ಕುರಿಗಳ ಮೇವಿಗಾಗಿ ಅಥವಾ ಮೀನು ಹಿಡಿಯುವುದಕ್ಕಾಗಿ ಉಪಯೋಗಿಸಲಾಗುತ್ತಿತ್ತು. ೧೯೩೦ರ ಹೊತ್ತಿಗೆ ಬ್ರಿಟಿಷ್ ಸರಕಾರ ಜೀವಾಣು ಯುದ್ಧದ ಅನ್ವೇಷಣೆಗೆ ಹೊಂಚು ಹಾಕುತ್ತಿತ್ತು. ಮೊದಲನೆ ಮಹಾಯುದ್ಧ ಇದಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿತ್ತು. ಬ್ರಿಟಿಷ್ ರಾಜಕಾರಣಿಗಳು ಇದೇ ಸಂದರ್ಭದಲ್ಲಿ ತಮ್ಮಲ್ಲಿ ಸಾಕಷ್ಟು ಜೀವಾಣು ಯುದ್ಧದ ತಂತ್ರ ವಿದ್ಯೆಯನ್ನು ಶೇಖರಿಸಬೇಕೆಂದು ಕೋರಿದರು. ಇದಕ್ಕಾಗಿ ಮುಂದಿನ ದಶಕದಲ್ಲಿ ತುಂಬ ಗೋಪ್ಯವಾಗಿ ಜೀವವಿಜ್ಞಾನ ವಿಭಾಗ ಪೊರ್ಟೋನ್ ತನ್ನ ರಾಸಾಯನಿಕ ರಕ್ಷಾಪ್ರಯೋಗ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿ ಜೀವಾಣು ಯುದ್ಧದ ತಂತ್ರ ವಿದ್ಯೆಗೆ ಶಂಕುಸ್ಥಾಪನೆ ಮಾಡಿತು.

ಪೊರ್ಟೋನ್ ಮೊತ್ತಮೊದಲಿಗೆ ಅಪಾಯಕರವಲ್ಲದ ಜೀವಾಣುಗಳನ್ನು ಉಪಯೋಗಿಸಿ ತನ್ನ ಪ್ರಯೋಗವನ್ನು ಪ್ರಯೋಗ ಶಾಲೆಯಲ್ಲಿ ಪ್ರಾರಂಭಿಸಿತು. ಗಾಳಿಯಲ್ಲಿರಬಹುದಾದ ಜೀವಾಣುಗಳ

ಇದು ವೈದ್ಯಶ್ರೀ ಗ್ರಹಾಂ ಪಿಯರ್‌ಸನ್ ನಿರ್ದೇಶಕ ಸೂಕ್ಷ್ಮ ಜೀವಾಣು ಸಂಶೋಧನಾ ಸಂಸ್ಥಾನ ಇಂಗ್ಲೆಂಡ್ ಅವರು ಅಪ್ಲೈಡ್ ಸೈನ್ಸಸ್ ಅನಾಲಿಸಿಸ್ ಯು. ಎಸ್. ಎ. ಎಂಬ ವಾರ್ತಾ ಪತ್ರದಲ್ಲಿ ಬರೆದ ಪ್ರಬಂಧದ ಆಧಾರದ ಮೇಲಿದೆ.

ಸಂಖ್ಯೆ ಮತ್ತು ಅವುಗಳ ಪರಿಣಾಮಗಳ ಬಗ್ಗೆ ಸಾಕಷ್ಟು ಗಹನವಾಗಿ ಪ್ರಯೋಗಗಳನ್ನು ನಡೆಸಿ ೨೫೦ ಮೀಟರ್ ದೂರದಿಂದ ಹಾಕಬಹುದಾದ ಜೀವಾಣು ಬಾಂಬನ್ನು ನಿರ್ಮಿಸಿತು. ಇದರೊಂದಿಗೆ ಪ್ರಯೋಗಾಲಯದಲ್ಲಿ ಪ್ರಾಣಿಗಳನ್ನಿಟ್ಟು ಅವುಗಳ ಮೇಲೆ ಜೀವಾಣು ಬಾಂಬುಗಳಿಂದಾಗಬಹುದಾದ ಅಪಾಯಗಳನ್ನು ಕೂಲಂಕುಷವಾಗಿ ಅಭ್ಯಸಿಸಿತು. ಇದಕ್ಕಾಗಿ ಅಂತ್ರಾಕ್ಸ್ ಸ್ಪೋರುಗಳನ್ನು ಸಮೃದ್ಧವಾಗಿ ಬಳಸಿತು. ಈ ಜೀವಾಣುಗಳು ಮನುಷ್ಯ ಮತ್ತು ಪ್ರಾಣಿಗಳ ರಕ್ತದಲ್ಲಿ ಬಿಡುಮಾಡಿ ಒಮ್ಮಲೇ ಸಾವಿಗೆ ಕಾರಣವಾಗುತ್ತವೆ. ಹಾಗೂ ಈ ಬ್ಯಾಕ್ಟೀರಿಯ (ಜೀವಾಣುಗಳು) ವಾತಾವರಣದ ಯಾವ ಪರಿಸ್ಥಿತಿಯಲ್ಲಿಯೂ ಜೀವಂತವಾಗಿರುವ ಕ್ಷಮತೆಯನ್ನು ಹೊಂದಿದೆ. ೧೯೪೨ ರಲ್ಲಿ ಬ್ರಿಟನ್ನಿನ ಯುದ್ಧ ವಿಭಾಗ ಗ್ರುನಿಯಾರ್ಡ್ ದ್ವೀಪವನ್ನು ಜೀವಾಣು ಯುದ್ಧದ ಪ್ರಯೋಗಾಲಯವನ್ನಾಗಿ ಮಾಡಿತು. ಆ ಜಾಗವನ್ನು ಬರೇ ೫೦೦ ಪೌಂಡಿಗೆ ಮುಟ್ಟುಗೋಲು ಹಾಕಿ ನಿಷೇಧಿತ ಕ್ಷೇತ್ರವನ್ನಾಗಿ ಮಾಡಿತು ಆ ದ್ವೀಪ ಜೀವಾಣು ಯುದ್ಧದ ಕ್ಷೇತ್ರ ಪರೀಕ್ಷಣೆಗೆ ಅಳವಡಿಸಲಾಯಿತು. ಅದೇ ವರ್ಷದ ಮೇ ತಿಂಗಳಲ್ಲಿ ಬ್ರಿಟಿಷ್ ಸರಕಾರ ತನ್ನ ಜೀವಾಣು ಯುದ್ಧದ ಪ್ರಯೋಗ ಮೊದಲ ಬಾರಿಗೆ ಈ ದ್ವೀಪದಲ್ಲಿ ಅಂತ್ರಾಕ್ಸ್ ಸ್ಪೋರಿನೊಂದಿಗೆ (ನೆರಡಿ ಜೀವಕಣ) ಮಾಡಿತು. ೩೦ ಮತ್ತು ೪ ಪೌಂಡ್ ಭಾರದ ಜೀವಾಣು ಬಾಂಬಿನೊಂದಿಗೆ ಪ್ರಯೋಗ ಪ್ರಾರಂಭವಾಯಿತು. ಕಡಿಮೆ ಭಾರದ ಬಾಂಬನ್ನು ನೂರರ ಗುಂಪಿನಲ್ಲಿ ಅಳವಡಿಸಿ ಪ್ರಯೋಗ ನಡೆಸಲಾಗಿತ್ತು. ಎರಡನೇ ಯುದ್ಧದ ಸುಮಾರಿಗೆ ಬ್ರಿಟನ್ ಅಂತ್ರಾಕ್ಸ್ ಸ್ಪೋರ್ ಯುಕ್ತ ದನದ ಹಿಂಡಿಯನ್ನು ತಯಾರಿಸಿ ವಿಮಾನದಲ್ಲಿ ವೈರಿಗಳ ಸ್ಥಾನದಲ್ಲಿ ಅಂದರೆ ಜರ್ಮನಿಯಲ್ಲಿ ಹಾಕುವ ಹೊಂಚು ಹಾಕಿತ್ತು. ವೈರಿ ಪ್ರದೇಶದಲ್ಲಿ ಆ ಹಿಂಡಿಯನ್ನು ತಿಂದ ದನಕರುಗಳು ಸಾವಿಗೀಡಾಗಬಹುದಿತ್ತು. ಆ ಕಾಲದಲ್ಲಿ ಜೀವಾಣು ಯುದ್ಧ ಕ್ಷೇತ್ರದಲ್ಲಿ ಇದೊಂದು ಹೊಸ ತಂತ್ರವಿದ್ಯೆ. ಆದರೆ ಅಪಾಯಕರ ಜೀವಾಣುಯುಕ್ತ ಹಿಂಡಿಯನ್ನು ಪೋರ್ಟೋನ್ ಪ್ರಯೋಗ ಶಾಲೆಯಲ್ಲಿ ಶೇಖರಿಸಿಟ್ಟು ಎರಡನೇ ಮಹಾಯುದ್ಧದ ಅನಂತರ ನಾಶಮಾಡಲಾಗಿತ್ತು.

೧೯೪೫ ರಲ್ಲಿ ಮುಟ್ಟುಗೋಲು ಹಾಕಿದ ಆ ದ್ವೀಪದ ಸ್ವಾಮಿತ್ವ ಹೊಂದಿದ್ದ ಬ್ರಿಟನ್ನಿನ ಪ್ರಜೆಗಳು ದ್ವೀಪವನ್ನು ವಾಪಾಸು ಕೇಳಿದಾಗ ಬ್ರಿಟಿಷ್ ಸರಕಾರ ಹಿಂದೇಟು ಹಾಕಿತು. ಕಾರಣ ಅಲ್ಲಿ ಜೀವಾಣು ಯುದ್ಧ ಪ್ರಯೋಗಕ್ಕೆ ಉಪಯೋಗಿಸಿದ ಅಂತ್ರಾಕ್ಸ್ ಜೀವಾಣು ಜೀವಂತವಾಗಿದ್ದು ಮನುಷ್ಯರ ವಾಸಕ್ಕೆ ಅಪಾಯಕರವಾಗಿತ್ತು. ಈ ಜೀವಾಣುಗಳನ್ನು ನಿರ್ವಂಶಮಾಡದೇ ಆ ದ್ವೀಪವನ್ನು ಉಪಯೋಗಿಸುವಂತಿಲ್ಲ. ಆ ದ್ವೀಪವನ್ನು ಜೀವಾಣು ರಹಿತವಾಗಿ ಮಾಡಿದನಂತರ ಅದೇ ಜಾಗವನ್ನು ಮೊದಲು, ತೆತ್ತ ಬೆಲೆಗೆ ಆ ದ್ವೀಪದ ಉತ್ತರಾಧಿಕಾರಿಗಳಿಗೆ ಕೊಡುವುದಾಗಿ ಬ್ರಿಟಿಷ್ ಸರಕಾರ ಘೋಷಿಸಿತು. ೧೯೪೭ ರಿಂದ ಎರಡು ದಶಕಗಳ ಕಾಲ ಸೂಕ್ಷ್ಮ ಜೀವಾಣು ಸಂಶೋಧನಾ ಸಂಸ್ಥಾನ ಪ್ರೋರ್ಟೋನ್ ಡೌನ್ ಮಣ್ಣಿನಲ್ಲಿರಬಹುದಾಂತಹ ಅಪಾಯಕರ

ಜೀವಾಣುಗಳ ಬಗ್ಗೆ ಅಭ್ಯಸಿಸಿತು. ಆದರೆ ಅಲ್ಲಿ ಜೀವಾಣುಗಳು ನಾಶವಾದ ಯಾವ ಸೂಚನೆಯೂ ಕಂಡು ಬಂದಿಲ್ಲ.

೧೯೮೬ರಲ್ಲಿ ರಾಸಾಯನಿಕ ರಕ್ಷಾ ಸಂಸ್ಥಾನ ಅಪಾಯ ಜೀವಾಣುಗಳನ್ನು ದ್ವೀಪದಿಂದ ನಾಶಮಾಡುವ ಜವಾಬ್ದಾರಿಯನ್ನು ವಹಿಸಿತು. ಪರಿಷ್ಕೃತಸಂಶೋಧನಾ ಕ್ರಮದಿಂದ ಜೀವಾಣುಗಳನ್ನು ನಾಶಪಡಿಸುವ ಹಾಗೂ ಪರೀಕ್ಷಿಸುವ ಕ್ರಮಗಳನ್ನು ಅಳವಡಿಸಿ ಜೀವಾಣುಗಳಿರುವ ಕೆಲವೇ ಪಡೆಗಳಲ್ಲಿ ಹೆಚ್ಚಿನ ನಿಗಾ ಇಟ್ಟಿತು. ಬ್ರಿಟಿಷ್ ಸರಕಾರ ೧೯೮೫ರಲ್ಲಿ ರಕ್ಷಾ ಮಂತ್ರಾಲಯದ ಉಚ್ಚವಿಜ್ಞಾನ ಸಲಹಾಕಾರರೊಂದಿಗೆ ವಿಚಾರ ವಿನಿಮಯ ನಡೆಸಿ ಬೇರೇ ಒಂದು ಉಚ್ಚಮಟ್ಟದ ಸಹಕಾರ ಸಮಿತಿಯನ್ನು ನಿರ್ಮಿಸಿತು. ಇದು ಪ್ರಾಧ್ಯಾಪಕ ವೈದ್ಯಶ್ರೀ ಸ್ಟಿವರ್ಟ್‌ರ ನೇತೃತ್ವದಲ್ಲಿ ೫ ಮಂದಿಯ ಸಮಿತಿ ವಿಚಾರ ವಿಮರ್ಶೆ ನಡೆಸಿ, ಜೀವಾಣುರಹಿತ ಪ್ರದೇಶವನ್ನಾಗಿ ಮಾಡುವ ಕಾರ್ಯನಿರ್ವಹಣೆಯ ಕ್ರಮವನ್ನು ನಿರ್ಧರಿಸಿತು. ೫ ಪ್ರತಿಶತ ಫಾರ್ಮಾಲ್ ಡಿ ಹೈಡ್ ಸಮುದ್ರದ ನೀರಿನೊಂದಿಗೆ ಆ ಜಾಗದ ನೀರಾವರಿ ಮಾಡುವುದರಿಂದ ಅಪಾಯಕರ ಜೀವಾಣುಗಳನ್ನು ನಿರ್ನಾಮಮಾಡುವ ಸಫಲತೆಯನ್ನು ಕಂಡಿತ್ತು. ಮೊತ್ತಮೊದಲಿಗೆ ಗಿಡಗಳಿಗೆ ಬೆಂಕಿ ಹೊತ್ತಿಸಿ ಅದರ ತಾಪದಿಂದ ಜೀವಾಣುಗಳ ನಾಶವನ್ನು ಮಾಡಿ ಕೊನೆಗೆ ರಾಸಾಯನಿಕ ಪದಾರ್ಥಗಳನ್ನು ಉಪಯೋಗಿಸಿತು. ಪ್ರತೀ ಚದರ ಮೀಟರಿಗೆ ೫೦ ಲೀಟರ್ ಶೇಕಡಾ ೫ ಫಾರ್ಮಾಲ್ ಡಿ ಹೈಡ್ ಸಮುದ್ರದ ನೀರಿನೊಂದಿಗೆ ಸಿಂಪಡಿಸಿತು. ಒಂದು ವರ್ಷದ ನಂತರ ೧೩೦ ಜಾಗದಿಂದ ಮಣ್ಣನ್ನು ತೆಗೆದು ಅಪಾಯಕರ ಜೀವಾಣುಗಳಿಗಾಗಿ ವಿಶ್ಲೇಷಣೆ ನಡೆಸಲಾಯಿತು. ಈ ಕ್ರಮದಿಂದ ಬರೀ ಒಂದೆರಡು ಸ್ಥಳಗಳಲ್ಲಿ ಮಾತ್ರ ಅಂತ್ರಾಕ್ಸ್ ಜೀವಾಣುಗಳು ಕಂಡು ಬಂದವು. ೧೯೮೭ರಲ್ಲಿ ಯಾವ ಕ್ಷೇತ್ರದಲ್ಲೂ ಅಂತ್ರಾಕ್ಸ್ ಜೀವಾಣುಗಳು ಕಂಡು ಬಂದಿಲ್ಲ. ಅದೂ ಅಲ್ಲದೆ ಅಲ್ಲಿನ ಮೊಲಗಳ ರಕ್ತದಲ್ಲಿ ಅಂತ್ರಾಕ್ಸ್ ಆಂಟಿಬಾಡಿಗಳ ಪರೀಕ್ಷೆ ನಡೆಸಿದಾಗಲೂ ಜೀವಾಣುಗಳ ಇರುವಿಕೆಯ ಯಾವ ಪುರಾವೆಯೂ ಸಿಕ್ಕಿಲ್ಲ. ಮೊದಲಿಗೆ ೪೦ ಕುರಿಗಳನ್ನು ಅಲ್ಲಿಗೆ ಕಳುಹಿಸಿ ಪ್ರತೀ ತಿಂಗಳೂ ಆ ಕುರಿಗಳಲ್ಲಿ ರೋಗ ಲಕ್ಷಣಗಳಿವೆಯೊ ಎಂದು ಪರಿಶೋಧನೆ ಮಾಡಲಾಯಿತು. ಇದರ ಆಧಾರದ ಮೇಲೆ ಸಲಹಾಕಾರ ಸಮಿತಿ ತನ್ನ ಅಂತಿಮ ಸಲಹೆಯನ್ನು ೧೯೮೮ರಲ್ಲಿ ಈ ರೀತಿ ಕೊಟ್ಟಿತು. "ಗ್ರುನಿಯಾರ್ಡ್ ದ್ವೀಪದಲ್ಲಿ ಪ್ರಾಣಿಗಳಾಗಲೀ ಮನುಷ್ಯರಾಗಲೀ ಅಂತ್ರಾಕ್ಸ್‌ಗೆ ಗುರಿಯಾಗುವ ಯಾವ ಅಪಾಯವೂ ಇಲ್ಲ" ೧೯೯೦ರ ಮೇ ಒಂದರಂದು ಆ ದ್ವೀಪದ ಉತ್ತರಾಧಿಕಾರಿಗಳಿಗೆ ಮೊದಲು ತೆತ್ತ ೫೦೦ ಪೌಂಡಿಗೇ ಬ್ರಿಟಿಷ್ ಸರಕಾರ ವಾಪಾಸುಕೊಟ್ಟಿತು. ಸುಮಾರು ಅರ್ಧ ಶತಕಗಳ ಕಾಲ ಈ ದ್ವೀಪ ಜೀವಾಣು ಯುದ್ಧದ ಪರೀಕ್ಷೆಗಾಗಿ ಬ್ರಿಟಿಷ್ ಸರಕಾರದ ಸೂಕ್ಷ್ಮ ಜೀವಾಣು ಸಂಶೋಧನಾ ಸಂಸ್ಥಾನದ ವಶದಲ್ಲಿತ್ತು.

ಎರಡು ಹೆಣ್ಣು ಒಂದು ಗಂಡು

ಲೇ: ವಿಮಲ್ ಮಿತ್ರ ಅನು: ಡಿ. ಎನ್. ಶ್ರೀನಾಥ್

['ಎರಡು ಹೆಣ್ಣು ಒಂದು ಗಂಡು' ಮೂಲ ಬಂಗಾಳಿ ಕಾದಂಬರಿಯ ಕರ್ತೃ ಶ್ರೀ ವಿಮಲ್ ಮಿತ್ರ. ಇದನ್ನು ಕನ್ನಡಕ್ಕೆ ಅನುವಾದಿಸಿದವರು ಶ್ರೀ ಡಿ. ಎನ್. ಶ್ರೀನಾಥ್. ಈ ಮಿನಿ ಕಾದಂಬರಿಯ ಧಾರಾವಾಹಿ ಮೊದಲ ಕಂತು ಪುಸ್ತಕ ಪ್ರಪಂಚದ ೧೯೮೯ರ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟಗೊಂಡು, ಅನಿವಾರ್ಯ ಕಾರಣದಿಂದ ಮುಂದೆ ಪ್ರಕಟಿಸಲು ಸಾಧ್ಯವಾಗಲಿಲ್ಲ. ಈ ಸಂಚಿಕೆಯಿಂದ ಧಾರಾವಾಹಿಯಾಗಿ ಪ್ರಕಟಿಸುತ್ತಿದ್ದು, ಹಿಂದಿನ ಸಂಚಿಕೆಯ ಸಾರಾಂಶವನ್ನು ಕೊಡಲಾಗಿದೆ.]

—ಸಂ

ಇಲ್ಲಿಯವರೆಗೆ....

ಊರ್ಮಿಳಾ ಬಾಲಿಕಿಯರ ವಿದ್ಯಾಲಯದಲ್ಲಿ ಶಿಕ್ಷಕಿಯೊಬ್ಬಳ ನೇಮಕಾತಿಗಾಗಿ ಸಂದರ್ಶನ ನಡೆಯುತ್ತಿತ್ತು. ಶಾಲೆಯನ್ನು ನಡೆಸುತ್ತಿದ್ದ ಭುವನ ಬಾಬುಗಳು ತಮ್ಮ ಮಿತ್ರರಿಗೆ ಶಿಕ್ಷಕಿಯನ್ನು ಆರಿಸುವ ಹೊಣೆಯನ್ನು ವಹಿಸಿದ್ದರು. ಮಿತ್ರ ಸಂದರ್ಶನಕಾರರು ಭುವನ ಬಾಬುಗಳ ಇಚ್ಛೆಯಂತೆ 'ಓರ್ವ ವಿವಾಹಿತ ಮಹಿಳೆಯನ್ನು ಆರಿಸಬೇಕಿತ್ತು.

ಸಂದರ್ಶನಕಾರರೆದುರಿಗೆ ಇಂದುಲೇಖಾದೇವಿ ಬಂದಾಗ ಸಂದರ್ಶನಕಾರರು 'ನಿಮ್ಮ ಯಜಮಾನರು ಏನು ಮಾಡುತ್ತಾರೆ?' ಎಂಬ ಪ್ರಶ್ನೆಗೆ ಅವಳು 'ನನಗೆ ಗಂಡ ಇಲ್ಲ, ನಾನೇ ನನ್ನ ಪತಿಯನ್ನು ತ್ಯಜಿಸಿದ್ದೇನೆ' ಎಂದು ಉತ್ತರಿಸುತ್ತಾಳೆ. ಸಂದರ್ಶನಕಾರರಿಗೆ ಆಶ್ಚರ್ಯವಾಗುತ್ತದೆ. ಕಾರಣ, ಇಂದುಲೇಖಾದೇವಿಯ ಹಣೆಯಲ್ಲಿ ಕುಂಕುಮವಿದ್ದು, ಅವಳಲ್ಲಿ ವಿವಾಹಿತ ಹೆಣ್ಣಿನ ಲಕ್ಷಣಗಳೆಲ್ಲವೂ ಇರುತ್ತದೆ. ಕಡೆಗೆ ಅವಳು ಬದಾಮತಲ್ಲೆಯ ಅಟಲ್ ದಾರವರ ಬಗ್ಗೆ ಸಂಜ್ಞೆ ಮಾಡಿದಾಗ ಸಂದರ್ಶನಕಾರರಿಗೆ ಹಿಂದಿನ ಘಟನೆಗಳು ನೆನಪಾಗುತ್ತವೆ...

ಅಟಲ್ ದಾ ಬದಾಮತಲ್ಲೆಯ ಆದರ್ಶ ಯುವಕರಾಗಿದ್ದು ಎಲ್ಲರ ಕಣ್ಮಣಿಯಾಗಿದ್ದರು. ಬಡವರ ಸಂಘ ಸ್ಥಾಪಿಸಿ ಸಹಾಯ ಮಾಡುತ್ತಿದ್ದರು. ಬಿ.ಎ.ನಲ್ಲಿ ಉತ್ತಮ ಅಂಕಗಳಿಂದ ತೇರ್ಗಡೆಯಾಗಿ ಸ್ಕಾಲರ್‌ಶಿಪ್ ಪಡೆದ ಅವರಿಗೆ ಧನ್ಯವಾದವನ್ನು ಹೇಳಲು ಸಂದರ್ಶನಕಾರರು ಅವರ ಮನೆಗೆ ಹೋದಾಗ, ಸಾಮಾನ್ಯವಾಗಿ ಅಟಲ್ ದಾರವರು ರಾತ್ರಿ ಮನೆಯಲ್ಲಿ ಇರದ ವಿಷಯ ತಿಳಿಯುತ್ತದೆ.

ಮಾರನೇ ದಿನ ಅಟಲ್ ದಾರವರನ್ನು ಸಂದರ್ಶಕರು ಪ್ರಶ್ನಿಸಿದಾಗ ಅವರಿಂದ ಸಮಂಜಸವಾದ ಉತ್ತರ ಸಿಗುವುದಿಲ್ಲ. ಕೆಲವು ದಿನಗಳಾದ ಮೇಲೆ ಅಟಲ್ ದಾರವರು ಭವಾನೀಪುರದಲ್ಲಿ ಸಂಜೆ ಶಾಲೆಯನ್ನು ತೆರೆದಿರುವ ಹಾಗೂ ಒಮ್ಮೆ ಬಾಲಕನೊಬ್ಬನ ಶುಶ್ರೂಷೆ ಮಾಡಿದಾಗ್ಯೂ ಬಾಲಕ ಬದುಕದಿದ್ದ ವಿಷಯ ಎಲ್ಲರಿಗೂ ತಿಳಿಯುತ್ತದೆ. ಆಗ ಅಟಲ್ ದಾರವರ ನಿಸ್ವಾರ್ಥ ಸೇವೆಯ ಬಗ್ಗೆ ಎಲ್ಲರಿಗೂ ಮತ್ತಷ್ಟು ಗೌರವ ಮೂಡುತ್ತದೆ.

ಮುಂದೆ ಓದಿ....

ಅಟಲ್‌ದಾರವರ ತಂದೆ ಆ ಕು ಬಾ ಬು. ತುಂಬಾ ಶ್ರೀಮಂತರೇನಾಗಿರಲಿಲ್ಲ. ಸಂಕೀರ್ಣ ಗಲ್ಲಿಯಲ್ಲಿ ಅವರದೊಂದು ಹಳೆಮನೆಯಿತ್ತು. ಮನೆಯ ಹೊರಗೆ ಇಟ್ಟಿಗೆಯ ಕಾಂಪೌಂಡು; ಅದರಿಂದ ಮರಳು ಒಸರುತ್ತಿತ್ತು. ಆದರೆ ಅವರ ಮನೆ ನಮಗೆ ಯಾವುದೇ ತೀರ್ಥ ಕ್ಷೇತ್ರಕ್ಕಿಂತ ಕಡಿಮೆಯಾಗಿರಲಿಲ್ಲ. ಮನೆಯ ಕೋಣೆಯೊಂದರಲ್ಲಿ ಕಾಲುಮಣೆಯ ಮೇಲೆ ಸದಾ ಚಾಪೆಯೊಂದನ್ನು ಹಾಸಲಾಗಿರುತ್ತಿತ್ತು. ಶೆಲ್ಫ್‌ನಲ್ಲಿ ರಾಶಿ-ರಾಶಿ ಪುಸ್ತಕಗಳು ಬದಾಮತಲ್ಲೆಯ ಮುಖ್ಯೋಪಾಧ್ಯಾಯರಾದ ಸುರೇಶ್‌ಬಾಬುಗಳಿಗೂ ಅರ್ಥವಾಗದ ವಿಷಯಗಳು ಅಟಲ್‌ದಾರವರಿಗೆ ತಿಳಿದಿದೆಯೆಂದು ನಮಗನ್ನಿಸುತ್ತಿತ್ತು. ವರಾಂಡದ ಗೋಡೆಯಲ್ಲಿ ವ್ಯಾಯಾಮದ ಅನೇಕ ಭಂಗಿಯ ಪಟಗಳಿದ್ದವು. ಛಾವಣಿಯಲ್ಲಿ ಒಂದು 'ರಿಂಗ್' ನೇತಾಡುತ್ತಿತ್ತು. ಈ ರಿಂಗ್ ಹಿಡಿದು ಅಟಲ್ ದಾ ನಿತ್ಯ ವ್ಯಾಯಾಮ ಮಾಡುತ್ತಿದ್ದರು. ಮುಂಜಾನೆಯ ವ್ಯಾಯಾಮದ ನಂತರ ಸ್ವಲ್ಪ ಹೊತ್ತು ಧ್ಯಾನಮಗ್ನರಾಗಿ ಕೂರುತ್ತಿದ್ದರು. ನಮಗೂ ಧ್ಯಾನಮಗ್ನರಾಗಿ ಕೂರಲು ಹೇಳುತ್ತಿದ್ದರು.

"ನಮಗೆ ಮಂತ್ರ-ಗಿಂತ್ರ ವಂತೂ ಗೊತ್ತಿಲ್ಲ. ನಾವು ಹೇಗೆ ಧ್ಯಾನಮಗ್ನರಾಗುವುದು?" ಎಂದರೆ ಅಟಲ್ ದಾ ನಕ್ಕು ಹೇಳುತ್ತಿದ್ದರು, "ಧ್ಯಾನಮಗ್ನರಾಗಲು ಮಂತ್ರಬೇಕಿಲ್ಲ." "ಮತ್ತೆ ಧ್ಯಾನಮಗ್ನನಾಗಿ ಏನು ಯೋಚಿಸಲಿ?" ಎಂದ ನನ್ನ ಪ್ರಶ್ನೆಗೆ "ಗೋಡೆ ಮೇಲೆ ಪೆನ್ಸಿಲ್‌ನಿಂದ ಒಂದು ಗೋಳಾಕಾರದ ವೃತ್ತ ಎಳೆ, ಅದನ್ನೆ ಏಕಾಗ್ರತೆಯಿಂದ ನೋಡು, ಕಣ್ಣಿನ ರೆಪ್ಪೆಯನ್ನು ಅಲುಗಾಡಿಸಬೇಡ. ನೋಡು ಹೀಗೆ—" ಎಂದು ಕಾಲುಮಣೆಯ ಮೇಲೆ ಹಾಕಿದ್ದ ಚಾಪೆಯ ಮೇಲೆ ಪದ್ಮಾಸನ ಹಾಕಿ ಕೂತು, ಗೋಡೆಗೆ ನೇತುಹಾಕಿದ್ದ ಪಿಚ್ ಬೋರ್ಡಿನ ಕೆಂಪು ಗುರುತಿನೆಡೆಗೆ ಸ್ಥಿರ ದೃಷ್ಟಿಯಿಂದ ನೋಡುತ್ತಿದ್ದರು. ಕಡೆಗೆ ಸ್ವಲ್ಪ ಹೊತ್ತಾದ ಮೇಲೆ "ಮೊದಲ್ಲ ಐದ್ಹತ್ತು ಸೆಕೆಂಡುಗಳವರೆಗೆ ನೋಡು, ಆಮೇಲೆ ಒಂದೆರೆಡು ನಿಮಿಷದಂತೆ ಸಮಯ ಹೆಚ್ಚಿಸುತ್ತಾ ಹೋಗು. ಅಭ್ಯಾಸವಾದ ಮೇಲೆ ತುಂಬಾ ಸುಲಭವಾಗಿಬಿಡುತ್ತೆ" ಎನ್ನುತ್ತಿದ್ದರು.

"ಅಟಲ್ ದಾ ನೀನೆಷ್ಟು ಹೊತ್ತಿನವರೆಗೆ ಎವೆಯಿಕ್ಕದೆ ನೋಡಬಲ್ಲೆ?" ನಾನು ಪ್ರಶ್ನಿಸುತ್ತಿದ್ದೆ."

"ತುಂಬಾ ಹೊತ್ತು ನಾನೂ ನೋಡಲಾರೆ. ಇದು ಕಷ್ಟದ ಕೆಲಸ. ಇನ್ನೂ ಅಭ್ಯಾಸ ಮಾಡಬೇಕಿದೆ"

"ಇದನ್ನೆಲ್ಲಾ ಮಾಡೋದ್ರಿಂದ ಲಾಭ ಏನು?"

"ಮನಸ್ಸಿನ ಶಕ್ತಿ ಅಂದ್ರೆ ವಿಲ್‌ಪವರ್ ಹೆಚ್ಚಾಗುತ್ತೆ. ನಾಲ್ಕೈದು ದಿನಗಳವರೆಗೆ ಏನನ್ನೂ ತಿನ್ನದೆ ಇರೋ ಶಕ್ತಿ ಬರುತ್ತೆ— ಆರೋಗ್ಯದ ಮೇಲೂ ಪ್ರತಿಕೂಲ ಪರಿಣಾಮವಾಗಲ್ಲ. ಗಂಟೆಗಟ್ಲೆ ಸಮುದ್ರದಲ್ಲೂ ಮುಳುಗಿರಬಹುದು."

"ನೀನೂ ಗಂಟೆಗಟ್ಲೆ ನೀರಿನಲ್ಲಿ ಮುಳುಗಿರಬಲ್ಲೆಯಾ?"

"ಅದು ಅಷ್ಟು ಸುಲಭವೇ? ವರ್ಷಗಟ್ಟಲೆ ಸಾಧನೆಮಾಡಿದ ಮೇಲೆಯೇ ಅಂಥ ಸಿದ್ಧಿ

ದೊರೆಯೋದು. ಆಗಲೇ ದಪ್ಪ ಪುಸ್ತಕವನ್ನು ಒಂದು ಬಾರಿ ಓದಿದ ಮಾತ್ರದಿಂದಲೇ ನೆನಪಿಟ್ಟುಕೊಳ್ಳಬಹುದು. ಆಗ ಸಾಧಕನ ಕಣ್ಣುಗಳಿಂದ ಜ್ಯೋತಿಯೊಂದು ಮೂಡುತ್ತೆ. ಅವನಿಗಿಚ್ಛೆಯ ವಿರುದ್ಧವಾಗಿ ಯಾರೂ ಏನೂ ಮಾಡಲಾರರು. ಬಯಸಿದವರಿಂದ ಸಾಧಕ ಬೇಕಾದ ಕೆಲಸ ಮಾಡಿಸಿಕೊಳ್ಳಬಹುದು. ಈ ಸಾಮರ್ಥ್ಯದಿಂದಾಗಿಯೇ ನಾನು ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗ್ತೀನಿ. ಬೇರೆ ವಿದ್ಯಾರ್ಥಿಗಳು ಐವತ್ತು ಬಾರಿ ಓದಿ ನೆನಪಿಟ್ಟುಕೊಳ್ಳುವುದನ್ನು ನಾನೊಂದೇ ಬಾರಿ ಓದಿ ನೆನಪಿಟ್ಟುಕೊಳ್ತೀನಿ." ಅಟಲ್ ದಾರವರ ಮುಖಕಾಂತಿಯಿಂದ ಹೊಳೆಯುತ್ತಿತ್ತು.

"ನಾನೂ ಪ್ರಯತ್ನಿಸ್ತೀನಿ ಅಟಲ್" ಎನ್ನುತ್ತಿದ್ದೆ.

"ಪ್ರಯತ್ನಿಸಬಲ್ಲೆ. ಆದ್ರೆ, ಇದಕ್ಕಾಗಿ ಬ್ರಹ್ಮಚರ್ಯೆಯನ್ನು ಪಾಲಿಸಬೇಕಾಗುತ್ತೆ. ಬ್ರಹ್ಮಚರ್ಯೆ ಪಾಲಿಸದೆ ಏನೂ ಸಾಧ್ಯವಿಲ್ಲ. ಪ್ರತಿಯಾಗಿ ವಿಘ್ನಗಳೆದುರಾಗಬಹುದು.

"ಅಂದ್ರೆ ?" ನನಗಾಶ್ಚರ್ಯವಾಗುತ್ತಿತ್ತು.

"ಬ್ರಹ್ಮಚರ್ಯೆ ಪಾಲಿಸದೆ ಧ್ಯಾನಮಗ್ನರಾಗಲು ಪ್ರಯತ್ನಿಸಿದವರು 'ಹಾರ್ಟ್‌ಫೇಲ್' ಆಗಬಹುದು....ಹೀಗೆ ಅದೆಷ್ಟೋ ಜನ ಸತ್ತಿದ್ದಾರೆ. ಕೆಲವರು ಜೀವಮಾನವಿಡೀ ಅಂಗವಿಕಲರಾಗಿ ಬದುಕಬೇಕಾಗುತ್ತದೆ."

"ಬ್ರಹ್ಮಚರ್ಯೆಯನ್ನು ಹೇಗೆ ಪಾಲಿಸುವುದು ?"

"ಯಾವ ಹೆಣ್ಣಿನೆಡೆಗೂ ಕಣ್ಣೆತ್ತಿಯೂ ನೋಡಬಾರದು. ಹೆಣ್ಣನ್ನು 'ತಾಯಿ' ಎಂದು ತಿಳಿ. ನಿನಗೆ, ಸ್ವಾಮಿವಿವೇಕಾನಂದರು ಬರೆದ ಪುಸ್ತಕವನ್ನು ಕೊಡ್ತೀನಿ. ಆ ಪುಸ್ತಕ ಓದಿಯೇ ನಾನಿದನ್ನೆಲ್ಲಾ ತಿಳಿದುಕೊಂಡಿರೋದು. ಒಂದು ಬಾರಿ ಪುಸ್ತಕದ ಮೇಲೆ ಕಣ್ಣು ಹಾಯಿಸಿದರೆ ಸಾಕು, ಇಡೀ ಪುಸ್ತಕವನ್ನೇ ಬಾಯಿ ಪಾಠ ಮಾಡಿದಷ್ಟು ನೆನಪು ವಿವೇಕಾನಂದರಿಗಿತ್ತು. ಆದರೆ ಅವರೆಂದೂ ಸ್ಟಾರ್-ಥಿಯೇಟರ್ ರಸ್ತೆಯಲ್ಲಿ ಹಾಯ್ದುಹೋಗಲಿಲ್ಲ"

"ಯಾಕೆ?" ನಾನು ಅಟಲ್ ದಾರವರನ್ನೇ ಗಮನಿಸಿದೆ.

"ಥಿಯೇಟರ್ ಅಂದರೆ ಹೆಂಗಸರಿರುವ ಜಾಗ ಅಂತ ನಿನಗ್ಗೊತ್ತಿಲ್ವಾ....?"

ಅಟಲ್ ದಾರವರ ಕೋಣೆಯಲ್ಲಿ ಕೂತಾಗ ಅದೆಷ್ಟೋ ಬಾರಿ ನನಗೆ ನನ್ನ ಬಗ್ಗೆಯೇ ವಿಷಾದವುಂಟಾಗುತ್ತಿತ್ತು. ವಿದ್ಯೆಯಲ್ಲಿ, ಗುಣದಲ್ಲಿ ಅಟಲ್ ದಾರವರಂತೆ ನಾನು ಹೇಗಾಗಲಿ ಎಂದು ಯೋಚಿಸುತ್ತಿದ್ದೆ. ಕ್ಲಬ್‌ನ ಹುಡುಗರೆಲ್ಲರೂ ಅಟಲ್ ದಾರಂತಾಗಲು ಕನಸು ಕಾಣುತ್ತಿದ್ದ ದಿನಗಳು ಅದಾಗಿದ್ದವು. ನಾವೆಲ್ಲಾ ಆಗ ಅವರಂತೆಯೇ ಉಡುಪು ಧರಿಸುತ್ತಿದ್ದೆವು, ತಲೆ ಬಾಚಿಕೊಳ್ಳುತ್ತಿದ್ದೆವು. ನಾನಂತೂ ನನ್ನ ಓದುವ ಕೊಠಡಿಯನ್ನು ಅಟಲ್ ದಾರಂತೆಯೇ ಶೃಂಗರಿಸಿಟ್ಟುಕೊಂಡಿದ್ದೆ; ನ್ಯೂಟ್, ಹೆಮರ್ಸನ್, ಹಕ್ಸಲೀ, ಇಬ್ಸನ್, ಬರ್ನಾಡ್‌ಶಾ ಇತ್ಯಾದಿ ಲೇಖಕರ ಪುಸ್ತಕಗಳನ್ನೂ ಕೊಂಡಿದ್ದೆ. ಬ್ರಹ್ಮಚರ್ಯೆ ಬಗ್ಗೆ ಸ್ವಾಮಿ ವಿವೇಕಾನಂದರು ಬರೆದ ಪುಸ್ತಕ ಹಾಗೂ ಅವರ ಶಿಕಾಗೋ ಭಾಷಣ ಓದಿದ್ದೆ, ಬ್ರಹ್ಮ

ಚರ್ಯೆ ಎಷ್ಟು ಕಷ್ಟವೆಂಬುದನ್ನು ಅರಿತುಕೊಂಡಿದ್ದೆ.

'ಮನದಲ್ಲಿ ದುರ್ವಿಚಾರಗಳು ಬಂದರೆ ದೇವರನ್ನು ನೆನೆ. ಶರೀರವನ್ನು ಸದಾ ಆರೋಗ್ಯದಿಂದಿಟ್ಟುಕೋ. ಮನಸ್ಸು ಸ್ಥಿರವಾಗಿರಲಿ' ಎಂದು ಅಟಲ್ ದಾ ಹೇಳುತ್ತಿದ್ದರು.

ಎಂದಾದರೂ, ಮುಂಜಾನೆ ನನಗೆಚ್ಚರವಾದಾರೆ ನಾನು ನೇರವಾಗಿ ಅಟಲ್ ದಾರವರನ್ನು ಕರೆಯಲು ಹೋಗಿಬಿಡುತ್ತಿದ್ದೆ— ಅಟಲ್ ದಾ ಇನ್ನೂ ಮಲಗಿರಬಹುದೆಂಬ ಯೋಚನೆಯಿಂದ. ಆದರೆ, ಕಂಬಳಿ ಹೊದ್ದು ಹೋಗಿ ಅವರ ಮನೆಯ ಕಿಟಕಿಯಲ್ಲಿ ನೋಡಿ ಆಶ್ಚರ್ಯಪಡುತ್ತಿದ್ದೆ. ಆ ಭಯಾನಕ ಚಳಿಯಲ್ಲೂ ಅವರು ಧ್ಯಾನ ಮಗ್ನರಾಗಿ ಕೂತಿರುತ್ತಿದ್ದರು. ಬೆಳಕು ಹರಿಯುವುದಕ್ಕೂ ಮೊದಲೇ ಗಡ್ಡ ಹೆರೆದುಕೊಂಡು ಸ್ನಾನಮಾಡಿ, ಪೂಜೆ-ಪುನಸ್ಕಾರಗಳನ್ನು ಮುಗಿಸಿರುತ್ತಿದ್ದರು. ನಂತರ ಪುಸ್ತಕ ಹಿಡಿದು ಕೂತು ಬಿಡುತ್ತಿದ್ದರು ಮುಂಜಾನೆ ಏಳುವ ವಿಚಾರದಲ್ಲಿ ನಾವೆಂದೂ ಅಟಲ್ ದಾರವರನ್ನು ಸೋಲಿಸಲು ಸಾಧ್ಯವಾಗಲಿಲ್ಲವೆಂದು ನಾನಿಂದೂ ಸ್ಮರಿಸಿಕೊಳ್ಳುತ್ತೇನೆ.

ಕ್ರಮೇಣ ಅಟಲ್‌ದಾರವರ ಕೀರ್ತಿ ಹೆಚ್ಚುತ್ತಾ ಹೋಯಿತು. ಕಾಲೇಜಿನ ಪರೀಕ್ಷೆಗಳಲ್ಲಿ ಅವರು ಪ್ರಥಮರಾದರು. ಮೊದಲಿನಂತೆ ಈಗ ಅವರ ಭೇಟಿ ಸಾಧ್ಯವಿರಲಿಲ್ಲ.

ಅಟಲ್‌ದಾರವರ ಕಾರ್ಯಕ್ಷೇತ್ರ ಬದಾಮತಲ್ಲೆಯಿಂದ ಹೊರಗೆ—ದೂರ ದೂರಕ್ಕೂ ಹಬ್ಬಿತ್ತು. ಅವರು ಯಾವಾಗ ಕಾಲೇಜಿಗೆ ಹೋಗುತ್ತಿದ್ದರೋ, ಯಾವಾಗ ಮರಳಿ ಬರುತ್ತಿದ್ದರೋ ನಮಗಂತೂ ತಿಳಿಯುತ್ತಿರಲಿಲ್ಲ. ರಜೆಯ ನಂತರ ನಿತ್ಯ ಕ್ಲಬ್‌ಗೆ ಬರುವುದೂ ಅವರಿಗೆ ಸಾಧ್ಯವಿರಲಿಲ್ಲ. ತಮ್ಮ ಮನೆಗೂ ಅವರು ಸಮಯಕ್ಕೆ ಸರಿಯಾಗಿ ಹೋಗತ್ತಿರಲಿಲ್ಲ.

"ಅಟಲ್ ದಾ, ನಿನ್ನೆ ನೀನೆಲ್ಲಿದ್ದೆ ?" ಆಗಾಗ್ಯೆ ಪ್ರಶ್ನಿಸುತ್ತಿದ್ದೆ.

"ಒಂದ್ ಮೀಟಿಂಗ್‌ನಲ್ಲಿ ಸಿಕ್ಕಿಹಾಕಿಕೊಂಡಿದ್ದೆ... ನಾನು ಕ್ಲಬ್‌ಗೆ ಬರಲಾರೆ. ಆದ್ರೆ, ನೀವು ಮಾತ್ರ ನಿಮ್ಮ ನಿಮ್ಮ ಕೆಲಸ ಮಾಡುತ್ತಿರಿ. ಉದಾಸೀನ ಮಾಡ್ಬೇಡಿ" ಅಟಲ್ ದಾ ತಪ್ಪದೆ ಈ ಮಾತನ್ನು ಹೇಳುತ್ತಿದ್ದರು. ನಾವೂ ಅವರ ಮಾತುಗಳನ್ನು ತಪ್ಪದೆ ಪಾಲಿಸುತ್ತಿದ್ದೆವು.

ಒಮ್ಮೊಮ್ಮೆ ಅನೇಕ ದಿನಗಳವರೆಗೆ ಅವರನ್ನು ಪತ್ತೆ ಮಾಡುವುದೇ ಕಷ್ಟವಾಗುತ್ತಿತ್ತು.

ಆ ವರ್ಷ ನಮ್ಮ ಹೈಸ್ಕೂಲ್ ಶಿಕ್ಷಣದ ಪರೀಕ್ಷೆಯಿತ್ತು. ಏನೂ ಓದುವುದರಲ್ಲಿ ಮಗ್ನನಾದೆ. ಆಗಾಗ್ಯೆ ಭೇಟಿಯಾದಾಗ ಅಟಲ್ ದಾ ನನ್ನ ವಿದ್ಯಾಭ್ಯಾಸದ ಬಗ್ಗೆಯೂ ವಿಚಾರಿಸುತ್ತಿದ್ದರು—

"ಹೇಗಿದೆ ಓದು ?"

"ಅಟಲ್, ನನಗೇಕೋ ತುಂಬಾ ಭಯವಾಗುತ್ತೆ"

"ಭಯ ?....ಯಾಕೆ ?"

"ನಿನ್ನಷ್ಟು ಬುದ್ಧಿಶಕ್ತಿ ನನಗಿಲ್ಲವಲ್ಲ"

"ದೇವರು ಯಾರಿಗಾದರೂ ಬುದ್ಧಿಶಕ್ತಿಯನ್ನು ಕೊಡುತ್ತಾನೆಯೇ ? ಅದನ್ನು ನಾವೇ ರೂಪಿಸಿಕೊಳ್ಳಬೇಕು. ಆಗಲೇ ಏನಾದರೂ ಸಾಧ್ಯ. ಬ್ರಹ್ಮಚರ್ಯೆ

ಯನ್ನು ಪಾಲಿಸುವವರ ಮಾರ್ಗದಲ್ಲಿ ಯಾವುದೇ ವಿಘ್ನ ಎದುರಾಗಲು ಸಾಧ್ಯವಿಲ್ಲ; ಆಗ ಒಂದು ಬಾರಿ ಓದಿದ್ದು, ಸದಾ ನೆನಪಿನಲ್ಲಿರುತ್ತದೆ....ಆ ನಿಯಮವನ್ನೂ ಪಾಲಿಸುತ್ತಿದ್ದೀಯಲ್ಲಾ ?"

"ಯಾವ ನಿಯಮ ?"

"ಧ್ಯಾನ ಮಾಡಲು ಹೇಳಿದ್ದೆನಲ್ಲ !"

"ಪ್ರಯತ್ನವಂತೂ ಮಾಡ್ತಿದ್ದೀನಿ. ಆದ್ರೆ ನಿತ್ಯ, ನಿಯಮಿತವಾಗಿ ಕೂರಲಾರೆ. ಬೆಳಗ್ಗೆ ಎಚ್ಚರವೇ ಆಗಲ್ಲ"

"ದಿನಾ ಎಷ್ಟು ಗಂಟೆ ನಿದ್ರಿಸುತ್ತೀಯಾ?"

ಅವರ ಈ ಮಾತನ್ನು ಕೇಳಿಯೂ ಕೇಳದವನಂತೆ ನಟಿಸಿದೆ. ಆ ಮೇಲೆ ಅವರೆದುರು ಹೋಗಲೂ ನಾಚಿಕೆಪಟ್ಟೆ. ನನ್ನ ಶಕ್ತಿ ಹಾಗೂ ಸಾಮರ್ಥ್ಯದ ಬಗ್ಗೆ ನನಗೇ ಗ್ಲಾನಿಯುಂಟಾಗುತ್ತಿತ್ತು. ಅಟಲ್ ದಾ ಓರ್ವ ಜೀನಿಯಸ್....ಅವರೆದುರು ನಾವೆಲ್ಲಿ? ಹತ್ತತ್ತು ಬಾರಿ ಒಂದು ಪುಟವನ್ನು ಬಾಯಿಪಾಠ ಮಾಡಿಕೊಂಡರೂ ಏನೂ ನೆನಪಿನಲ್ಲುಳಿಯುವುದಿಲ್ಲ, ಗಣಿತದ ಸಮಸ್ಯೆಯನ್ನು ಬಿಡಿಸುವಾಗ ಮೈಯಲ್ಲಿನ ಬೆವರಿಳಿಯುತ್ತದೆ. ನಮ್ಮ ಸಾಮರ್ಥ್ಯವೇನು? ರಸ್ತೆಯಲ್ಲಿ ಹೋಗುವಾಗ—ಸುಂದರ ತರುಣಿಯನ್ನು ನೋಡಿದಾಗ ಮನಸ್ಸು ಚಂಚಲಗೊಳ್ಳುತ್ತದೆ. ನಮಗೆ ಸಂಯಮ ಮತ್ತು ಬ್ರಹ್ಮಚರ್ಯೆಯ ಶಿಕ್ಷಣ ವ್ಯರ್ಥ. ಆದರೆ ಅಟಲ್ ದಾ? ಅವರು ಹೆಣ್ಣಿನಲ್ಲಿ ತಾಯಿಯನ್ನು ಕಾಣುತ್ತಾರೆ. ಇದು ನನ್ನಿಂದೇಕೆ ಸಾಧ್ಯವಿಲ್ಲ? ನಾನು ದುರ್ಬಲ. ನನ್ನ ಮನಸ್ಸು ಮತ್ತೂ ದುರ್ಬಲ....

ಅಂದು ರಾತ್ರಿ ಒಂದು ದಪ್ಪ ಪುಸ್ತಕವನ್ನು ಹಿಡಿದು ಅಟಲ್ ದಾ ವೇಗವಾಗಿ ಮನೆಗೆ ಮರಳಿ ಬರುತ್ತಿರುವುದನ್ನು ಕಂಡೆ. ನನ್ನ ನೋಡಿ ಗಾಬರಿಯಿಂದ ನಿಂತು, "ಇಷ್ಟು ಸರಿ/ರಾತ್ರೀಲಿ ಎಲ್ಲಿಗೆ ಹೋಗಿದ್ದೆ?" ಎಂದು ನನ್ನನ್ನೇ ವಿಚಾರಿಸಿದರು.

"ಅಪ್ಪನ ಆರೋಗ್ಯ ಸರಿಯಿಲ್ಲ. ಡಾಕ್ಟರ್ ಹತ್ತಿರ ಹೋಗಿದ್ದೆ. ಆದ್ರೆ, ಇಷ್ಟು ರಾತ್ರೀಲೀ ನೀನೆಲ್ಲಿಂದ ಬರ್ತಿದ್ದೀಯಾ, ಅಟಲ್ ?" ನಾನೂ ವಿಚಾರಿಸಿದೆ.

"ಮನೆಗೆ ಬರುವಾಗ ದಿನಾ ಇಷ್ಟು ಹೊತ್ತೇ ಆಗುತ್ತೆ" ಅಟಲ್ ದಾ ನನ್ನೆಡೆಗೆ ನೋಡದೆ ಹೇಳಿದರು.

"ಈಗ ರಾತ್ರಿಯ ಒಂಭತ್ತು ಗಂಟೆ"

"ಒಂದೊಂದು ದಿನ ಇದಕ್ಕಿಂತ ತಡವಾಗುತ್ತೆ"

"ಯಾಕೆ? ಇಷ್ಟು ಹೊತ್ತು ಎಲ್ಲಿ, ಏನು ಕೆಲಸ?"

"ಈಚೆಗೆ ನಾನು ಭವನೀಪುರದಿಂದ ಎಲ್ಗಿನ್ ರೋಡಿಗೂ ಹೋಗಬೇಕಾಗುತ್ತೆ. ಕ್ಲಬ್‌ನ ಹುಡುಗರು ಬಿಡೋದಿಲ್ಲ. ಅಮೇಲೆ ಲೈಬ್ರರಿಗೆ ಹೋಗ್ತೀನಿ. ಏಷಿಯಾಟಿಕ್ ಲೈಬ್ರರಿಯಲ್ಲಿ ಸಾಕಷ್ಟು ಸಮಯ ಕಳೆದು ಹೋಗುತ್ತೆ." ಅಟಲ್ ದಾ ಸ್ವಲ್ಪ ತಡೆದು ಹೇಳಿದರು, "ನೀನೇ ನೋಡ್ತಿದ್ದೀಯಲ್ಲ, ಈ ಪುಸ್ತಕವನ್ನು ಇವತ್ತು ರಾತ್ರಿಯೇ ಓದಿ ಮುಗಿಸಿ, ನಾಳೆ ಬೆಳಗ್ಗೆ ವಾಪಸ್ ಕೊಡ್ಬೇಕು"

ಅಟಲ್ ದಾರವರ ಮಾತಿನಿಂದ ನಾನು ಆಶ್ಚರ್ಯಗೊಂಡೆ. ಇನ್ನು ಅವರು ನಿದ್ರಿಸುವುದು ಯಾವಾಗ? ಅಟಲ್ ದಾರವರ ಓದುವ ಸಾಮರ್ಥ್ಯ ಹಾಗೂ ಅವರ ಸ್ಮರಣಾಶಕ್ತಿ ಅಸಾಧಾರಣವೆಂಬುದು ನನಗೆ ತಿಳಿದಿತ್ತು. ಆಶು ಬಾಬುರವರ ಪುತ್ರ

ಅಟಲ್ ದಾ ಬದಾಮತಲ್ಲೆಯ ಪ್ರತಿಷ್ಠೆಯನ್ನು ಹೆಚ್ಚಿಸುತ್ತಾನೆಂಬುದು ಎಲ್ಲರ ಅಭಿಮತವಾಗಿತ್ತು. ಈಗಾಗಲೇ ಅಟಲ್‌ಗೆ ಮೆಟ್ರಿಕ್ ಮತ್ತು ಇಂಟರ್ ಮೀಡಿಯಟ್‌ನಲ್ಲಿ ಸ್ಕಾಲರ್‌ಶಿಪ್ ಸಿಕ್ಕಿದೆ, ಕಾಲೇಜಿನಲ್ಲೂ ಸಿಗಬಹುದು. ಈ ಹುಡುಗ ಬದಾಮತಲ್ಲೆಗೆ ಎಂದೂ ಅಪಕೀರ್ತಿಯನ್ನುಂಟು ಮಾಡಲಾರ....

ನಂತರ, ವಾಸ್ತವವಾಗಿಯೂ ಅಟಲ್ ದಾ ಬಿ.ಎ.ನಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು ಬದಾಮತಲ್ಲೆಯ ತಾವು ಉತ್ತಮ ವಿದ್ಯಾರ್ಥಿಯೆಂಬುದನ್ನು ಸಾಬೀತುಗೊಳಿಸಿದರು.

ಇಂದು, ಇಷ್ಟು ದಿನಗಳಾದ ಮೇಲೆ ಆ ದಿನಗಳ ಬಗ್ಗೆ ಯೋಚಿಸಿದಾಗ ನಗುಬರುತ್ತದೆ. ಆ ದಿನಗಳಲ್ಲಿ, ಈಶ್ವರಚಂದ್ರ ವಿದ್ಯಾಸಾಗರರಿಂದ ಹಿಡಿದು ಇನ್ನಿತರ ಮಹಾಮಹಿಮರು ಹೇಳಿದ್ದನ್ನೆಲ್ಲಾ ಓದಿದ್ದೆ. ವಿದ್ಯಾಭ್ಯಾಸದಲ್ಲಿ ಪ್ರಥಮದರ್ಜೆಯಲ್ಲಿ ಪಾಸಾಗುವುದು ಹಾಗೂ ತಬಲಾ ಬಾರಿಸುವುದರಲ್ಲಿ ಪ್ರಥಮತೆಯನ್ನು ಸಾಧಿಸುವುದು ಎರಡೂ ಒಂದೇ ಎಂಬುದು ನನಗಾಗ ತಿಳಿದಿರಲಿಲ್ಲ. ಬದುಕಿನಲ್ಲಿ ಉನ್ನತಿ ಮತ್ತು ಪ್ರತಿಷ್ಠೆಯನ್ನು ಸಾಧಿಸಬೇಕೆಂದಿದ್ದರೆ ಪ್ರಥಮದರ್ಜೆಯಲ್ಲಿ ಮಾತ್ರ ಪಾಸಾದರೆ ಸಾಕು ಎಂದಷ್ಟೇ ನನಗೆ ತಿಳಿದಿತ್ತು. ಆದರೆ, ನನಗೆ, ಪರೀಕ್ಷೆಯಲ್ಲಿ ತೇರ್ಗಡೆಯಾಗುವುದೆಂದರೆ ಆಕಾಶವೇ ಕಳಚಿ ಬಿದ್ದಂತಾಗುತ್ತಿತ್ತು; ಹೀಗಾಗಿ ಬದುಕಿನಲ್ಲಿ ನಮ್ಮಂತಹವರದ್ದು ಹೇಳಿಕೊಳ್ಳುವಂತಹದ್ದಿಲ್ಲವೆಂದು ತಿಳಿದಿದ್ದೆ. ಜಯಮಾಲೆ ಅಟಲ್ ದಾರವರಿಗೆ ಮಾತ್ರ ಕಟ್ಟಿಟ್ಟದ್ದೆಂದು ನಾವೆಲ್ಲಾ ತಿಳಿದಿದ್ದೆವು 'ಎಷ್ಟು ಒಳ್ಳೇ ಹುಡುಗ! ಒಂದು ಚೂರೂ ಗರ್ವವಿಲ್ಲ, ವಿದ್ಯೆಯಲ್ಲಿ ಎಲ್ಲರಿಗಿಂತ ಮುಂದಿದ್ದಾನೆ, ಎಷ್ಟು ವಿನಯವಂತ. ಮುಂದೆ ಇವನು ಕೀರ್ತಿ ಸಂಪಾದಿಸುತ್ತಾನೆ, ಆಶು ಬಾಬುಗಳ ಗೌರವವನ್ನು ಹೆಚ್ಚಿಸುತ್ತಾನೆ' ಎಂದೆಲ್ಲಾ ಜನ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು.

"ನಿಮ್ಮ ಮಗನನ್ನು ವಿದೇಶಕ್ಕೆ ಕಳುಹಿಸಿ ಬ್ಯಾರಿಸ್ಟರ್ ಆಗಿ ಬರ್ತಾನೆ" ನೊಹಲ್ಲಾದ ಅನೇಕ ಹಿತೈಷಿಗಳು ಆಶುಬಾಬುಗಳಿಗೆ ಸೂಚಿಸಿದರು.

"ಅವನನ್ನು ರೂರ್‌ಕೆಲಾಕ್ಕೆ ಕಳಿಸಿ. ಇಂಜಿನೀಯರಿಂಗ್ ಎಜುಕೇಶನ್ ತುಂಬಾ ಒಳ್ಳೇದು" ಇನ್ನು ಕೆಲವರು ತಮ್ಮ ಅಭಿಪ್ರಾಯ ಹೇಳಿದ್ದರು.

"ದೇಶದಲ್ಲಿ ಎಷ್ಟು ಜನ ಒಳ್ಳೆ ಡಾಕ್ಟರಿದ್ದಾರೆ! ಅಟಲ್, ಡಾಕ್ಟರ್ ಆಗಿ ತುಂಬಾ ಹಣ ಸಂಪಾದಿಸಬಹುದು" ಮತ್ತೆ ಕೆಲವರು ತಮ್ಮಿಚ್ಛೆಯನ್ನು ವ್ಯಕ್ತಪಡಿಸಿದ್ದರು.

"ನಾನೇನು ಹೇಳಲಿ? ಇದುವರೆಗೆ ಅವನಿಗೆ ಬರುತ್ತಿರುವ ಸ್ಕಾಲರ್‌ಶಿಪ್ ಹಣದಿಂದಲೇ ಅವನು ವಿದ್ಯಾಭ್ಯಾಸ ಮಾಡಿದ್ದಾನೆ. ಅವನಿಗೆ ಯಾವುದು ಇಷ್ಟವೋ ಅದನ್ನೇ ಅವನು ಓದಲಿ–ನಾನು ಏನನ್ನೂ ಹೇಳಲ್ಲ" ಆಶುಬಾಬುಗಳು ಎಲ್ಲರಿಗೂ ಸಮಾಧಾನಪಡಿಸುತ್ತಿದ್ದರು.

ಅಕಸ್ಮಾತ್ ಅದೊಂದು ದಿನ, ಅಟಲ್ ದಾರವರ ವಿವಾಹ ನೆರವೇರುವುದಿದೆಯೆಂಬ ಸುದ್ದಿ ನಮಗೆಲ್ಲಾ ತಿಳಿಯಿತು. ಅಟಲ್ ದಾ ಆ ವೇಳೆಗೆ ಎಂ. ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ, ವಿದೇಶಕ್ಕೆ ಹೋಗುವ ಸಿದ್ಧತೆಯಲ್ಲಿದ್ದರು.

ಅಟಲ್‌ದಾ ರವರ ವಿವಾಹದ ಸುದ್ದಿ ಕೇಳಿ ಬದಾಮತಲ್ಲೆಯ ಜನರಿಗೆ ಅತೀವ ಆನಂದವಾಯಿತು. ಹುಡುಗಿ ಅಲೀಪುರದ ಶ್ರೀಮಂತ ಮನೆತನಕ್ಕೆ ಸೇರಿದವಳೆಂದು ತಿಳಿಯಿತು ಅಲೀಪುರದಲ್ಲಿದ್ದ ಅವರ ಭವ್ಯ ಬಂಗ್ಲೆಯನ್ನು ದೂರದಿಂದ ಅನೇಕ ಬಾರಿ ನಾವು ನೋಡಿದ್ದೆವು. ಹುಡುಗಿಯ ತಂದೆಗೆ ಸೇರಿದ ದೊಡ್ಡ ಕಬ್ಬಿಣದ ಅಂಗಡಿಯು 'ಬಡಾ ಬಜಾರ್' ನಲ್ಲಿತ್ತು. ಮನೆಯಲ್ಲಿ ಹುಡುಗಿ, ಹುಡುಗಿಯ ತಂದೆ ಮತ್ತು ತಾಯಿ–ಮೂರೇ ಜನ. ಅಟಲ್ ದಾರವರ ಉತ್ತಮ ನಡೆತೆಗೆ ಮನಸೋತು ಹುಡುಗಿಯ ತಂದೆ–ತಾಯಿ ಈ ಸಂಬಂಧ ಬೆಳೆಸಲು ಮುಂದಾಗಿದ್ದರು. ಅಟಲ್ ದಾರವರು ವಿಲಾಯಿತಿಗೆ ಹೋಗಿ ವಿದ್ಯಾಭ್ಯಾಸ ಮಾಡಿ ಬರುವ ಖರ್ಚು–ವೆಚ್ಚವನ್ನೂ ಹುಡುಗಿಯ ತಂದೆ ಭರಿಸಲು ಸಿದ್ಧರಾಗಿದ್ದರು. ಅನಂತರ, ಹುಡುಗಿಯ ತಂದೆಯ ಎಲ್ಲಾ ಸಂಪತ್ತಿಗೆ ಅಟಲ್ ದಾರವರೇ ಉತ್ತರಾಧಿಕಾರಿಯಾಗುವವರಿದ್ದರು.

ಮನುಷ್ಯನ ಬದುಕಿನಲ್ಲಿ ಅದೃಷ್ಟದ ಬಾಗಿಲು ಯಾವಾಗ ಹೇಗೆ ತೆರೆಯುವುದೋ, ಬಲ್ಲವರ್‍ಯಾರು?

ಅಟಲ್ ದಾರವರ ವಿವಾಹದ ದಿನದಂದೇ ಘಟನೆ ಘಟಿಸಿತು. ಇಂದು ಲೇಖಾದೇವಿಯ ಹಣೆಯಲ್ಲಿದ್ದ ಕುಂಕುಮ ಮತ್ತು ಅವಳ ತಲೆಯ ಮೇಲೆ ಹೊದ್ದ ಸೆರಗು ನನ್ನನ್ನು ಬೆರಗುಗೊಳಿಸಿತ್ತು. ಜಗತ್ತಿನಲ್ಲಿ ಇಷ್ಟು ಜನರಿದ್ದಾಗ್ಯೂ ಅವಳ ವಿಮುಕ್ತಿಯ ಭಾರ ನನ್ನ ಮೇಲೆ ಬಿದಿದ್ದು ತುಂಬಾ ಆಶ್ಚರ್ಯದ ಸಂಗತಿಯಾಗಿತ್ತು. ಅಲ್ಲದೆ, ಅಟಲ್ ದಾರವರ ಅದೃಷ್ಟಕ್ಕೆ ನಾನು ಸಾರಥಿಯಾಗುತ್ತೇನೆಂಬ ವಿಷಯವೂ ಒಂದು ವಿಚಿತ್ರ ಪರಿಹಾಸ್ಯವಾಗಿತ್ತು. ಒಂದು ವೇಳೆ, ಇಂದು ಅಟಲ್ ದಾ ಎದುರಿಗಿದ್ದಿದ್ದರೆ ನಾನು ಅವರಿಗೆ ಸಮಜಾಯಿಸಿ ಹೇಳುತ್ತಿದ್ದೆ.

ಈ ರೀತಿಯ ಪರಿಹಾಸ್ಯಕ್ಕಿರುವ ಅರ್ಥವಾದರೂ ಏನು?

ಯಾಕೆ ಹೀಗಾಗುತ್ತದೆ?

ಅಟಲ್ ದಾರವರಲ್ಲಿ ಯಾವುದಕ್ಕೆ ತಾನೇ ಕೊರತೆಯಿತ್ತು? ಕೊನೆಯ ಬಾರಿಗೆ ನಾನು ಅಟಲ್ ದಾರವರನ್ನು ಭೇಟಿ ಮಾಡಿದ್ದಾಗ ನನ್ನ ಕಣ್ಣುಗಳು ತೇವಗೊಂಡಿದ್ದವು. ಅವರ ದೃಢಕಾಯ ಶರೀರ ಸೊರಗಿ ಹೋಗಿತ್ತು; ಶರೀರದ ಒಂದೊಂದೂ ಎಲುಬುಗಳನ್ನು ಸುಲಭವಾಗಿ ಎಣಿಸಬಹುದಿತ್ತು.

ಅಟಲ್ ದಾ ಘಾಟ್ ಶಿಲೆಯ ಶೆಡ್ಡಿನ ಮನೆಯ ವರಾಂಡದಲ್ಲಿ ಕೂತು ಮಂಡಕ್ಕಿ ತಿನ್ನುತ್ತಿದ್ದರು.

"ನೀನಂತೂ ತುಂಬಾ ದೊಡ್ಡ ಮನುಷ್ಯನಾದೆ! ಸಾಕಷ್ಟು ಹೆಸರನ್ನೂ ಸಂಪಾದಿಸಿದ್ದೀಯಾ. ನನಗೆ ತುಂಬಾ ಸಂತೋಷವಾಯ್ತು" ನನ್ನ ನೋಡಿ ಅಟಲ್ ದಾರವರಿಗೆ ಖುಷಿಯಾಗಿತ್ತು.

"ಆದ್ರೆ ಅಟಲ್ ನಿನಗೇನಾಗಿದೆ?"

"ಯಾಕೆ? ಏನೂ ಆಗಿಲ್ಲವಲ್ಲ"

"ನಿನ್ನ ಆರೋಗ್ಯ ಇಷ್ಟೊಂದೇಕೆ ಹಾಳಾಗಿದೆ?"

"ಆದ್ರೆ ನನ್ನ ಮನಸ್ಸು ಗಟ್ಟಿಯಾಗಿದೆ. ಮನಸ್ಸೇ ಸರ್ವಸ್ವ"

"ಅಟಲ್ ದಾ ನಿನ್ನಿಂದ ನಮಗೆ ತುಂಬಾ ಆಸೆಯಿತ್ತು, ನಿರೀಕ್ಷೆಗಳಿದ್ದವು"

"ಏನೇ, ಕೇಳ್ತಿದ್ದೀಯೇನೇ? ಎಲ್ಲಿದ್ದೀಯೇ?" ಅಟಲ್ ದಾ ಮಂಡಕ್ಕಿ ತಿನ್ನುತ್ತ ಒಳಗೆ ಕಣ್ಣು ಹಾಯಿಸಿದರು.

ನಾನು ಸುತ್ತಮುತ್ತ ನೋಡಿದೆ. ಅಕಸ್ಮಾತ್ ಕೋಣೆಯೊಳಗಿನಿಂದ ಅಟಲ್ ದಾರವರ ಹೆಂಡತಿ ಹೊರ ಬಂದಳು.

"ಇವಳು ನಿನ್ನ ಅತ್ತಿಗೆ, ನಮಸ್ಕಾರ ಮಾಡು....

ನಾನಿವಳಿಗೆ ನಮಸ್ಕಾರ ಮಾಡುವುದೇ? ನನ್ನ ಮನಸ್ಸು ಕಹಿಯಾಯಿತು. ನಾನು ಅವಳೆಡೆಗೆ ದೃಷ್ಟಿ ಹರಿಸಿದೆ.

ಕಪ್ಪು ವರ್ಣದ ಕೃಶಕಾಯದ ಹೆಣ್ಣಾಗಿದ್ದ ಅವಳ ಕೈಯಲ್ಲಿ ಬಂಗಾರದ ಎರಡು ಬಳೆಗಳಿದ್ದವು. ಅಡುಗೆಮನೆಯಿಂದ ಅಟಲ್ ಕರೆ ಕೇಳಿ ನೇರವಾಗಿ ಇಲ್ಲಿಗೆ ಬಂದಿದ್ದಳು. ಮಿಲ್ಲಿನ ಒಂದು ದಪ್ಪ ಸೀರೆಯನ್ನು ಅವಳು ಉಟ್ಟಿದ್ದಳು.

ನಾನು ಕೈ ಜೋಡಿಸಿ ನಮಸ್ಕರಿಸಿದೆ.

ಅಟಲ್ ದಾ ನನ್ನ ಬಗ್ಗೆ ತಮ್ಮ ಹೆಂಡತಿಗೆ ಹೇಳಿದರು, "ಇವನ ಹೆಸರು ಹೇಳಿದರೆ ನಿನಗೆ ಗುರ್ತು ಸಿಗುತ್ತೆ. ಇವನು ನಮ್ಮ ಬದಾಮತಲ್ಲೆಯವನೇ. ಈಗ, ಇಲ್ಲಿ ಒಂದು ಸಾಹಿತ್ಯ-ಸಭೆಗೆ ಅಧ್ಯಕ್ಷನಾಗಿ ಬಂದಿದ್ದಾನೆ." ಕಡೆಗೆ ನನ್ನೆಡೆಗೆ ಹೊರಳಿ, "ಸ್ವಲ್ಪ ಮಂಡಕ್ಕಿ ತಿನ್ತೀಯಾ?" ಎಂದರು.

ಮನೆಯ ಬಡತನ, ಅಥವಾ ಕೊಳಕು ಸೀರೆ ಧರಿಸಿದ್ದ ಅಟಲ್ ದಾರವರ ಹೆಂಡತಿಯನ್ನು ನೋಡಿ ನನಗೆ ಹಾಗಾಗಿರಲಿಲ್ಲ— ಆದರೆ ಇವರ ಇಂಥಾ ಪರಿಸ್ಥಿತಿಯಲ್ಲಿ ನಾನು ಬಂದಿದ್ದು ಸರಿಯಲ್ಲವೆಂದು ಅನ್ನಿಸಿತ್ತು— ನಿಜ ಹೇಳಬೇಕೆಂದರೆ, ನನ್ನ ಆಗಿನ ಮನದ ಕಸಿವಿಸಿಗೆ ಇಂದಿಗೂ ನಾನು ಕಾರಣ ಹೇಳಲಾರೆ.

ಅಟಲ್‌ದಾ ರವರನ್ನು ಈ ಪರಿಸ್ಥಿತಿಯಲ್ಲಿ ಕಂಡು ಮನಸ್ಸು ರೋಧಿಸಿತ್ತು. ಬದಾಮತಲ್ಲೆಯ ಎಲ್ಲಾ ವಿದ್ಯಾರ್ಥಿಗಳ ಆದರ್ಶಪ್ರಾಯರಾಗಿದ್ದ ಅಟಲ್ ದಾ ಘಟ್‌ಶಿಲೆಯಲ್ಲಿ ಓರ್ವ ಉಪಾಧ್ಯಾಯರಾಗಿ ಜೀವನ ಸಾಗಿಸುತ್ತಿದ್ದಾರೆಂದು ಪ್ರತ್ಯಕ್ಷ ಕಂಡೂ ನಂಬಿಕೆಯುಂಟಾಗುತ್ತಿರಲಿಲ್ಲ. ಅಟಲ್ ದಾ ಏನಾಗಲು ತಾನೇ ಸಾಧ್ಯವಿರಲಿಲ್ಲ? ಅವರಲ್ಲಿ ಅದೆಷ್ಟು ಸಾಧ್ಯತೆಗಳಿದ್ದವು! ಮಾವನವರ ಸಂಪತ್ತಿನಿಂದಲೂ ಅಟಲ್ ದಾ ಅಗರ್ಭ ಶ್ರೀಮಂತರಾಗಬಹುದಿತ್ತು.

ಆದರೆ, ಅಟಲ್ ದಾ ಎಲ್ಲವನ್ನೂ ಕಳೆದುಕೊಳ್ಳಬೇಕಾಯಿತು.

ಯಾಕೆ? ಯಾಕೆ?

ಇದು ಅವರ ದುರಾದೃಷ್ಟವಾಗಿತ್ತೆ?

ಅಟಲ್ ದಾರವರ ವಿವಾಹದ ಮೊದಲ ದಿನದವರೆಗೂ ವಿಷಯ ಯಾರಿಗೂ ತಿಳಿದಿರಲಿಲ್ಲ. ನಮಗೂ ತಿಳಿದಿರಲಲ್ಲ.

(ಮುಂದುವರಿಯುವುದು)

ವಜ್ರವು ಎಲ್ಲ ಕಲ್ಲುಗಳನ್ನು ಕತ್ತರಿಸಬಲ್ಲದು. ಅಂತೆಯೇ ಶೀಲವು ಎಲ್ಲ ಗುಣಗಳನ್ನು ಮೀರಿ ನಿಲ್ಲಬಲ್ಲದು.

—ಬಾಟ್ಲರ್

ಪುಸ್ತಕ ಪರಿಚಯ

ಬೇಂದ್ರೆ : ನಾನು ಕಂಡಂತೆ, ನನಗೆ ಕಂಡಷ್ಟು. ಲೇಖಕರು : ಚಂದ್ರಶೇಖರ ಪಾಟೀಲ. ಪ್ರಕಟಣೆ: ಸಂಕ್ರಮಣ ಪ್ರಕಾಶನ ಧಾರವಾಡ-೫೮೦೦೦೧ ಪ್ರಥಮ ಮುದ್ರಣ ೧೯೯೫ ಬೆಲೆ ರೂ. ೧೦

ಈ ಶತಮಾನದ ಮಹತ್ವದ ಕವಿಗಳಲ್ಲೊಬ್ಬರಾದ ಅಂಬಿಕಾತನಯದತ್ತರನ್ನು ಕುರಿತು ಬರೆದ ಪದ್ಯಗಳು ; ಲೇಖನಗಳನ್ನು ಒಳಗೊಂಡಿರುವ ಸಂಕಲನ-ಬೇಂದ್ರೆ : ನಾನು ಕಂಡಂತೆ, ನನಗೆ ಕಂಡಷ್ಟು. ಕನ್ನಡ ನಾಡಿನಾದ್ಯಂತ "ಬೇಂದ್ರೆ ಶತಮಾನೋತ್ಸವ" ಜರುಗುತ್ತಿರುವ ಹೊತ್ತಿನಲ್ಲಿ ಪ್ರೊ॥ ಚಂದ್ರಶೇಖರ ಪಾಟೀಲರು ಈ ಕೃತಿಯನ್ನು ಪ್ರಕಟಿಸಿದ್ದಾರೆ. ಕೃತಿಯಾಗಿ ಈಗ ಬಂದಿದ್ದರು ಇದರಲ್ಲಿರುವ ಪದ್ಯಗಳು ಮತ್ತು ಲೇಖನಗಳು ಬಹಳ ಹಿಂದೆಯೇ ಬರೆದವುಗಳು. ೧೯೫೫ ರಿಂದ ೧೯೮೧ ರವರೆಗೆ ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಹಾಗೂ ಲೇಖಕರ ಕವನ ಸಂಕಲನಗಳಲ್ಲಿ ಇವು ಪ್ರಕಟವಾಗಿವೆ. ಆದ್ದರಿಂದ ಮುನ್ನುಡಿಯ ಹೊರತು ಇವರಲ್ಲಿನ ಪದ್ಯಗಳು ಮತ್ತು ಲೇಖನಗಳು ಮರು ಮುದ್ರಣಗೊಂಡು ಇಲ್ಲಿ ಸಂಕಲಿತವಾಗಿವೆ.

"ಬೇಂದ್ರೆ : ನಾನು ಕಂಡಂತೆ, ನನಗೆ ಕಂಡಷ್ಟು" ಎಂಬ ಶೀರ್ಷಿಕೆಯ ಬಗ್ಗೆ ಲೇಖಕರು ಹೇಳುವ—"ನಾನು ಕಂಡದ್ದಷ್ಟೇ ಪೂರ್ಣ ಸತ್ಯವಲ್ಲ ; ನನಗೆ ಕಂಡಷ್ಟೆ ಪೂರ್ಣ ಸತ್ಯವಲ್ಲ, ಹಾಗೆ ನೋಡಿದರೆ ಪೂರ್ಣ ಸತ್ಯ ಎಂಬುದೇ ಇಲ್ಲ. ನಮ್ಮ ನಮ್ಮ ನೆಲೆಯಲ್ಲಿ ನಾವು ನೋಡಿದ್ದು ನಮಗೆ ಕಂಡದ್ದು...." ಎಂಬ ಮಾತು ಬಹಳ ಒಪ್ಪಿತವಾಗುತ್ತದೆ. ಏಕೆಂದರೆ ಪೂರ್ಣ ಸತ್ಯ ಎಂಬುದೊಂದು ಆದರ್ಶ ; ಕಾಣುವುದಷ್ಟೆ ವಾಸ್ತವ, ಈ ಹಿನ್ನೆಲೆಯಲ್ಲಿ ಬೇಂದ್ರೆಯವರ ವ್ಯಕ್ತಿತ್ವದ ಚಿತ್ರಣ ಇಲ್ಲಿದೆ.

"ನಾನು ಬಯ್ಯುವುದು ಕೂಡ ಪ್ರೀತಿ ಇದ್ದಾಗ ಮಾತ್ರ" ಎನ್ನುವ ಆರೋಗ್ಯಕರ ಮನಸ್ಸಿನ ಪಾಟೀಲರನ್ನು ಸುಮಾರು ಎರಡು ದಶಕಗಳ ಕಾಲ ಈ ಕವಿಚೇತನ ಕಾಡಿದೆಯಲ್ಲ ಎಂದು ಆಶ್ಚರ್ಯವಾಗುತ್ತದೆ. ಬೇಂದ್ರೆಯಂತಹ ಮಹಾಚೇತನದಲ್ಲಿರುವ ವ್ಯಕ್ತಿತ್ವದಲ್ಲಿನ ಬಿರುಕು ಚಂಪಾ ಅಂತಹವರ ಸೃಜನಶೀಲ ಮನಸ್ಸು ಅರಳಲು ಸಹಾಯಕವಾದಂತಿದೆ. ಹೀಗಾಗಿ ಬೇಂದ್ರೆಯವರ ಸಾಹಿತ್ಯದ ಆಚೀಚಿನ ಬದುಕನ್ನು ಅನಾವರಣ ಮಾಡಿರುವ ಲೇಖಕರು ಸ್ವತಃ ಅನಾವರಣಗೊಂಡಿದ್ದಾರೆ, ಆದರೆ ಈ

ಆಸ್ವಾದನೆ ಪರಸ್ಪರ ವಿರುದ್ಧದ ನೆಲೆಗಳಲ್ಲಿ ಎಂಬುದಾಗಿ ಹೇಳಬಹುದು.

ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ, ಅವರನ್ನು ಸನ್ಮಾನಿಸಿದಾಗ, ಜಗಳವಾಡಿದಾಗ, ಅವರು ತೀರಿಕೊಂಡಾಗ ಬರೆದ ಲೇಖನಗಳು ಮತ್ತು ಬೇಂದ್ರೆಯವರ ಕಾವ್ಯ; ವ್ಯಕ್ತಿತ್ವಕ್ಕೆ ಮುಖಾಮುಖಿಯಾಗಿ ಪ್ರತಿಕ್ರಿಯಿಸಿರುವ ಪದ್ಯಗಳು (ಹೋಗಿ ಬರ್ತೀನಜ್ಜ, ಬೇಂದ್ರೆ! ಅಂಬಿಕಾತನಯದತ್ತ ....ಅಜಗಜ....) ಕವಿಯ ವ್ಯಕ್ತಿಗತ ಭಾವನೆಗಳನ್ನು ಕೊಂಚ ಕಟುವಾಗಿ ಹೇಳುತ್ತವೆ. ಕೆಲವೊಮ್ಮೆ "ಮಾನಾಭಿಮಾನ ಕೀರ್ತಿಶನಿಗಳ ಕವಿಯಾಗಿ ಬಹು ದೊಡ್ಡವರಾದ ಈ ಶಬ್ದಗಾರುಡಿಗ ಅಭಿಲಾಷೆಗಳು ಸೀಮಿತ ಪರಿಧಿಯನ್ನು ಮೆಟ್ಟಿನಿಲ್ಲಲು ಸಾಧ್ಯವಾಗಲಿಲ್ಲವೇಕೆ ಎಂಬ ವಿಷಾದ ಉಳಿದು ಬಿಡುತ್ತದೆ. ಪ್ರಸ್ತುತ ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಪ್ರಶಸ್ತಿ, ಪುರಸ್ಕಾರ, ಅಕಾಡೆಮಿ.......ಅವಕಾಶಗಳಿಗಾಗಿ ನಮ್ಮ ಗಣ್ಯ ಲೇಖಕರು ನಡೆಸುವ ಹುನ್ನಾರಗಳು....ನಡಾವಳಿಗಳನ್ನು ನೆನಪಿಗೆ ತರುತ್ತವೆ.

ಆದ್ದರಿಂದಲೇ ಇದೊಂದು ಚಾರಿತ್ರಿಕ ಕವಿ ವಿಮರ್ಶೆಯಾಗಿ ಕಂಡುಬರುತ್ತದೆ.

ಹೀಗಿದ್ದರೂ—"ದಿನ ನಿತ್ಯದ ಬದುಕಿನಲ್ಲಿ ಬೇಂದ್ರೆ ಒಬ್ಬ ಥೇಟ್ ಶೂದ್ರ" (ಪು ೩೭)

"ಎಷ್ಟೆಂದರೂ ಇವರು ನಮ್ಮವರು
ನಮ್ಮಂಥವರು" (ಪು. ೩೬)

"ಗಿಡಗಂಟೀಯಾ ಕೊರಳೊಳಗಿಂದ ಹಕ್ಕಿಗಳ ಹಾಡು" (ಪು. ೩೯) ಇಂಥ ಸಾಲುಗಳು ಓದುಗನ ಮನಸ್ಸಿನಲ್ಲುಳಿಯುತ್ತವೆ.

ಕುವೆಂಪು-೮೦ (ಒಂದು ಸಾಂಸ್ಕೃತಿಕ ನೆನಪು)—ಸಂ: ಶೂದ್ರ ಶ್ರೀನಿವಾಸ್; ಪ್ರಕಾಶನ: 'ಶೂದ್ರ' ನಂ. ೫೭೩. 'ಕೋಟೆಮನೆ' ೧೭ ನೇ ಕ್ರಾಸ್ ಇಸ್ರೋ ಲೇಔಟ್, ಬೆಂಗಳೂರು-೫೬೦೦೭೮. ಮೊದಲ ಮುದ್ರಣ-೧೯೮೫ ಪುಟ ೧೦೦; ಬೆಲೆ ೭ ರೂ.

ಈ ಶತಮಾನ ಕಂಡ ಕನ್ನಡದ ದೊಡ್ಡ ಚೈತನ್ಯ ಶ್ರೀಕುವೆಂಪು. ಜಾತಿ, ಮತ, ಧರ್ಮ, ದೇವರುಗಳ ಸೋಂಕಿಲ್ಲದಿರುವ ಪ್ರಕೃತಿ ಮತ್ತು ಆಧ್ಯಾತ್ಮವನ್ನು ತಮ್ಮ ಬರಹದ ಮೂಲಭಿತ್ತಿಯಾಗಿಸಿಕೊಂಡು ಶೂದ್ರತ್ವದ ಶುದ್ಧ ದನಿಯಾಗಿ ವೈಚಾರಿಕ ನೆಲೆಯಲ್ಲಿ ಮನುಷ್ಯನ ಹುಡುಕಾಟ ನಡೆಸಿದವರು ಕುವೆಂಪು. ಅವರ ಸಾಹಿತ್ಯ ಮತ್ತು ಸಾಂಸ್ಕೃತಿಕ ಧ್ಯಾನನೆ—'ಕುವೆಂಪು-೮೦' ಎಂಬ ಕೃತಿ.

ಕುಪ್ಪಳ್ಳಿಯ ಕುವೆಂಪು ಅವರ ಮನೆಯಲ್ಲಿ ೧೯೮೪ರ ಮಾರ್ಚಿ ತಿಂಗಳಿನಲ್ಲಿ ಶ್ರೀ ಜಿ. ಎಸ್. ಶಿವರುದ್ರಪ್ಪನವರ ಮಾರ್ಗದರ್ಶನದಂತೆ ಶೂದ್ರ ಶ್ರೀನಿವಾಸ್ ಮತ್ತು ಗೆಳೆಯರು ಏರ್ಪಾಟುಮಾಡಿದ್ದ ಕುವೆಂಪು ಕುರಿತ ವಿಚಾರ ಸಂಕಿರಣದ ಕೆಲವು ಲೇಖನಗಳ ಸಂಕಲನ ಇದು. ಈ ವಿಚಾರ ಸಂಕಿರಣದಲ್ಲಿ ನ್ಯಾಯಮೂರ್ತಿ ಶ್ರೀ ಎನ್. ಡಿ. ವೆಂಕಟೇಶ್, ಶ್ರೀ ಜಿ. ಎಸ್. ಶಿವರುದ್ರಪ್ಪ ಮುಂತಾದ ಹಿರಿಯರಿಂದ ಶ್ರೀ ಎಲ್. ಎನ್.

ಮುಕುಂದರಾಜ್, ಶ್ರೀ ಮೊಗಳ್ಳಿ ಗಣೇಶರಂಥ ಕಿರಿಯ ವಯಸ್ಸಿನ ಸಾಂಸ್ಕೃತಿಕ ಚಿಂತಕರವರೆಗೆ ಸುಮಾರು ಐವತ್ತು ಮಂದಿ ಸಾಹಿತಿಗಳು ಮತ್ತು ಸಾಹಿತ್ಯಾಸಕ್ತರು ಒಂದೆಡೆಸೇರಿ ಎರಡು ದಿನಗಳ ಕಾಲ ಕುವೆಂಪು ಅವರನ್ನು ಧ್ಯಾನಿಸಿದ ಕೆಲವು ಬರಹಗಳು ಇದರಲ್ಲಿವೆ.

ಕಾಡಿಗೂ-ನಾಡಿಗೂ ಸಂಬಂಧ ಸೇತುವಾಗಿರುವ ಕುವೆಂಪು ಅವರ ಕಾದಂಬರಿಗಳಿಂದ ಕಾನೂರುಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಹಾಗೂ ಚಿತ್ರಪ್ರಬಂಧವಾದ "ಮಲೆನಾಡಿನ ಚಿತ್ರಗಳು" ಕೃತಿಗಳನ್ನು ಅವು ರಚಿತವಾದ ಪರಿಸರದಲ್ಲಿಯೇ ನಿಂತು ವಿಶ್ಲೇಷಣೆ ನಡೆಸಲಾಗಿದೆ.

ಕುವೆಂಪು-೯೦ ಎಂಬ ಲೇಖನವಲ್ಲಿ ತಮ್ಮ ಬಾಲ್ಯದ ನೆನಪು, ಅನುಭವ ದುಗುಡ-ದುಮ್ಮಾನಗಳನ್ನು ಹೇಳುವುದರೊಂದಿಗೆ ಲಂಕೇಶರು ಗಾಂಧೀಜಿ ಮತ್ತು ಕುವೆಂಪು ಉಂಟುಮಾಡಿದ ಪರಿಣಾಮವನ್ನು ವಿಶ್ಲೇಷಿಸುತ್ತಾರೆ. ರಾಷ್ಟ್ರೀಯತೆ ಮತ್ತು ಆಧುನಿಕ ಮನುಷ್ಯನನ್ನು ವಿವರಿಸುತ್ತಾ ಗಾಂಧೀಜಿ ಅವರ ಗ್ರಾಮ ಸಮಾಜ ಕಲ್ಪನೆ ಮತ್ತು ಕುವೆಂಪು ಅವರ ಪ್ರಕೃತಿಪ್ರೇಮ ಎರಡನ್ನೂ ಸಮೀಕರಿಸುವುದಲ್ಲದೆ "ಗಾಂಧೀಜಿಯನ್ನು ಅಪ್ಪಟಗಾಂಧಿವಾದಿಗಳಿಂದ ರಕ್ಷಿಸಬೇಕಾಗಿರುವಂತೆಯೇ ಕುವೆಂಪು ಅವರನ್ನು ಕುವೆಂಪುವಾದಿಗಳಿಂದ ಉಳಿಸಬೇಕಾಗಿದೆ" ಎಂಬುದಾಗಿ ಎಚ್ಚರಿಸುತ್ತಾರೆ. "ತೊಂಬತ್ತು ವರ್ಷಕಾಲ ನಮ್ಮೊಂದಿಗೆ ಬದುಕಿರುವ ಕುವೆಂಪು ಓದುತ್ತಾ, ಬರೆಯುತ್ತಾ, ನಿದ್ರಿಸುತ್ತಾ, ಕನಸುತ್ತಾ, ಚರ್ಚಿಸುತ್ತಾ, ಪಾಠ ಹೇಳುತ್ತಾ, ಕಾವ್ಯ ಮತ್ತು ಕಾದಂಬರಿಗಳನ್ನು ರಚಿಸಿದ್ದಾರೆ; ಮೂಢನಂಬಿಕೆ, ಪುರೋಹಿತಶಾಹಿ, ಪಾಳೆಗಾರಿಕೆ, ಮೌಢ್ಯ, ಜಾತೀಯತೆ ಮುಂತಾದ್ದರ ವಿರುದ್ಧ ಸಮರ ಸಾರಿ ಹಲವು ತಲೆಮಾರಿನ ಯುವಕ ಯುವತಿಯರಿಗೆ ಹೊಸಧ್ಯೇಯವಾಗಿ, ಕ್ರಾಂತಿಯ ಸ್ಫೂರ್ತಿಯಾಗಿ ಬದುಕಿದ್ದಾರೆ" (ಪುಟ ೫) ಎನ್ನುವ ಲೇಖಕರ ಮಾತುಗಳು ಕುವೆಂಪು ಅವರ ಕಾಣ್ಕೆಯನ್ನು ಅತ್ಯಂತ ಅರ್ಥಪೂರ್ಣವಾಗಿ ತೆರೆದಿಡುತ್ತವೆ.

ಕುವೆಂಪು ಕಾದಂಬರಿಗಳಲ್ಲಿ ಆಧುನಿಕತೆಯ ಪ್ರಕ್ರಿಯೆ" ಎಂಬ ಲೇಖನದಲ್ಲಿ ಡಾ|| ಎಸ್. ಚಂದ್ರಶೇಖರ್ ಅವರು ವಸಾಹತುಶಾಹಿಯನ್ನು ಪ್ರತಿನಿಧಿಸುತ್ತಿದ್ದ ಬ್ರಿಟಿಷ್ ಸರ್ಕಾರವನ್ನು ಗಮನದಲ್ಲಿಟ್ಟುಕೊಂಡು ಕಾದಂಬರಿಗಳಲ್ಲಿ ಸ್ವಾತಂತ್ರ್ಯಪೂರ್ವದ ಭಾರತ ಚರಿತ್ರೆಯ ಹುಡುಕಾಟ ನಡೆಸಿದ್ದಾರೆ. "ಮೈಸೂರಿನ ಸಾಮಾಜಿಕ ಸುಧಾರಣೆಗಳು ಮತ್ತು ಕುವೆಂಪು ಅವರ ಮಲೆಗಳಲ್ಲಿ ಮದುಮಗಳು" ಎಂಬ ಶ್ರೀ ಅಶ್ವತ್ಥನಾರಾಯಣರ ಲೇಖನಕೂಡ ಇದೇ ಬಗೆಯ ಚಿಂತನಸ್ರುವ್ಯದಿಂದ ಕೂಡಿದೆ. ಚಾರಿತ್ರಿಕ ವಿಮರ್ಶೆಯ ದೃಷ್ಟಿಯಿಂದ ಈ ಲೇಖನಗಳು ಗಮನಾರ್ಹವಾಗಿವೆ.

ವರ್ಡ್ಸ್‌ವರ್ತ್ ಕವಿಯ "ಟಿಂಟರ್ನ್ ಅಬೆ" ಪದ್ಯದೊಂದಿಗೆ "ಮಲೆನಾಡಿನ ಚಿತ್ರಗಳು" ಕೃತಿಯನ್ನು ತೌಲನಿಕವಾಗಿ ನೋಡಿರುವ ಶ್ರೀ ಸಿ. ನಾಗಣ್ಣನವರು "ಮಲೆನಾಡಿನ ಚಿತ್ರಗಳು ಒಂದು ಪುನರ್ವಿಕ್ಷಣೆ"ಯ ಹೆಸರಿನಲ್ಲಿ ಮಲೆನಾಡಿನ ಚಿತ್ರಗಳನ್ನು ಹೊಸ ಬಗೆಯಲ್ಲಿ ವರ್ಣನಾತ್ಮಕ ವಿಶ್ಲೇಷಣೆ ನಡೆಸಿದ್ದಾರೆ.

"ಕಾಡಿನ ಕೊಳಲಿದು ಕಾಡ ಕವಿಯು ನಾನಾಡಿನ ಜನರೊಲಿದಾಲಿಪುದು" ಎಂಬ ಬಿನ್ನಹದೊಂದಿಗೆ ಕಾವ್ಯಲೋಕ ಪ್ರವೇಶಿಸಿದ ಕುವೆಂಪುವನ್ನು 'ಕಾಡಿನ ಕವಿ' ಎಂದು ಪ್ರೊ॥ ಜಿ. ಎಸ್. ಶಿವರುದ್ರಪ್ಪನವರು ಕರೆದಿದ್ದಾರೆ. ಕನ್ನಡ ಸಾಹಿತ್ಯ ಸಂದರ್ಭದ ಇತರ ಬರಹಗಾರರಿಂದ ಬೇರೆಯಾಗಿ ನಿಲ್ಲುವ ಕುವೆಂಪು ಅವರನ್ನು ವಿಚಾರಪರವಾದ ಧೋರಣೆಯುಳ್ಳ ಅವರ ಅಭಿವ್ಯಕ್ತಿಯಲ್ಲಿ ಗರ್ಭೀಕರಿಸಿಕೊಂಡಿರುವ ಸಾಮಾಜಿಕ ಕಾಳಜಿಯನ್ನು ಮುಖ್ಯವಾಗಿ ಗುರ್ತಿಸುತ್ತಾರೆ. "ರಾಷ್ಟ್ರದ ಪರಂಪರೆಯನ್ನು ಹಾಗೂ ಚರಿತ್ರೆಯನ್ನು ಆರೋಗ್ಯ ಪೂರ್ಣವಾದ ಚರ್ಚೆಗೆ ಗುರಿಪಡಿಸುತ್ತಾ ತನ್ನ ಕಾಲಮಾನದ ಯುಗಧರ್ಮಕ್ಕೆ ತೀವ್ರವಾಗಿ ಸ್ಪಂದಿಸಿದವರಲ್ಲಿ ಕುವೆಂಪು ಅಗ್ರಗಣ್ಯರು" ಎನ್ನುವ ಜಿ. ಎಸ್. ಎಸ್. ಅವರ ಮಾತು ಕುವೆಂಪು ಸಾಹಿತ್ಯಾಭ್ಯಾಸಿಗಳಿಗೆ ಹೊಸ ದೃಷ್ಟಿಕೋನವನ್ನು ನೀಡುವಂತಹದ್ದಾಗಿದೆ.

ಕುವೆಂಪು ಅವರ ವಿಶ್ವಮಾನವ ಸಂದೇಶವನ್ನು ಖಗೋಳ ವಿಜ್ಞಾನದ ನೆಲೆಯಲ್ಲಿ ಕಾಣಿಸುತ್ತಾ ಶ್ರೀ ಬಿ. ವಿ. ವೀರಭದ್ರಪ್ಪನವರು "ಕುವೆಂಪು ಅವರು ಸಾಂಪ್ರದಾಯಿಕ ಜಾತಿ ಭೇದವನ್ನು ಅಲ್ಲಗಳೆಯುತ್ತಾರೆ ಮತ್ತು "ಮಾನವ ಜಾತಿ ತಾನೊಂದೆ ವಲಂ" ಎಂಬ ಪಂಪನ ಉದಾತ್ತವಾಣಿಯನ್ನು ಎತ್ತಿಹಿಡಿಯುತ್ತಾರೆ. ಮನುಷ್ಯ–ಮನುಷ್ಯರ ನಡುವೆ ಅಡ್ಡಗೋಡೆಗಳನ್ನು ಸೃಷ್ಟಿಸಿದ ಮತಮೌಢ್ಯವನ್ನು ತಿರಸ್ಕರಿಸುತ್ತಾರೆ ಮತ್ತು ಪ್ರತಿಯೊಬ್ಬರೂ ತಮ್ಮ ಸಾಧನೆ ಶಿಳಿವುಗನುಗುಣವಾಗಿ ತಮ್ಮದೇ ಆದ ಮತವನ್ನು ಕಂಡುಕೊಳ್ಳಲು ಬಯಸುತ್ತಾರೆ, ಹಿಂದಿನ ಮಹಾತ್ಮರ ಬೋಧನೆಗಳು ಸಾಂಸ್ಥೀಕೃತ ಧರ್ಮಗಳಾಗಿ ಪರಿವರ್ತವಾಗಿರುವುದನ್ನು ಕಂಡು ಮರುಗುತ್ತಾರೆ ಮತ್ತು ಜಗತ್ತಿನ ಎಲ್ಲ ಮಾನವರನ್ನು ತಬ್ಬಿಕೊಳ್ಳುವ ವಿಶ್ವಧರ್ಮಕ್ಕಾಗಿ ಹಂಬಲಿಸುತ್ತಾರೆ" (ಪುಟ ೪) ಎನ್ನುವ ಮಾತುಗಳು ಕುವೆಂಪು ಅವರ ವಿಶ್ವಮಾನವ ಕಲ್ಪನೆಯಲ್ಲಿ ಅಡಕವಾಗಿರುವ ಉದಾತ್ತತೆಯನ್ನು ಮತ್ತು ಮನುಷ್ಯ ಪ್ರೀತಿಯನ್ನು ಗ್ರಹಿಸಲು ಎಡೆಮಾಡಿಕೊಡುತ್ತವೆ. ಇದಕ್ಕೆ ಮುಖಾಮುಖಿಯಾಗಿ ನಿಲ್ಲುವ "ಜೈನ, ವೀರಶೈವ, ಬ್ರಾಹ್ಮಣ ಪರಂಪರೆಗೆ ಹೊಸಕಸುವು ಹೊಸದರ್ಶನ ಕೊಟ್ಟ ಕುವೆಂಪು ಅಲ್ಲಿಂದ ಸಿಡಿದು ಹೊರಬಂದಿದ್ದರೆ ಶೂದ್ರ ಜಗತ್ತಿಗೆ ಅಪಾರವಾದ ಲಾಭವೇ ಆಗುತಿತ್ತು, ಹಾಗೆ ಆಗಲಿಲ್ಲ ನೆಂಬುದೇ ನನ್ನ ಕೊರಗು" (ಪುಟ ೮೭) ಎನ್ನುವ ಶ್ರೀ ನೋ. ಸಂ. ಶಿ. ಅವರ ಕೊರಗಿನ ಹಿಂದಿರುವ ಅರಿವಿನ ಕೊರತೆಯೆ? ವಿಚಾರ ಮಾಡಬೇಕಾದುದಾಗಿದೆ.

ಶ್ರೀ ಕೆ. ಪಿ. ಪೂರ್ಣಚಂದ್ರ ತೇಜಸ್ವಿ ಅವರ ಒಡನಾಟದಲ್ಲಿ, ಗೆಳೆತನದಲ್ಲಿ ಕುವೆಂಪು ಅವರನ್ನು ಸಾಮಿಪ್ಯದಿಂದ ಕಂಡಿರುವ ಶ್ರೀ ಕೆ. ರಾಮದಾಸ್ ಅವರು ವೈಯಕ್ತಿಕ ನೆನಪುಗಳ ಆವರಣದಲ್ಲಿ ಕುವೆಂಪು ಸಾಮಿಪ್ಯದ ಸಾಮಾನ್ಯ ಚಿತ್ರಗಳನ್ನು ನೀಡಿದ್ದಾರೆ.

ಕೃತಿಯ ಮುಖಪುಟವು ಕುವೆಂಪು ಅವರ ರೇಖಾಚಿತ್ರವನ್ನು ಹೊಂದಿದ್ದು ಅಂದವಾಗಿದೆ. ಹೀಗಿದ್ದರೂ ಕುವೆಂಪು ಪುತ್ಥಳಿಯ ಭಾವಚಿತ್ರದ ಒಂದು ಮಾದರಿಯನ್ನು ಪ್ರತಿ

ಲೇಖನದ ಮೊದಲು; ಹತ್ತು ಕಡೆಯಲ್ಲಿ ಅಚ್ಚು ಮಾಡುವ ಅಗತ್ಯವಾದರೂ ಏನಿತ್ತು ? ಎನಿಸುತ್ತದೆ.

ಕುವೆಂಪು ಬದುಕಿರುವಾಗ ನಡೆಸಿದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಲೇಖನಗಳು ಅವರು ತೀರಿಕೊಂಡು ವರ್ಷ ಸಮೀಪಿಸುತ್ತಿರುವ ಈ ಹೊತ್ತಿನಲ್ಲಿ ಪ್ರಕಟಗೊಂಡಿವೆ. ಕುವೆಂಪುವನ್ನು ವೈಯಕ್ತಿಕ ನೆಲೆಯಲ್ಲಿ; ಸಾಹಿತ್ಯಕ ನೆಲೆಯಲ್ಲಿ ವಿಶ್ಲೇಷಣೆ ಮಾಡಿರುವ ಈ ಕೃತಿ ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಅಧ್ಯಯನಾರ್ಹವಾಗಿದೆ. ಒಟ್ಟಾರೆ ದೃಷ್ಟಿಯಿಂದ "ಕುವೆಂಪು ೯೦" ಒಂದು ಉತ್ತಮ ಕೃತಿ.

ಹಾಲತಿ ಸೋಮಶೇಖರ್

* * * *

ಮೌಲ್ಯಮಾಪನ ಮತ್ತು ಕಿರು ಪರೀಕ್ಷೆಗಳು — ಸಂಪಾದಕರು : ಎನ್. ಎಸ್. ಮಾರುತಿ ಟಿ. ವೆಂಕಟೇಶ ; ಅನುವಾದಕರು : ಸಿ. ನಾಗಣ್ಣ ; ಪುಟಗಳು : vi + ೩೮ ; ಬೆಲೆ : ನಮೂದಿಸಿಲ್ಲ ; ಪ್ರಕಟಣೆ : ರಾಜ್ಯ ಸಂಪನ್ಮೂಲ ಕೇಂದ್ರ, (ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ), ಕುವೆಂಪು ನಗರ, ಮೈಸೂರು–೫೭೦ ೦೨೩.

ವಯಸ್ಕರ ಶಿಕ್ಷಣ ನಿರ್ದೇಶನಾಲಯ, ನವ ದೆಹಲಿ. ಇವರು 'ದವೆ ಸಮಿತಿ ವರದಿ' ಯನ್ನು 'Evaluation of Learning out comes in Literacy Campaign' ಶೀರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ. ಈ ವರದಿಯು ಕನ್ನಡ ಅನುವಾದವೇ 'ಸಾಕ್ಷರತಾ ಆಂದೋಲನದಲ್ಲಿ ಕಲಿಕಾ ಪ್ರಗತಿಯ ಮೌಲ್ಯಮಾಪನ ಮತ್ತು ಕಿರುಪರೀಕ್ಷೆಗಳು.' ಈ ಕೃತಿಯ ವಿಷಯಾನುಕ್ರಮಣಿಕೆಯು ೨ ಭಾಗ ಹೊಂದಿದ್ದು. ಭಾಗ-೧ ರಲ್ಲಿ ೩ ಅಧ್ಯಾಯಗಳಿಗೆ ವಿಷಯದ ಹಂಚಿಕೆಯಾಗಿದೆ.

ಭಾಗ–I

ಅಧ್ಯಾಯ ೧

ಪೀಠಿಕೆ, ಹಿನ್ನೆಲೆ, ತಂಡದ ರಚನೆ, ನಿಯಮಾವಳಿಗಳು, ಗುಂಪಿನ ಚರ್ಚೆ, ಗುಂಪಿನ ತೀರ್ಮಾನ ಈ ಅಂಶಗಳನ್ನು ಒಳಗೊಂಡಿದೆ.

ಅಧ್ಯಾಯ ೨

ಘೋಷಣೆ ಅದರ ಮಹತ್ವ, ಅಗತ್ಯ ಹಾಗೂ ವಿಧಾನಗಳು, ಸಾಮಾಜಿಕ ಹೊಣೆಗಾರಿಕೆ. ಸಂಘಟನಕಾರರಿಗೆ ಮರುಮಾಹಿತಿ (feed back) ರಾಜಕೀಯ ಬೆಂಬಲ, ಶಿಕ್ಷಣದ ಬಗ್ಗೆ ಸಾಮಾನ್ಯ ತಿಳಿವಳಿಕೆ, ಸಾಧನೆಗಳನ್ನು ಹಂಚಿಕೊಳ್ಳುವುದು, ಶ್ರೇಣಿಯಲ್ಲಿ ಕಾರ್ಯಸಾಧನೆ, ಏಕರೂಪ ಅನ್ವಯ, ಗರಿಷ್ಟ ಸಾಧನೆ Vs ಬೆಳವಣಿಗೆ, ಟಿಎಲ್‌ಸಿಯ ಅಭಿವೃದ್ಧಿ ಪರಿಣಾಮ, ಸಂಪೂರ್ಣ ಎನ್ನುವುದನ್ನು ಸ್ಪಷ್ಟ ಪಡಿಸುವುದು. ಇವುಗಳನ್ನು ಒಳಗೊಂಡಿದೆ.

ಅಧ್ಯಾಯ ೩

ಕಲಿಕಾ ಪ್ರಗತಿಯನ್ನು ಮೌಲ್ಯಮಾಪನ ಮಾಡುವ ವಿಧಾನ, ಮಾರ್ಗದರ್ಶೀ ತತ್ವಗಳು, ಮೌಲ್ಯಮಾಪನ ಮಾಡಬೇಕಾದ

ಅಂಶಗಳು ಯಾವುವು? ಮೌಲ್ಯಮಾಪನ ಮಾಡುವುದು ಹೇಗೆ ಅಥವಾ ಯಾವ ವಿಧಾನ ಅನುಸರಿಸಬೇಕು?, ಪಠ್ಯವಿನ್ಯಾಸ, ಪ್ರಾಮುಖ್ಯತೆ (ಆದ್ಯತೆ) ಸೀಮಾ, ಬಿಂದು, ಮೂಲ ಚೌಕಟ್ಟಿನಲ್ಲಿ ಹೊಂದಾಣಿಕೆ, ದಿಗಿಲಿಲ್ಲದ ಪರೀಕ್ಷೆ: ಆಡಳಿತ ನಿರ್ವಹಣೆಯ ವಿಧಾನ, ಪರೀಕ್ಷಾ ಫಲಿತಾಂಶಗಳು, ಮೌಲ್ಯ ಮಾಪನ ಮಾಡುವವರು ಯಾರು?, ಕಿರು ಪರೀಕ್ಷಾ ರಚನೆಯ ಒಂದು ಉದಾಹರಣೆ, ಸಾಕ್ಷರತಾ ಪರೀಕ್ಷೆಯ ನೀಲಿ ನಕ್ಷೆ ಈ ಅಂಶ ಗಳು ಸೇರಿರುತ್ತವೆ.

ಭಾಗ–II

ಕಿರು ಪರೀಕ್ಷೆಗಳು ಮತ್ತು ಮೌಲ್ಯ ಮಾಪನ.

(i) ಕಿರು ಪರೀಕ್ಷೆಗಳು: ಉದ್ದೇಶ ಹಾಗೂ ಮಹತ್ವ, ಕಿರು ಪರೀಕ್ಷೆಗಳ ಗುಣಮಟ್ಟ, ಪರೀಕ್ಷೆಗಳ ಸಂಖ್ಯೆ.

(ii) ಮೌಲ್ಯಮಾಪನ: ಮೌಲ್ಯಮಾಪ ನದ ಪ್ರಾಮುಖ್ಯತೆ, ಪ್ರಶ್ನೆಗಳ ಸಾಮಾನ್ಯತೆ, ಮೌಲ್ಯಮಾಪನ ಪತ್ರಿಕೆಗೆ ಮಾರ್ಗದರ್ಶಿಸೂಚಿ, ಅಂಕ ಗಳ ವಿತರಣೆ ಹಾಗೂ ಪ್ರಶ್ನೆಗಳ ಪ್ರಶ್ನೆ ಗಳ ಮಾದರಿ, ಪ್ರಶ್ನೆಗಳ ವಿನ್ಯಾಸ ಹಾಗೂ ಪ್ರಮಾಣ ಪತ್ರ, ಪರೀಕ್ಷಾ ಪೂರ್ವ ಸಾಮಗ್ರಿ, ಪೂರ್ವ ಪರೀಕ್ಷಾ ವಿಧಾನದ ಮಾದರಿ ಎಂಬ ಅಂಶ ಗಳನ್ನು ಒಳಗೊಂಡಿದೆ.

—ಪ್ರಸ್ತುತ ರಾಷ್ಟ್ರವ್ಯಾಪ್ತ ಸಾಕ್ಷರತಾ ಆಂದೋಲನವು ವಿವಿಧ ಹಂತದಲ್ಲಿ ನಡೆ ಯುತ್ತಿದ್ದು, ಆಂದೋಲನದಲ್ಲಿ ತೊಡ ಗಿಸಿಕೊಂಡಿರುವ ಸ್ವಯಂಸೇವಕರಿಗೆ, ಸಂಘಟಕರಿಗೆ,ಅನುಭವಶೀಲರಿಗೆ ಈ ಕಿರು ಹೊತ್ತಿಗೆಯು ಮಾರ್ಗ ಸೂಚಿಯಾಗಿದೆ. ಸಾಕ್ಷರತಾ ಆಂದೋಲನದಲ್ಲಿ ತೊಡಗಿ ರುವ ಕೆಳ ಹಂತದ ಕಾರ್ಯಕರ್ತರೂ ಸಹ ಅರ್ಥಮಾಡಿಕೊಳ್ಳುವಂತಹ ಸುಲಭ ಶೈಲಿಯ ಅನುವಾದವಾಗಿದೆ. ಆಕರ್ಷಕ ವಿನ್ಯಾಸದೊಂದಿಗೆ ಉತ್ತಮ ಕಾಗದದಲ್ಲಿ ಅಂದವಾಗಿ ಮುದ್ರಣ ದೋಷ ಇಲ್ಲದೆ ಈ ಪುಸ್ತಿಕೆಯನ್ನು ಹೊರ ತಂದಿರುವ ರಾಜ್ಯ ಸಂಪನ್ಮೂಲ ಕೇಂದ್ರದ ಕೆಲಸ ಸ್ತುತ್ಯರ್ಹವಾದುದು.

ಚಂದ್ರಶೇಖರಾರಾಧ್ಯ

ದೇವರು ಸಂಪತ್ತಿನ ಹಿಂದೆ ಸುಖ ದುಃಖಗಳೆರಡನ್ನೂ ಬಿಟ್ಟಿರುತ್ತಾನೆ. ಜ್ಞಾನಿ ಯಾದವರು ತಮಗೆ ಯೋಗ್ಯವಾದುದನ್ನೇ ಆರಿಸಿಕೊಳ್ಳುತ್ತಾರೆ.

—ಸುಭಾಷಿತ

ಅಪತ್ಕಾಲವನ್ನು ತೆಗಳಬೇಡಿ, ಅದು ನಮ್ಮ ಬಾಳಿಗೆ ಮಧುರವಾದ ಉಪಯೋಗ ವನ್ನು ನೀಡುತ್ತದೆ.

—ಶೇಕ್ಸ್‌ಪಿಯರ್

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಡಾ|| ದೇ. ಜವರೇಗೌಡ, ವಿಶ್ರಾಂತ–ಉಪಕುಲಪತಿಗಳು
'ಕಲಾ ನಿಲಯು', ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–೧೨

೨. ಸಿ. ನಾಗಣ್ಣ, ಪ್ರಾಧ್ಯಾಪಕರು
ಇಂಗ್ಲೀಷ್ ವಿಭಾಗ, ಮಹಾರಾಜ ಕಾಲೇಜು, ಮೈಸೂರು.

೩. ಶ್ರೀಪಾದ ಭಟ್
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬

೪. ಜಿ. ಟಿ. ರಾಘವೇಂದ್ರ
'ದ್ವಾರಕಾ' ಸರ್ಕಾರಿ ಕಿರಿಯ ಕಾಲೇಜ್ ರಸ್ತೆ, ಮಡಿಕೇರಿ–೫೭೧೨೦೧

೫. ಜವರನಹಳ್ಳಿ ಸಿದ್ದಪ್ಪ
ನಂ. ೧೭೬, ಎಂ.ಐ.ಜಿ. ಮನೆ
'ಕೆ' ಬ್ಲಾಕ್, ದಟ್ಟಗಳ್ಳಿ, ರಾಮಕೃಷ್ಣನಗರ, ಮೈಸೂರು

೬. ಡಾ|| ಕರವೀರಪ್ರಭು ಕ್ಯಾಲಕೊಂಡ, ವೈದ್ಯಾಧಿಕಾರಿ
೨೦೩, ಶಸ್ತ್ರಚಿಕಿತ್ಸಾ ವಿಭಾಗ, ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ–೫೮೦೦೨೨

೭. ಡಾ|| ಎಚ್. ಡಿ. ಚಂದ್ರಪ್ಪಗೌಡ, ಎಂ.ಎಸ್.
೬೪, ಶ್ರೀನಿವಾಸ ನಿಲಯ, ಮಿಷನ್ ಕಾಂಪೌಂಡ್, ಶಿವಮೊಗ್ಗ–೫೭೭೨೦೧

೮. ಎಸ್. ರಘು, ನಂ. ೪೪, ೧೨ ನೇ ಕ್ರಾಸ್, ನವಿಲು ರಸ್ತೆ
ಕುವೆಂಪುನಗರ, ಮೈಸೂರು–೫೭೦೦೨೩

೯. ಡಾ|| ಎನ್. ಚಂದ್ರಶೇಖರ
ನಂ. ೧೮, ೩ ನೇ ಮೇನ್, ಪರಮಹಂಸ ರಸ್ತೆ, ಯಾದವಗಿರಿ, ಮೈಸೂರು–೨೦

೧೦. ಡಾ|| ಕೆ. ವಿ. ರಾಘವೇಂಧ್ರರಾವ್, ನಂ. ೨೮೭೭/೧೩,
ಚಾಮುಂಡಿಪುರಂ ಬಸ್ ನಿಲ್ದಾಣ ಎದುರು, ಮೈಸೂರು–೫೭೦೦೦೪

೧೧. ಸರಸ್ವತಿ ಬಡೆಕ್ಕಿಲ C/o ಬಿ. ಸುರೇಶಭಟ್
ನಂ. ಎಂ–೪೭, ೩ನೇ ಹಂತ, ಜೆ.ಟಿ.ಕೆ. ಬಡಾವಣೆ, ಕುವೆಂಪುನಗರ
ಮೈಸೂರು–೫೭೦ ೦೨೩

೧೨. ಡಾ|| ಕೆ. ಎಸ್. ಮಂಜ
ಡಿ.ಎಫ್.ಆರ್.ಎಲ್. ಸಿದ್ಧಾರ್ಥನಗರ, ಮೈಸೂರು–೫೭೦೦೧೧

೧೩. ಹಾಲತಿ ಸೋಮಶೇಖರ್
'ಮೌನ' ಎಲ್. ೧೯, ೨ ನೇ ಹಂತ, ಕುವೆಂಪುನಗರ, ಮೈಸೂರು–೫೭೦೦೨೩

೧೪. ಚಂದ್ರಶೇಖರಾರಾಧ್ಯ, ಸಂಪಾದಕ
ಕ.ರಾ.ವ.ಶಿ.ಸ, ಮೈಸೂರು–೫೭೦ ೦೦೬

Reg. No. KRNN.29 / WPP 6

LICENCE No. 21
LICENCED TO POST WITH PAYMENT

ತಲಾ ರೂ. ೨-೫೦ ದರದಲ್ಲಿ ಸಮಿತಿಯ ಕೆಳಕಂಡ ಪ್ರಕಟಣೆಗಳು ದೊರೆಯುತ್ತವೆ.

ಪ್ರತಿ ಪುಸ್ತಕಗಳು ಅಷ್ಟದಳದಲ್ಲಿ ಗರಿಷ್ಠ ೩೨ ಪುಟಗಳನ್ನು ಹೊಂದಿರುತ್ತವೆ. ಅಂಚೆ ಮೂಲಕ ಪುಸ್ತಕಗಳನ್ನು ಅಪೇಕ್ಷಿಸುವವರು, ಅಂಚೆ ವೆಚ್ಚ ಪ್ರತ್ಯೇಕವಾಗಿ ಕಳುಹಿಸಬೇಕು.

ಪುಟ್ಟಾಚಾರಿಯ ಕಾಡುಕೋಳಿ—ಕುವೆಂಪು
ಗೋಪಾಲಕೃಷ್ಣ ಗೋಖಲೆ—ಡಾ|| ದೇ. ಜವರೇಗೌಡ
ಗುರುದೇವ ರವೀಂದ್ರರು—ಡಾ|| ಹಾ. ಮಾ. ನಾಯಕ
ಮಾಸೌವಿ ಪದಗಳು—ಕೆ. ಆರ್. ಲಿಂಗಪ್ಪ
ಡಾ|| ಜಕೀರ್ ಹುಸೇನ್—ಭಾರತೀಸುತ
ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರ ಭಟ್ಟ
ಪುರಾಣಿಗಳ ರಾಜ್ಯ—ಎಸ್. ಅನಂತನಾರಾಯಣ
ನಂಬಿಕೆಯ ನಂಟ—ದೇವನೂರು ಮಹಾದೇವ
ನಾಗಮಹಾಶಯ—ಉ. ಕಾ. ಸುಬ್ಬರಾಯಾಚಾರ್
ತಿರುವಲ್ಲವರ್—ಸಿಂಪಿ ಲಿಂಗಣ್ಣ
ಸೀತಾ ವನವಾಸ—ತ. ಸು. ಶಾಮರಾವ್
ದ್ರೌಪದಿಯ ಭಂಗ—ಕೂಡಲಿ ಚಿದಂಬರಂ
ಬೆಳಗೊಳದ ಗೊಮ್ಮಟೇಶ—ಜೀ. ಶಂ. ಪರಮಶಿವಯ್ಯ
ಬದುಕು ಬಂಗಾರ—ಕ್ಯಾತನಹಳ್ಳಿ ರಾಮಣ್ಣ
ಕೂಡಲ ಸಂಗಮ—ಈಶ್ವರಚಂದ್ರ ಚಿಂತಾಮಣಿ
ಜಪಾನ್—ಸಿಸು ಸಂಗಮೇಶ
ನನ್ನ ಮಗುವಿನ ಶಾಲೆ—ವಿರ್ಜಿ ಅಣ್ಣಾ ರಾಯ
ನಾಗರಮರಿ—ತ.ರಾ.ಸು
ಅಲ್ಲಮ ಪ್ರಭು—ಡಾ|| ಪ್ರಭುಶಂಕರ್
ಸಾಕ್ರೆಟೀಸ್—ಡಾ|| ಸಿ. ಪಿ. ಕೃಷ್ಣಕುಮಾರ್
ಶಕುಂತಲೆ—ವಿ. ಸೀತಾರಾಮಯ್ಯ
ಮಾರಿಯ ಕಲ್ಲು—ಕೆ. ಎಸ್. ನರಸಿಂಹಸ್ವಾಮಿ
ಶಾಲುಸಾಬಿ—ಗೊರೂರು ರಾಮಸ್ವಾಮಿ ಅಯ್ಯಂಗಾರ್
ನಳಚರಿತ್ರೆಯ ಸಂಗ್ರಹ—ಎಚ್. ಎಂ. ಶಂಕರನಾರಾಯಣರಾವ್
ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿ

Edited by Chandrashekhararadhya, Printed by A. D. Nanjunda Swamy, Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.

Phone: 512485